
ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

ಜುಲೈ 23, 2008 ರೂ. 12/-

ಮಂಗಳೂರು 'ಮಂಗ'ನಗರ ಪಾಲಿಕೆ




ಕಾಸು ಇದ್ದೋನೆ ಬಾಸು

...ಟು ಕೊಟ್ಟವನೇ ಮಿತ್ರ



ರವಿಸುಬ್ರಮಣ್ಯ

ವೃದ್ಧೆಗೆ ವಂಚನೆ



ರೈತರ ನೀರು ಜಿಂದಾಲ್ ಬಾಯಿಗೆ

ಕಾರವಾರ-ಕೊಪ್ಪಳ

ಕಾಂಗ್ರೆಸ್, ಜೆಡಿಎಸ್

ಖಾಲಿ!



ಭುಗಿಲೆದ್ದ ಭಿನ್ನಮತ

ನ್ಯಾಯಾಲಯದಲ್ಲಿ ಗೊಂದಲ



ಇತ್ತೀಚೆಗೆ 'ಡಿಸ್‌ಆರ್ಡರ್ ಇನ್ ದಿ ಕೋರ್ಟ್ಸ್ ಆಫ್ ಅಮೆರಿಕಾ' ಎಂಬ ಪುಸ್ತಕ ಬಿಡುಗಡೆಗೊಂಡಿದ್ದು ಎಲ್ಲರಿಗೂ ಸಕತ್ ಮಜಾ ನೀಡುತ್ತಿದೆ. ಏಕೆಂದರೆ ಈ ಪುಸ್ತಕವನ್ನು ನ್ಯಾಯಾಲಯಗಳಲ್ಲಿನ ಆಗುಹೋಗುಗಳನ್ನು ವರದಿ ಮಾಡುವ ಪತ್ರಕರ್ತರೇ ಬರೆದಿದ್ದು ವಾದ, ವಿವಾದದ ಸಮಯದಲ್ಲಿ ವಕೀಲರು ಕೇಳಿದ್ದ ಪ್ರಶ್ನೆಗಳನ್ನು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅವುಗಳಲ್ಲಿ ಹಲವನ್ನು ನಿಮಗಾಗಿ ಇಲ್ಲಿ ನೀಡುತ್ತಿದ್ದೇವೆ.

ವಕೀಲ: ಡಾಕ್ಟರ್, ಸಾಮಾನ್ಯವಾಗಿ ರಾತ್ರಿ ನಿದ್ದೆ ಮಾಡುತ್ತಿರುವಾಗ ವ್ಯಕ್ತಿಯೊಬ್ಬ ಮರಣ ಹೊಂದಿದರೆ ಅದರ ಬಗ್ಗೆ ಅವನಿಗೆ ಗೊತ್ತಾಗುವುದು ಮಾರನೆ ಬೆಳಗ್ಗೆ ಆತ ಎದ್ದಾಗಲೇ ಅಲ್ಲವೇ?

ಸಾಕ್ಷಿದಾರ: ನೀನು ನಿಜವಾಗಲು ಕಾನೂನು ಪದವಿ ಪಡೆದಿದ್ದೀಯಾ?

* * * *

ವಕೀಲ: ನಿನ್ನ ಈ ಫೋಟೋ ತೆಗೆದಾಗ ನೀನು ಅಲ್ಲಿದ್ದೆಯಾ?

ಸಾಕ್ಷಿದಾರ: ನಿಮ್ಮ ಪ್ರಶ್ನೆಯನ್ನು ಮತ್ತೆ ಕೇಳುತ್ತೀರಾ.

* * * *

ವಕೀಲ: ಆಕೆಗೆ ಮೂರು ಮಕ್ಕಳು. ಹೌದಾ?

ಸಾಕ್ಷಿದಾರ: ಹೌದು.

ವಕೀಲ: ಅವರಲ್ಲಿ ಎಷ್ಟು ಜನ ಗಂಡು ಮಕ್ಕಳು?

ಸಾಕ್ಷಿದಾರ: ಒಂದೂ ಇಲ್ಲ.

ವಕೀಲ: ಹಾಗಾದರೆ ಹೆಣ್ಣು ಮಕ್ಕಳೆಷ್ಟು?

* * * *

ವಕೀಲ: ನಿನ್ನ ಮೊದಲನೆ ಮದುವೆ ಅಂತ್ಯಗೊಂಡಿದ್ದು ಹೇಗೆ?

ಸಾಕ್ಷಿದಾರ: ಸಾವಿನಿಂದ.

ವಕೀಲ: ಯಾರ ಸಾವಿನಿಂದ?

* * * *

ವಕೀಲ: ನೀವು ಕಂಡ ವ್ಯಕ್ತಿಯನ್ನು ವಿವರಿಸುತ್ತೀರಾ?

ಸಾಕ್ಷಿದಾರ: ಸಾಮಾನ್ಯ ಎತ್ತರ ಮತ್ತು ಉದ್ದನೆ ಗಡ್ಡ ಇತ್ತು.

ವಕೀಲ: ಆ ವ್ಯಕ್ತಿ ಪುರುಷನೋ, ಮಹಿಳೆಯೊ?

* * * *

ವಕೀಲ: ನೀವು ಎಷ್ಟು ಹೊತ್ತಿಗೆ ಶವ ಪರೀಕ್ಷೆಯನ್ನು ಪ್ರಾರಂಭಿಸಿದಿರಿ?

ಸಾಕ್ಷಿದಾರ: ಸುಮಾರು 8.30 ಕ್ಕೆ.

ವಕೀಲ: ಆಗ ಮಿ. ಡೆಂಟನ್ ಸತ್ತಿದ್ದರಾ?

ಸಾಕ್ಷಿದಾರ: ಇಲ್ಲ ಆತ ನನ್ನ ಮುಂದಿನ ಕುರ್ಚಿಯಲ್ಲಿ ಕೂತು ನಾನೇಕೆ ಅವರ ಶವ ಪರೀಕ್ಷಿಸುತ್ತಿದ್ದೆ ಎಂದು ನೋಡುತ್ತಿದ್ದರು!

* * * *

ವಕೀಲ: ನೀವು ಶವಪರೀಕ್ಷೆಯನ್ನು ಪ್ರಾರಂಭಿಸುವ ಮುನ್ನ ನಾಡಿಮಿಡಿತ ಇದೆಯೇ ಎಂದು ನೋಡಿದಿರಾ?

ಸಾಕ್ಷಿದಾರ: ಇಲ್ಲ.

ವಕೀಲ: ರಕ್ತದೊತ್ತಡವನ್ನು ಪರೀಕ್ಷಿಸಿದಿರಾ?

ಸಾಕ್ಷಿದಾರ: ಇಲ್ಲ.

ವಕೀಲ: ಉಸಿರಾಟವಿದೆಯಾ ಎಂದು ನೋಡಿದಿರಾ?

ಸಾಕ್ಷಿದಾರ: ಇಲ್ಲ.

ವಕೀಲ: ಹಾಗಾದರೆ ನೀವು ಶವಪರೀಕ್ಷೆ ಪ್ರಾರಂಭಿಸುವ ಮುನ್ನ ಆತ ಬದುಕಿರುವ ಸಾಧ್ಯತೆ ಇತ್ತು?

ಸಾಕ್ಷಿದಾರ: ಇಲ್ಲ.

ವಕೀಲ: ಅದು ಹೇಗೆ ಅಷ್ಟು ಸ್ಪಷ್ಟವಾಗಿ ಹೇಳುತ್ತೀರಿ ಡಾಕ್ಟರ್?

ಸಾಕ್ಷಿದಾರ: ಯಾಕೆಂದರೆ ಅಷ್ಟು ಹೊತ್ತಿಗಾಗಲೇ ಆತನ ಮಿದುಳು ನನ್ನ ಟೇಬಲ್ ಮೇಲಿನ ಜಾಡಿಯಲ್ಲಿತ್ತು.

ವಕೀಲ: ಆದರೂ ಆತ ಬದುಕಿದ್ದಿರಬಹುದಿತ್ತಲ್ಲವೇ?

ಸಾಕ್ಷಿದಾರ: ಹೌದು, ಆತ ಬದುಕಿದ್ದು ವಕೀಲನಾಗಿ ಕಾರ್ಯ ನಿರ್ವಹಿಸಬಹುದಿತ್ತು!

* * * *

ವಕೀಲ: ಡಾಕ್ಟರ್, ನೀವು ಎಷ್ಟು ಜನ ಸತ್ತವರ ಮೇಲೆ ಶವಪರೀಕ್ಷೆ ನಡೆಸಿದ್ದೀರಿ?

ಸಾಕ್ಷಿದಾರ: ನಾನು ಶವಪರೀಕ್ಷೆ ಮಾಡಿರುವುದೆಲ್ಲಾ ಸತ್ತವರ ಮೇಲೆ. ■



ಸಾಮಾನ್ಯವಾಗಿ ಎಲ್ಲ ಯುವಕ-ಯುವತಿಯರನ್ನು ಕಾಡುವ ಪ್ರಶ್ನೆ 'ಪ್ರೀತಿ ಅಂದರೆ ಏನು?' ಎಂಬುದು. ನಮ್ಮ ಸಿನಿಮಾಗಳಲ್ಲಂತೂ ಆ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ ಬಿಡಿ. ಯಾಕೆಂದರೆ ಸಿನಿಮಾಗಳಲ್ಲಿ ಬಲವಂತವಾಗಿ ಪ್ರೀತ್ಸೆ ಅಂತಾರೆ; ತಿರಸ್ಕರಿಸಿದವರನ್ನೇ, ತಮಗೆ ಕಪಾಳಮೋಕ್ಷ ಮಾಡಿದವರನ್ನೇ ಪ್ರೀತಿಸುತ್ತಾರೆ; ಅದೆಷ್ಟೋ ಬಾರಿ ಹುಡುಗಿಯ ಹೆಸರೂ ಗೊತ್ತಿಲ್ಲದಿದ್ದರೂ ಅವಳನ್ನು ಕ್ರೇಜಿಯಾಗಿ ಲವ್ ಮಾಡಲು ಶುರು ಮಾಡುತ್ತಾರೆ.

ಹಾಗಾದರೆ ಪ್ರೀತಿ ಅಂದರೆ ಏನು ಎಂದು ಗೊತ್ತಾಗುವುದು ಹೇಗೆ? ಅವನನ್ನು ನೋಡುತ್ತಿದ್ದಂತೆ ಅದೆಂತಹದ್ದೋ ಕಂಪನ ಆಗುತ್ತಂತೆ, ಅದೇ ಇರಬಹುದೇ? ಮನಸ್ಸಿನಲ್ಲಿ ಹಾಯಾದ ಭಾವನೆ ಉಂಟಾಗುತಂತಲ್ಲಾ ಅದೂ ಇರಬಹುದೇ? ನಿದ್ರೆಗೆ ಜಾರುವಾಗಲೂ ಕಣ್ಣುಮುಂದೆ ಆತನದ್ದೇ ಮುಖ, ಬೆಳಗ್ಗೆ ಎಚ್ಚರವಾಗುತ್ತಿದ್ದಂತೆ ನಿಮಗೆ ಅರಿವಿಲ್ಲದಂತೆ ಅವನ ಬಗ್ಗೆ ಯೋಚಿಸುವ ಮನಸ್ಸು, ಫೋನ್ ರಿಂಗಾದರೆ ಅವನೇ ಕರೆಯುತ್ತಿರಲಿ ಎಂಬ ಆಶೆ, ಅವನ ಬಗ್ಗೆ ನೆನೆದಾಗ ಕಾರಣವಿಲ್ಲದೆ ತುಟಿಯಂಚಿನಲ್ಲಿ ಮೂಡುವ ನಗೆ, ಸಮಯ ಸಿಕ್ಕಾಗಲೆಲ್ಲ ಅವನತ್ತಲೇ ಜಾರುವ ಯೋಚನೆಗಳು... ಇದೆಲ್ಲ ನಿಜವಾದ ಲವ್ವಿನ ಸೂಚನೆಗಳಿರಬಹುದೇ? ಹಾಗಾದರೆ ಮದುವೆಯಾದ ನಂತರ ಈ ಲವ್ವಿಗೆ ಏನಾಗುತ್ತದೆ. ಆತ ಪಕ್ಕದಲ್ಲೇ ಇರುವಾಗಲೂ ಅದೆಂತಹದ್ದೋ ಕಂಪನ ಉಂಟಾಗಲು ಸಾಧ್ಯವೇ? ನಿದ್ರೆಗೆ ಜಾರುವಾಗಲೂ ಪಕ್ಕದಲ್ಲೇ ಇರುವ, ಬೆಳಗ್ಗೆ ಎದ್ದಾಗಲೂ ಹತ್ತಿರದಲ್ಲೇ ಅಂಗಾತ ಬಿದ್ದಿರುವವನಿಗಾಗಿ ಮನಸ್ಸು ಹಂಬಲಿಸುತ್ತದೆಯೇ? ಒಲೆಯ ಮುಂದೆ ನಿಂತು ಅಡುಗೆ ಮಾಡುವಾಗ, ಈರುಳ್ಳಿ ಹೆಚ್ಚುವಾಗ ಆತನ ನೆನಪಾಗಿ ತುಟಿಯಂಚಿನಲ್ಲಿ ನಗೆ ಮೂಡುತ್ತದೆಯೇ? ಇಲ್ಲಾ ಅನ್ನಿಸುತ್ತಪ್ಪ.

ಹಾಗಾದರೆ ಲವ್ ಅಂದರೆ ಏನು?

ಮೊನ್ನೆ ನನ್ನ ಕಬೀರ್ ಕಳುಹಿಸಿದ ಈ-ಮೇಲ್‌ನಲ್ಲಿ ಈ ಲವ್ ಅಂದರೆ ಏನು ಎಂಬುದಕ್ಕೆ ಒಂದು ರೀತಿಯ ಉತ್ತರ ಸಿಕ್ಕಿತು ಅನ್ನಿಸಿತು. ಅದು ಚೀನಾ ದೇಶದ ಒಂದು ದಂಪತಿಯ ಕತೆ. ಅದು ಹೀಗಿದೆ:

ಐವತ್ತು ವರ್ಷಗಳ ಹಿಂದೆ ಪ್ರಾರಂಭವಾದ ಪ್ರೇಮಕತೆ ಇದು. ಆಗ ಲಿಯುನಿಗೆ ಇನ್ನೂ 19 ರ ಪ್ರಾಯ. ಆದರೆ ಕ್ಸುಳಿಗೆ 29 ವರ್ಷ ವಯಸ್ಸಾಗಿತ್ತು ಮಾತ್ರವಲ್ಲ, ಆಗಲೇ ಮೂರು ಮಕ್ಕಳ ತಾಯಿಯಾಗಿದ್ದ ಕ್ಸು ವಿಧವೆಯಾಗಿದ್ದಳು. ಅವಳ ಬಗ್ಗೆ ಲಿಯುನಲ್ಲಿ ಪ್ರೇಮಾಂಕುರವಾಯಿತು. ಆ ಪ್ರೇಮದ ಬಗ್ಗೆ ಅವನ ತಂದೆತಾಯಿ ಆಭ್ಯಂತರ ವ್ಯಕ್ತಪಡಿಸಿದರೂ ಆತ ಅವಳನ್ನೇ ಮದುವೆಯಾಗುವುದಾಗಿ ಹಠ ಹಿಡಿದ.

ಐವತ್ತು ವರ್ಷಗಳ ಹಿಂದೆ ಚೀನಾದ ಸಮಾಜ ನಮ್ಮ ಸಮಾಜಕ್ಕಿಂತಲೂ ಭಿನ್ನವಾಗಿರಲಿಲ್ಲ, ಆದ್ದರಿಂದ ಆತನಿಗಿಂತಲೂ ಹತ್ತು ವರ್ಷ ಹಿರಿಯವಳಾದ, ಅದರಲ್ಲೂ ಮೂರು ಮಕ್ಕಳ ತಾಯಿಯಾದ ಕ್ಸುಳನ್ನು ಲಿಯುನ ತಂದೆತಾಯಿ ಸೊಸೆಯೆಂದು ಸ್ವೀಕರಿಸಲು ನಿರಾಕರಿಸಿದರು. ಅಷ್ಟೇ ಅಲ್ಲದೆ, ಇಡೀ ಹಳ್ಳಿ ಅವರ ಪ್ರೇಮದ ಬಗ್ಗೆ ಲೇವಡಿ ಮಾಡಲಾರಂಭಿಸಿತು.

ಇದೆಲ್ಲದರಿಂದ ರೋಸತ್ತ ಅವರಿಬ್ಬರೂ ಹಳ್ಳಿಯಿಂದ ಸ್ವಲ್ಪ ದೂರದಲ್ಲಿದ್ದ ಬೆಟ್ಟದ ಮೇಲೊಂದರ ಗುಹೆಯಲ್ಲಿ ವಾಸಿಸುವುದೆಂದು ನಿರ್ಧರಿಸಿದರು. ಹೀಗೆ ತಮ್ಮನ್ನು ತಿರಸ್ಕರಿಸಿದ್ದ ಸಮಾಜದಿಂದ ದೂರದಲ್ಲಿ ಪ್ರಾರಂಭವಾದ ಅವರ ದಾಂಪತ್ಯ ಜೀವನ ಅದೆಷ್ಟು ಪ್ರೀತಿವಾತ್ಸಲ್ಯದಿಂದ ತುಂಬಿತ್ತೆಂದರೆ ನಿಧಾನವಾಗಿ ಗುಹೆಯ ಹತ್ತಿರದಲ್ಲೇ ಪುಟ್ಟ ಮನೆಯೊಂದನ್ನು ಕಟ್ಟಿಕೊಂಡರು, ಹತ್ತಿರದ ಜಾಗಗಳಲ್ಲಿ ಕೃಷಿ ಮಾಡಿ ಜೀವನ ಸಾಗಿಸಿದರು. ಆದರೆ ಅಗತ್ಯ ವಸ್ತುಗಳಿಗೆಂದು ಅವರಿಬ್ಬರೂ ಆಗೀಗ ಬೆಟ್ಟದಿಂದ ಇಳಿದು ಹಳ್ಳಿಗೆ ಬರಬೇಕಿತ್ತು, ಆದರೆ ಆ ಬೆಟ್ಟ ತೀರಾ ಇಳಿಜಾರಾಗಿದ್ದರಿಂದ ಕ್ಸುಗಳಿಗೆ ಅದನ್ನು ಇಳಿಯುವುದು, ಹತ್ತುವುದು ಕಷ್ಟವಾಗಿತ್ತು. ಕ್ಸುಳ ಈ ಕಷ್ಟವನ್ನು ಗಮನಿಸಿದ ಲಿಯು ಆಕೆಯನ್ನು ಎಷ್ಟು ಪ್ರೀತಿಸುತ್ತಿದ್ದನೆಂದರೆ ಒಂದು ದಿನ ಆತ ಒಂದು ನಿರ್ಧಾರಕ್ಕೆ ಬಂದ. ಸಮಯ ಸಿಕ್ಕಾಗಲೆಲ್ಲ ತನ್ನ ಉಳಿ ಮತ್ತು ಸುತ್ತಿಗೆಯನ್ನು ತೆಗೆದುಕೊಂಡು ಬೆಟ್ಟವನ್ನು ಕೆತ್ತಲು ಪ್ರಾರಂಭಿಸಿದ. ಹಲವು ವರ್ಷಗಳ ನಂತರ ಆ ಕೆಲಸ ಮುಗಿದಾಗ ಬೆಟ್ಟದ ಮೇಲಿಂದ ಕೆಳಗಿನತನಕ ಆರು ಸಾವಿರಕ್ಕಿಂತಲೂ ಹೆಚ್ಚು ಮೆಟ್ಟಿಲುಗಳನ್ನು ಕೆತ್ತಿದ್ದ! ಆರು ಸಾವಿರ ಮೆಟ್ಟಿಲುಗಳೆಂದರೆ ಆ ಬೆಟ್ಟ ಇನ್ನೆಷ್ಟು ಎತ್ತರವಿದ್ದೀತು?


ಬೆಟ್ಟದ ಮೇಲಿನ ಏಕಾಂತದಲ್ಲಿ ಅವರಿಬ್ಬರ ಸಂಸಾರ ಬೆಳೆದಿತ್ತು. ಅವರಿಗೆ ಮೂರು ಮಕ್ಕಳಾಗಿದ್ದವು. ಅಷ್ಟೊತ್ತಿಗೆ ಅವರಿಬ್ಬರ ಬಗೆಗಿನ ಹಳ್ಳಿಯವರ ಮುನಿಸು ಕಡಿಮೆಯಾಗಿತ್ತು. ಹಾಗಾಗಿ ವಿದ್ಯೆ ಇತ್ಯಾದಿ ಕಾರಣಗಳಿಂದಾಗಿ ಮಕ್ಕಳು ಬೆಟ್ಟದಿಂದಿಳಿದು ಹಳ್ಳಿಯಲ್ಲಿ ವಾಸಿಸಲಾರಂಭಿಸಿದರು. ಆದರೆ ಲಿಯು ಮತ್ತು ಕ್ಸು ಮಾತ್ರ ಬೆಟ್ಟದ ಮೇಲೆಯೇ ಉಳಿದರು. ಅಲ್ಲಿಯೇ ತಮ್ಮ ಪ್ರೇಮಗಾಥೆಯನ್ನು ಮುಂದುವರೆಸಿದರು. ಎರಡು ವರ್ಷಗಳ ಹಿಂದೆ ಈ ಬೆಟ್ಟವಿದ್ದಲ್ಲಿಗೆ ಬಂದ ಪರ್ವತಾರೋಹಿಗಳು ತಮ್ಮ ಎಲ್ಲಾ ಆಧುನಿಕ ಸಲಕರಣೆಗಳೊಂದಿಗೆ ಅದನ್ನು ಹತ್ತಲು ಯತ್ನಿಸುತ್ತಿದ್ದಾಗ ಅವರಿಗೆ ಲಿಯು ಕೆತ್ತಿದ್ದ ಮೆಟ್ಟಿಲುಗಳು ಕಂಡವು. ಅವುಗಳನ್ನು ನೋಡಿ ಅಚ್ಚರಿಗೊಂಡ ಪರ್ವತಾರೋಹಿಗಳ ತಂಡ ತಮ್ಮ ಸಲಕರಣೆಗಳನ್ನು ತೊರೆದು ಮೆಟ್ಟಿಲುಗಳನ್ನು ಹತ್ತಿ ಹೋದಾಗ, ಅವರಿಗೆ ಕಂಡುಬಂದದ್ದು ಲಿಯು ಮತ್ತು ಕ್ಸುಳ ಪ್ರೇಮಗೂಡು!

ಅವರಿಬ್ಬರೂ ಮುದುಕರಾಗಿದ್ದರು. ಆದರೆ ಪ್ರೀತಿಗಾಗಲಿ, ಸಹನೆಗಾಗಲಿ, ಸಹಕಾರಕ್ಕಾಗಲಿ ಅವರ ನಡುವೆ ಯಾವ ಕೊರತೆಯೂ ಇರಲಿಲ್ಲ. ಅವರಿಬ್ಬರ ಪ್ರೇಮಕತೆ ಮತ್ತು ತನ್ನ ಹೆಂಡತಿಗೆಂದೇ ಲಿಯು ನಿರ್ಮಿಸಿದ್ದ ಆರು ಸಾವಿರ ಮೆಟ್ಟಿಲುಗಳ ಬಗ್ಗೆ ಪರ್ವತಾರೋಹಿಗಳು ನಗರಕ್ಕೆ ಹಿಂದಿರುಗಿದಾಗ ಮಾಧ್ಯಮಗಳಿಗೆ ತಿಳಿಸಿದರು. ಶೇಕ್ಸ್‌ಪಿಯರ್‌ನ ರೋಮಿಯೋ ಮತ್ತು ಜೂಲಿಯಟ್ ತಮ್ಮ ತಂದೆತಾಯಂದಿರ ವಿರೋಧವನ್ನು ತಾಳಲಾರದೆ ಆತ್ಮಹತ್ಯೆಗೆ ಶರಣಾಗಿದ್ದರು. ಆದರೆ ಚೀನಾದ ಲಿಯು ಎಂಬ ರೋಮಿಯೋ ಮತ್ತು ಕ್ಸು ಎಂಬ ಜೂಲಿಯಟ್ ಎಲ್ಲಾ ಸಾಮಾಜಿಕ ಅಡತಡೆಗಳನ್ನು ಮೀರಿ ಜೀವಿಸಿದ್ದರು. ಸಹಜವಾಗಿಯೇ ಇವರಿಬ್ಬರ ಜೀವನಗಾಥೆ ಎಲ್ಲಾ ಮಾಧ್ಯಮಗಳ ಗಮನ ಸೆಳೆಯಿತು. ಅಲ್ಲಿಯತನಕ ಲಿಯು ಮತ್ತು ಆತನ ಪ್ರೀತಿಯ ಮಡದಿ ಕ್ಸು ಹತ್ತಿಳಿದಿದ್ದ 6,000 ಮೆಟ್ಟಿಲುಗಳನ್ನು ನೂರಾರು ಮಾಧ್ಯಮದವರು ಹತ್ತು ಇಳಿದರು. ಅವರಿಬ್ಬರ ಫೋಟೋ ಕ್ಲಿಕ್ಕಿಸಿದರು, ಸಂದರ್ಶನ ಮಾಡಿದರು, ಒಂದು ಪುಟ್ಟ ಸಾಕ್ಷ್ಯ ಚಿತ್ರವನ್ನೂ ನಿರ್ಮಿಸಿದರು.

ಲಿಯು ಮತ್ತು ಕ್ಸುಳ ಪ್ರೇಮಗಾಥೆ ಚೀನಾದಲ್ಲಿ ಜನಜನಿತವಾಯಿತು. ಆದರೆ ಲಿಯು ಮತ್ತು ಕ್ಸು ಮಾತ್ರ ಇದ್ಯಾವುದರಿಂದಲೂ ಪ್ರಭಾವಿತರಾಗದೆ ಬೆಟ್ಟದ ಮೇಲಿನ, ಸಮಾಜದಿಂದ ದೂರವಾದ ತಮ್ಮ ಬದುಕನ್ನು ಸಾಗಿಸುತ್ತಿದ್ದರು. ಆದರೆ ಎಲ್ಲಾ ಪ್ರೇಮಗಾಥೆಗಳಂತೆ ಲಿಯು ಮತ್ತು ಕ್ಸುಳ ಜೀವನದಲ್ಲೂ ದುರಂತ ಸಂಭವಿಸಿತು. ಹೋದ ವರ್ಷ ಒಂದು ದಿನ ತನ್ನ ಹೊಲದಿಂದ ಮನೆಗೆ ಹಿಂದಿರುಗಿದ ಲಿಯು ತನ್ನ ಪ್ರೀತಿಯ ಕ್ಸುಳ ಕಣ್ಣ ಮುಂದೆಯೇ ಕುಸಿದು ಬಿದ್ದ. ಅವನನ್ನು ಅಪ್ಪಿಕೊಂಡ ಕ್ಸು "ನನ್ನನ್ನು ಎಂದೂ ಬಿಟ್ಟಿರಲಾರೆ ಅನ್ನುತ್ತಿದ್ದೆ. ಈಗ ನನ್ನಿಂದ ದೂರ ಹೋಗಬೇಡ" ಎಂದು ರೋದಿಸುತ್ತಿದ್ದಳು. ಲಿಯು ಅವಳನ್ನು ಗಟ್ಟಿಯಾಗಿ ಹಿಡಿದಿದ್ದಾಗಲೇ ಕೊನೆ ಉಸಿರೆಳೆದ. ಅವನ ಅಪ್ಪುಗೆಯಿಂದ ಅವಳನ್ನು ಬಿಡಿಸಲು ಆತನ ಹಸ್ತಗಳ ಬೆರಳುಗಳನ್ನೇ ಮುರಿಯಬೇಕಾಯಿತು. ಹಾಗೆಯೇ ಅವನ ಶವಪೆಟ್ಟಿಗೆಯಿಂದ ಕ್ಸುಳನ್ನು ಬಿಡಿಸಲು ಬಹಳಷ್ಟು ಜನ ಪ್ರಯತ್ನಿಸಬೇಕಾಯಿತು.

ಲಿಯು ಮತ್ತು ಕ್ಸುಳ ಪ್ರೇಮಕತೆ ಓದಿದ ನಂತರ ಕಬೀರನಿಗೆ ಫೋನ್ ಮಾಡಿ "ತುಂಬಾ cute ಆಗಿದೆ ಕತೆ. ಅದನ್ನು ಕಳುಹಿಸಿದ್ದಕ್ಕೆ Thanks" ಅಂದೆ.

"ಅವನ ಪ್ರೀತಿ ಎಷ್ಟು ದೊಡ್ಡದ್ದು ಮತ್ತು ಆಳದಲ್ಲಾ?" ಎಂದ ಕಬೀರ್.



"ಹೌದು. ಆದರೆ ತಮ್ಮದೂ ನಿಜವಾದ ಲವ್ ಅಂತ ಪ್ರೂವ್ ಮಾಡಕ್ಕೆ ಎಲ್ಲರೂ ಬೆಟ್ಟಗಳ ಮೇಲೆ ಮೆಟ್ಟಿಲುಗಳನ್ನು ಕೆತ್ತಲಾರಂಭಿಸಿದರೆ?" ಎಂದು ನಾನು ತಮಾಷೆ ಮಾಡಿದೆ.

"ಶಾರೂ, ಆ ಮೆಟ್ಟಿಲುಗಳು ಪ್ರೇಮದ ಸಂಕೇತ ಅಷ್ಟೇ. ನಿಜವಾದ ಪ್ರೀತಿ ಇದ್ದಲ್ಲಿ ವಿವಿಧ ಸಮಸ್ಯೆ, ವಿರೋಧ, ಸಾಮಾಜಿಕ ಒತ್ತಡ, ಎಲ್ಲವನ್ನೂ ಮೀರಿ ಜೊತೆಯಾಗಿ ಸಂತೋಷದಿಂದ, ನೆಮ್ಮದಿಯಿಂದ ಜೀವಿಸಬಹುದು. ಅದೇ ಲವ್ ಅನ್ನೂ ರಿಯಲಾಗಿ ಟೆಸ್ಟ್ ಮಾಡುವುದು" ಎಂದ.

"ನನಗೇನನ್ನಿಸಿತು ಗೊತ್ತಾ ಕಬೀರ್, ಮಹಾರಾಜ ಶಹಜಾಹನ್ ತನ್ನ ಪ್ರೀತಿಯ ಮಡದಿಗೆ ತಾಜ್‌ಮಹಲ್ ಅನ್ನು ಕಟ್ಟಿಸಿದ. ಆದರೆ ಬಡವನಾದ ಲಿಯು ತನ್ನ ಹೆಂಡತಿಗಾಗಿ ಆರು ಸಾವಿರ ಮೆಟ್ಟಿಲುಗಳನ್ನು ಕೆತ್ತಿದ. ಎರಡೂ ಸುಂದರವಾಗಿದೆ" ಎಂದೆ.

"ನಾನೂ ಒಂದು ಹುಡುಗಿನ ಲವ್ ಮಾಡಿದ್ದೀನಿ. ಆದರೆ ಅವಳು ನನ್ನ ಬಗ್ಗೆ ಅಷ್ಟು ಕೇರ್ ಮಾಡುತ್ತಿಲ್ಲ ಅನ್ನಿಸುತ್ತೆ. ನನ್ನ ಲವ್ ಬಗ್ಗೆ ಅವಳಿಗೆ ಅರ್ಥ ಮಾಡಿ ಕೊಡುವುದು ಹೇಗೆ? Any suggestions, ಶಾರು?" ಎಂದ ಕಬೀರ್.

"ಹೌದಾ, ಪ್ರಶ್ನೆ ತುಂಬಾ interesting ಆಗಿದೆ. ಯೋಚನೆ ಮಾಡಿ ಹೇಳ್ತೇನೆ. Bye" ಎಂದು ಫೋನ್ ಇಟ್ಟೆ!

■ ಶಾರದೆ

ಬಿಜೆಪಿಗಳ ಎಡಬಿಡಂಗಿ ನಿಲುವು!




ಕಂಡಹಾಗೆ

■ ಗೌರಿ ಲಂಕೇಶ್

"ಹಲವು ಬದಲಾವಣೆಗಳೊಂದಿಗೆ ಅಮೆರಿಕದೊಂದಿಗಿನ ಭಾರತದ ಅಣುಒಪ್ಪಂದಕ್ಕೆ ಬಿಜೆಪಿಯು ಸಹಮತವಿದೆ. ಅಮೆರಿಕಾದೊಂದಿಗಿನ ಯುದ್ಧೋಪಾಯ ಒಪ್ಪಂದಗಳಿಗೆ ನಮ್ಮ ಪಕ್ಷದ ಅಭ್ಯಂತರವಿಲ್ಲ."

-ಬಿಜೆಪಿ ನಾಯಕ ಅಡ್ವಾಣಿ, ಸೆಪ್ಟೆಂಬರ್ 1, 2007 ರಲ್ಲಿ

"ಬಿಜೆಪಿ ಪಕ್ಷವು ಈ ಅಣು ಒಪ್ಪಂದವನ್ನು ವಿರೋಧಿಸುತ್ತದೆ. ಭಾರತದ ಸಾರ್ವಭೌಮತ್ವಕ್ಕೆ ಹಾನಿ ಮಾಡುವ ಇಂತಹ ಒಪ್ಪಂದಗಳನ್ನು ನಮ್ಮ ಪಕ್ಷ ತಿರಸ್ಕರಿಸುತ್ತದೆ."



-ಅಡ್ವಾಣಿ ಒಳಗೊಂಡ ಬಿಜೆಪಿ ಪಕ್ಷದ ನಾಯಕರ ಹೇಳಿಕೆ, ನವೆಂಬರ್ 9, 2007

"ಬಿಜೆಪಿ ನೇತೃತ್ವದ ಎನ್‌ಡಿಎಗೆ ಜನ ಮತ್ತೆ ಅಧಿಕಾರ ನೀಡಿದರೆ ನಾವು ಅಮೆರಿಕದೊಂದಿಗಿನ ಈ ಅಣುಒಪ್ಪಂದವನ್ನು ಮತ್ತೆ ವಿಮರ್ಶಿಸುತ್ತೇವೆ ಇಲ್ಲವೆಂದರೆ ಸಂಪೂರ್ಣವಾಗಿ ಕೈಬಿಡುತ್ತೇವೆ."

-ಅಡ್ವಾಣಿ, ಲೋಕಸಭೆಯಲ್ಲಿ, ನವೆಂಬರ್ 29, 2007

"ಈ ಒಪ್ಪಂದದಲ್ಲಿ ಇರುವುದಾದರೂ ಏನು? ನಮಗೆ ವಿದ್ಯುತ್ ಅಭಾವವಿದೆ ಮತ್ತು ಆ ಅಭಾವವನ್ನು ಈ ಒಪ್ಪಂದದಿಂದಾಗಿ ಪೂರೈಸಲಾಗುತ್ತದೆ. ಆದ್ದರಿಂದ ನಾವು ಅದನ್ನು ಸ್ವಾಗತಿಸುತ್ತೇವೆ."

-ಅಡ್ವಾಣಿ, ದಿ ಹಿಂದೂ ಪತ್ರಿಕೆಯ ಸಂದರ್ಶನದಲ್ಲಿ, ಜುಲೈ 11, 2008

ಕಳೆದ ಹಲವಾರು ತಿಂಗಳುಗಳಿಂದ ಅಣುಒಪ್ಪಂದ ಕುರಿತು ಬಿಜೆಪಿಯ ಭಾವಿ ಪ್ರಧಾನಿ ಎಲ್.ಕೆ. ಅಡ್ವಾಣಿಯವರು ಹೀಗೆ ಅರ್ಥತರ್ಕವಿಲ್ಲದ ಹಲವಾರು ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. ಅವರಂತೆಯೇ ಅವರ ಪಕ್ಷದ ಇತರೆ ನಾಯಕರು ಕೂಡ ಮೊದಲಿನಿಂದ ತದ್ವಿರುದ್ಧದ ಹೇಳಿಕೆಗಳಲ್ಲೇ ಮುಳುಗಿದ್ದಾರೆ. ಅಮೆರಿಕದ ಒಲ್ಲೈಕೆಯ ಅಗತ್ಯ ಹೆಚ್ಚಾದಾಗ ಅದನ್ನು ಸ್ವಾಗತಿಸುವುದು, ರಾಷ್ಟ್ರಪ್ರೇಮ ಮಿತಿಮೀರಿದಾಗ ವಿರೋಧಿಸುವುದು. ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಟೀಕಿಸುವಾಗ ಒಪ್ಪಂದದ ಹಲವು ಅಂಶಗಳನ್ನು ವಿಮರ್ಶಿಸಬೇಕು ಎಂದು ಹೇಳುವುದು... ಇದೇ ಆ ಪಕ್ಷದ ಎಡಬಿಡಂಗಿ ನಿಲುವಾಗಿದೆ.

ಬರುವ ದಿನಗಳಲ್ಲಿ ಈ ಒಪ್ಪಂದದ ಸುತ್ತಲಿನ ವಿವಾದದಿಂದಾಗಿಯೇ ಕೇಂದ್ರದಲ್ಲಿ ಯುಪಿಎ ಸರ್ಕಾರ ಉರುಳಬಹುದು. ಆನಂತರ ಚುನಾವಣೆಗಳು ನಡೆದು ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಬಹುದು. ಆದರೆ ಹಾಗೆ ಮತ್ತೆ ಅಧಿಕಾರದ ಗದ್ದುಗೆಯನ್ನೇರುವ ಬಿಜೆಪಿ, ಎಡಪಕ್ಷಗಳ ಹಂಗಿಲ್ಲದೆ, ಇತರೆ ಪಕ್ಷಗಳ ಅಜ್ಞಾನದ ಲಾಭ ಪಡೆದು ಅಮೆರಿಕಕ್ಕೆ ಸಂಪೂರ್ಣವಾಗಿ ಭಾರತ ದೇಶವನ್ನು ಅಡ ಇಡುವ ಅಪಾಯವಿದೆ.

ಅಂದಹಾಗೆ ಮೊನ್ನೆ ದಿ ಹಿಂದೂ ಪತ್ರಿಕೆಗೆ ಅಡ್ವಾಣಿ ನೀಡಿರುವ ಸಂದರ್ಶನದಲ್ಲಿ ಈ ವಿವಾದಾತ್ಮಕ ಒಪ್ಪಂದಕ್ಕೆ ಚಾಲನೆ ನೀಡಿದ್ದು ಬಿಜೆಪಿ ಪಕ್ಷವಲ್ಲ ಎಂದೂ ಹೇಳಿದ್ದಾರೆ. ಆದರೆ ವಸ್ತವ ಏನು?

ಇದೆಲ್ಲ ಪ್ರಾರಂಭವಾದದ್ದು 2000 ರ ಮಾರ್ಚ್ ತಿಂಗಳಲ್ಲಿ. ಇಪ್ಪತ್ತೆರಡು ವರ್ಷಗಳ ನಂತರ ಅಮೆರಿಕದ ಅಧ್ಯಕ್ಷನೊಬ್ಬ ಭಾರತಕ್ಕೆ ಭೇಟಿ ನೀಡಿದ ಸಂದರ್ಭವದು. ಅವತ್ತು ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಮತ್ತು ಭಾರತ ಪ್ರಧಾನಿ ಎ.ಬಿ. ವಾಜಪೇಯಿ ನಡುವೆ 'ಇಂಡೋ-ಅಮೆರಿಕನ್ ವಿಜನ್ ಸ್ಟೇಟ್‌ಮೆಂಟ್' ಎಂಬ ವ್ಯೂಹಾತ್ಮಕ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಅದರಲ್ಲಿ ಜಗತ್ತಿನಲ್ಲಿ ಅದರಲ್ಲೂ ಏಷ್ಯಾ ಖಂಡದಲ್ಲಿ ಶಾಂತಿ ಸ್ಥಾಪಿಸುವುದು ಎರಡೂ ದೇಶಗಳ ಜಂಟಿ ಜವಾಬ್ದಾರಿಯೆಂದೂ, ಆ ನಿಟ್ಟಿನಲ್ಲಿ ಅಮೆರಿಕ ಮತ್ತು ಭಾರತ ರಕ್ಷಣಾ ಮತ್ತು ಆರ್ಥಿಕ ವಲಯಗಳಲ್ಲಿ ಒಡಂಬಡಿಕೆ ಮಾಡಿಕೊಳ್ಳುತ್ತವೆ ಎಂದೂ ಸ್ಪಷ್ಟಪಡಿಸಲಾಗಿತ್ತು.

ಆ ಒಪ್ಪಂದವೇ ಇಂದಿನ ಅಣುಒಪ್ಪಂದಕ್ಕೆ ಬುನಾದಿ ಹಾಕಿದ್ದು. ಯಾಕೆಂದರೆ ಅದೇ ಒಪ್ಪಂದದಲ್ಲಿ 'ಇಂಡೋ ಅಮೆರಿಕ ಕೋಆರ್ಡಿನೇಷನ್ ಗ್ರೂಪ್' ಎಂಬುದು ಒಂದಿದ್ದು ಅದರ ಜವಾಬ್ದಾರಿಯನ್ನು ಅಮೆರಿಕದ ಶ್ವೇತಭವನ ಮತ್ತು ಭಾರತದ ಪ್ರಧಾನಿಯ ಕಚೇರಿ ವಹಿಸಿಕೊಂಡಿದ್ದವು. ಹಾಗೆಯೇ 'ಇಂಡೋ ಅಮೆರಿಕನ್ ಎಕನಾಮಿಕ್ ಫೋರಂ' ಎಂಬ ಇನ್ನೊಂದು ಗುಂಪು ಸೃಷ್ಟಿಸಲ್ಪಟ್ಟು ಅದರ ಜಂಟಿ ಜವಾಬ್ದಾರಿಯನ್ನು ಭಾರತದ ಆರ್ಥಿಕ ಸಚಿವಾಲಯ ಮತ್ತು ಅಮೆರಿಕದ ಟ್ರೆಜರಿ ಇಲಾಖೆ ಹೊತ್ತುಕೊಂಡಿದ್ದವು. ಈ ಎಲ್ಲಾ ಗುಂಪುಗಳು ಅಮೆರಿಕದ ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲಾರಂಭಿಸಿದ್ದವು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ ಈ ಒಪ್ಪಂದಕ್ಕೆ ವಾಜಪೇಯಿ ಸಹಿ ಹಾಕಿದ ಒಂದು ತಿಂಗಳೊಳಗೆ ದೆಹಲಿಯಲ್ಲಿ ಅಮೆರಿಕದ ಗುಪ್ತಚರ ಇಲಾಖೆ ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ (FBI) ತನ್ನ ಕಚೇರಿಯನ್ನು ತೆರೆಯಿತು. ಭಾರತದಂತಹ ಪ್ರಜಾಪ್ರಭುತ್ವದಲ್ಲಿ ಅಮೆರಿಕದಂತಹ ಸಾಮ್ರಾಜ್ಯಶಾಹಿ ದೇಶದ ಗುಪ್ತಚರ ಇಲಾಖೆಗೆ ಏನು ಕೆಲಸ ಎಂದು ಬಿಜೆಪಿಯ ಯಾವ ರಾಷ್ಟ್ರಭಕ್ತನೂ ಪ್ರಶ್ನಿಸಲೇ ಇಲ್ಲ.

ಇದಿಷ್ಟು ಸಾಲದೆಂಬಂತೆ ವಾಜಪೇಯಿ ಸರ್ಕಾರ ಅಮೆರಿಕಕ್ಕೆ ಎಂತೆಂತಹ ಸೌಲಭ್ಯಗಳನ್ನು ನೀಡಲಾರಂಭಿಸಿತೆಂದರೆ ಅಫಘಾನಿಸ್ತಾನದಿಂದ ಹಿಡಿದು ಇರಾಕ್ ಮೇಲೆಯೂ ದಾಳಿ ನಡೆಸಲು ಅಮೆರಿಕದ ಯುದ್ಧ ವಿಮಾನಗಳಿಗೆ ಭಾರತದ ನೆಲದಲ್ಲೇ ಇಂಧನ ತುಂಬಿಸಿಕೊಳ್ಳಲು ಅನುವು ಮಾಡಿಕೊಟ್ಟಿತು. ಇದಾದನಂತರ ಕೊಲ್ಕತ್ತಾದ ಹತ್ತಿರ ಅಮೆರಿಕ ಮತ್ತು ಭಾರತದ ವಾಯುಪಡೆಗಳು ಜಂಟಿ ಸಮರಾಭ್ಯಾಸ ಮಾಡಿದವು. ಹಾಗೆಯೇ ಕೇರಳದಲ್ಲಿ ಎರಡೂ ದೇಶಗಳ ನೌಕಾಪಡೆಗಳೂ ಇಂತಹದ್ದೇ ಸಮರಾಭ್ಯಾಸ ಮಾಡಿದವು.

ರಾಷ್ಟ್ರಪ್ರೇಮಿ ವಾಜಪೇಯಿ ಸರ್ಕಾರ ಅದೆಷ್ಟು ಅಮೆರಿಕದ ಅಡಿಯಾಳಂತೆ ವರ್ತಿಸಿತೆಂದರೆ ಅಮೆರಿಕದ ರಕ್ಷಣಾ ಸಚಿವ ಟಾಲ್ಬಟ್‌ನೊಂದಿಗೆ ಅಂದಿನ ಭಾರತದ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್ ಬರೋಬ್ಬರಿ 52 ಬಾರಿ ಭೇಟಿಯಾಗಿ ಚರ್ಚಿಸಿದರು. ಇದು ಏನನ್ನು ಸೂಚಿಸುತ್ತದೆ? ವಾಜಪೇಯಿ ಸರ್ಕಾರ ಅಮೆರಿಕದ ಕೀಲುಬೊಂಬೆಯಾಗಿತ್ತು ಎಂಬುದನ್ನಲ್ಲವೇ?

ಬಿಲ್ ಕ್ಲಿಂಟನ್ ಮತ್ತು ವಾಜಪೇಯಿ ನಡುವಿನ 2000 ರ ಒಪ್ಪಂದದ ಮುಂದುವರಿದ ಭಾಗವಾಗಿ 2003 ರಲ್ಲಿ ಇನ್ನೊಂದು ಒಪ್ಪಂದವನ್ನು ಮಾಡಿಕೊಳ್ಳಲಾಯಿತು. 2001 ರ ಸೆಪ್ಟೆಂಬರ್ 9 ರಂದು ಅಮೆರಿಕದ ಮೇಲೆ ಭಯೋತ್ಪಾದಕರ ದಾಳಿ ನಡೆದಿತ್ತಾದ್ದರಿಂದ ಜಗತ್ತಿನಾದ್ಯಂತ ಭಯೋತ್ಪಾದನೆಯನ್ನು ತಡೆಯುವ ನಿಟ್ಟಿನಲ್ಲಿ ಮಾಡಿಕೊಂಡ 2003 ರ ಒಪ್ಪಂದದಲ್ಲಿ ಶಾಂತಿಗಾಗಿ ಅಣು ಶಕ್ತಿಯನ್ನು ಉಪಯೋಗಿಸುವ ಪ್ರಸ್ತುತ ಒಪ್ಪಂದದ ಬೀಜವನ್ನು ಬಿತ್ತಲಾಗಿತ್ತು.

ಅವತ್ತು ಬಿಜೆಪಿಯ ವಾಜಪೇಯಿ ತೋರಿಸಿದ ಮಾರ್ಗದಲ್ಲಿ ಇವತ್ತು ಕಾಂಗ್ರೆಸ್‌ನ ಮನಮೋಹನ್ ಸಿಂಗ್ ಸಾಗಿದ್ದಾರೆ.

ಆದರೆ ಅಡ್ವಾಣಿ ಮಾತ್ರ ಈ ಒಪ್ಪಂದಕ್ಕೆ ಜೀವ ನೀಡಿದವರು ತಾವಲ್ಲ ಎಂದು ಯಾವ ನಾಚಿಕೆಯೂ ಇಲ್ಲದೆ ಹೇಳುತ್ತಿದ್ದಾರೆ.

ಬಿಜೆಪಿ ಮತ್ತದರ ಭಾವಿ ಪ್ರಧಾನಿ ಅಡ್ವಾಣಿಯ ಅಪಾಥಭೂತಿತನಕ್ಕೆ ಮಿತಿಯೇ ಇಲ್ಲವೇ? ■

ತ್ರಿಶಂಕು ಸ್ಥಿತಿಯಲ್ಲಿ ಉಮೇಶ್ ಕತ್ತಿ!

ಜೆಡಿಎಸ್ ತೊರೆದು ಬಿಜೆಪಿಗೆ ವಲಸೆ ಹೋಗಲು ತಯಾರಿ ನಡೆಸಿರುವ ಉಮೇಶ್ ಕತ್ತಿ "ನನಗೆ ಮಂತ್ರಿಗಿರಿ ಕೊಡ್ತೇನೆ ಅಂತ ಪ್ರಾಮೀಸ್ ಮಾಡಿದಾರೆ" ಎಂದು ತನ್ನಷ್ಟಕ್ಕೇ ತಾನೇ ಸಮಾಧಾನಪಟ್ಟುಕೊಳ್ಳುತ್ತಿದ್ದಾರೆ. ಆದರೆ ಅಸಲೀಯತ್ತೇನೆಂದರೆ, ಈತನನ್ನು ಬಿಜೆಪಿಯೊಳಗೆ ಬಿಟ್ಟುಕೊಳ್ಳಲು ರೆಡ್ಡಿ ಬ್ರದರ್ಸ್ ಸುತಾರಾಂ ಒಪ್ಪುತ್ತಿಲ್ಲ. ರೆಡ್ಡಿ ಬ್ರದರ್ಸ್‌ಗಳ ಕೃಪಾಕಟಾಕ್ಷದಲ್ಲಿಯೇ ಯಡ್ಡಿಯ ಕಮಲ-ಸರ್ಕಾರ ಅರಳುತ್ತಿರುವುದರಿಂದ ಅವರ ಮಾತನ್ನು ತಳ್ಳಿಹಾಕುವಷ್ಟು ಗಡಸುತನ ಯಡ್ಡಿಯಲ್ಲಿಲ್ಲ. ಅಂದರೆ, ಮಂತ್ರಿಗಿರಿಯ ಹಗಲುಕನಸು ಕಾಣುತ್ತಿರುವ ಉಮೇಶ್ ಕತ್ತಿಗೆ ಮೂರು ನಾಮ ಗ್ಯಾರಂಟಿ!



ಇನ್ನೊಂದೆಡೆಗೆ ಕುಮಾರಸ್ವಾಮಿ ಕೂಡ ಎರಡು ಮೂರು ಬಾರಿ ಉಮೇಶ್ ಕತ್ತಿಯನ್ನು ಭೇಟಿ ಮಾಡಿ ಜೆಡಿಎಸ್ ತೊರೆಯದಂತೆ ಮನವೊಲಿಸಲು ಪ್ರಯತ್ನಿಸಿದ್ದಾರೆ. ಈ ಮಾತುಕತೆ ಫಲಪ್ರದವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಜೆಡಿಎಸ್ ತೊರೆಯುವ ನಿರ್ಧಾರ ಕೈಗೊಂಡ ಕತ್ತಿಯ ವಿರುದ್ಧ ಕುಮಾರಸ್ವಾಮಿ ಮತ್ತು ದೇವೇಗೌಡ ಇಬ್ಬರೂ ಹತ್ತಿ ಮಸೆಯುತ್ತಿದ್ದಾರೆ. ಅಂದರೆ ಕತ್ತಿಯನ್ನು ಜೆಡಿಎಸ್ ಒಳಗೇ ಉಳಿಸಿಕೊಂಡು ಮೂಲೆಗುಂಪು ಮಾಡುವುದು ಅಪ್ಪ-ಮಕ್ಕಳ ಪ್ಲಾನ್.

ಉಮೇಶ್ ಕತ್ತಿಗೀಗ ತ್ರಿಶಂಕು ಸ್ಥಿತಿ. ಅತ್ತ ಬಿಜೆಪಿ ಸೇರಿದರೂ ರೆಡ್ಡಿ ಬ್ರದರ್ಸ್‌ಗಳು ಈತನನ್ನು ಬೆಳೆಯಲು ಬಿಡುವುದಿಲ್ಲ, ಇತ್ತ ಕುಮಾರಸ್ವಾಮಿ-ದೇವೇಗೌಡರ ವಿಶ್ವಾಸವನ್ನೂ ಉಳಿಸಿಕೊಳ್ಳಲಿಲ್ಲ. ಹೀಗಾಗಿ ಈತ ಎತ್ತ ಹೋದರೂ ರಾಜಕೀಯ ಭವಿಷ್ಯ ಕಾಣುತ್ತಿಲ್ಲ.

ಹೋಗಲಿ, ಕ್ಷೇತ್ರದ ಜನರಾದರೂ ಅವನ ಕೈಹಿಡಿಯುವ ಸಾಧ್ಯತೆಗಳಿವೆಯೇ ಎಂದರೆ ಅದೂ ಇಲ್ಲ. ಈತನಕ ಅದ್ಯಾವುದೋ ಪ್ರಭಾವದಿಂದ ತನ್ನ ಕ್ಷೇತ್ರದ ಜನರನ್ನು ಮರುಳು ಮಾಡಿ ಚುನಾವಣೆಯಲ್ಲಿ ಗೆದ್ದು ಬರುತ್ತಿದ್ದ. ಆದರೆ ಈಗ ಈತನ ವರ್ತನೆಯನ್ನು ನೋಡಿ ಅಲ್ಲಿನ ಜನ ಕೂಡ ಬಸವಳಿದಂತೆ ಕಾಣುತ್ತಿದೆ.

ಉಮೇಶ್ ಕತ್ತಿ ಎರಡು ದಶಕಗಳ ತನ್ನ ಆಡಳಿತಾವಧಿಯಲ್ಲಿ ತನ್ನ ಹುಕ್ಕೇರಿ ಕ್ಷೇತ್ರದ ಅಭಿವೃದ್ಧಿಗೆ ಕಡಿದದ್ದೂ ಅಷ್ಟರಲ್ಲಿಯೇ ಇದೆ. ಇದ್ದ ಅಧಿಕಾರವನ್ನು ತಾನು ಭದ್ರಗೊಳ್ಳುವುದಕ್ಕೆ, ದುಡ್ಡು ಮಾಡುವುದಕ್ಕೆ ಬಳಸಿಕೊಂಡರೇ ವಿನಃ ಕ್ಷೇತ್ರದ ಅಭಿವೃದ್ಧಿಯ ಕಡೆ ತಿರುಗಿಯೂ ನೋಡಲಿಲ್ಲ. ಜೆ.ಎಚ್.ಪಟೇಲರ ಮಂತ್ರಿಮಂಡಲದಲ್ಲಿ ಲೋಕೋಪಯೋಗಿ ಸಚಿವನಾಗಿದ್ದಾಗಲೂ ಈತ ತನ್ನ ಕ್ಷೇತ್ರದ ರಸ್ತೆಗಳ ಗುಂಡಿಯನ್ನೂ ಮುಚ್ಚಲಿಲ್ಲ. ಆದರೆ ಕಾಗದದ ಮೇಲೆ ಕೇವಲ ಇವನ ಕ್ಷೇತ್ರದ ರಸ್ತೆಗಳು ಮಾತ್ರವಲ್ಲ ಇಡೀ ರಾಜ್ಯದ ಹಲವಾರು ರಸ್ತೆಗಳು ರಿಪೇರಿಯಾಗಿದ್ದವು! ಹುಕ್ಕೇರಿಯಲ್ಲಿ ಇವತ್ತಿಗೂ ಒಂದು ಬಸ್ ನಿಲ್ದಾಣವಾಗಲಿ, ಅಗ್ನಿಶಾಮಕ ಸೇವೆಯಾಗಲಿ ಇಲ್ಲ. ಕೊಳೆತು ನಾರುತ್ತಿರುವ ಈ ಊರು ಒಂಥರಾ ಹಂದಿ ಗೂಡಿನಂತಿದೆ ಎಂದರೆ ಅದಕ್ಕೆ ಉಮೇಶ್ ಕತ್ತಿಯ ಕೊಡುಗೆ ಬಹಳಷ್ಟು ಇದೆ. ಇನ್ನು ಈತನ ಸರ್ವಾಧಿಕಾರದಡಿಯಲ್ಲಿ ಹಿರಾ ಷುಗರ್ ಸಕ್ಕರೆ ಕಾರ್ಖಾನೆ ರೈತರು ಬೆಳೆದ ಕಬ್ಬನ್ನು ಹಿಂಡುವ ಬದಲಾಗಿ ರೈತರನ್ನೇ ನಿರ್ದಯವಾಗಿ ಹಿಂಡುತ್ತದೆ.

ಉಮೇಶ್ ಕತ್ತಿಯ ಈ ಎಲ್ಲ ಮಹತ್ಸಾಧನೆಗಳು ಕ್ಷೇತ್ರದ ಜನರಿಗೆ ಚೆನ್ನಾಗಿ ತಿಳಿದಿವೆ. ಹಾಗಾಗಿ ಈ ಬಾರಿ ಆತನೇನಾದರೂ ಬಿಜೆಪಿ ಸೇರಿಕೊಂಡು ಮತ್ತೆ ಚುನಾವಣೆ ಎದುರಾದರೆ ಜನ ಕೂಡ ಈತನನ್ನು ತಿರಸ್ಕರಿಸುವ ಸಾಧ್ಯತೆಗಳೇ ಜಾಸ್ತಿಯಿವೆ.

ಒಟ್ಟಿನಲ್ಲಿ ಅತ್ತ ಜೆಡಿಎಸ್‌ನ ವಿಶ್ವಾಸ ಉಳಿಸಿಕೊಂಡಿಲ್ಲ, ಇತ್ತ ಬಿಜೆಪಿಯ ಸಖ್ಯ ಬೆಳೆಸಿಕೊಂಡಿಲ್ಲ, ಕೊನೆಗೆ ಕ್ಷೇತ್ರದ ಜನರ ಆಶೀರ್ವಾದವೂ ಇಲ್ಲ! ಇದು ಉಮೇಶ್ ಕತ್ತಿ ಎಂಬ ದುರಂತ ನಾಯಕನ ಚಿಂತಾಜನಕ ಸ್ಥಿತಿ!

■ ಮಧುಬಾಲ

[illegible]



ಹಾವು ಮುಂಗುಸಿಯಂತಿರುವ ದೊಡ್ಡಬಳ್ಳಾಪುರದ ಆಯಿಲ್‌ಸನ್ ಜಾಲಪ್ಪ ಮತ್ತು ಸಾಯಿಲ್‌ಸನ್ ದೇವೇಗೌಡರ ಮಧ್ಯೆ ಒಂದು ಸಾಮ್ಯವಿದೆ. ಪುತ್ರ ವಾತ್ಸಲ್ಯ ಮತ್ತು ಬಿಜೆಪಿ ಜೊತೆಗಿನ ಚಕ್ಕಂದದ ವಿಷಯದಲ್ಲಿ ಇಬ್ಬರದೂ ಒಂದೇ ವರಸೆ. ಅವತ್ತು ಮಗನನ್ನು ಯಡ್ಡಿ ಜೊತೆ ಕೂಡಿಕೆಗೆ ಬಿಟ್ಟು ತನಗೇನೂ ಗೊತ್ತೇ ಇಲ್ಲ ಎಂದು ಡ್ರಾಮಾ ಮಾಡಿದ ದೇವೇಗೌಡರ ಶೈಲಿಯಲ್ಲೇ ಈ ಬಾರಿ ಜಾಲಪ್ಪ ನಟಿಸಿದ್ದಾರೆ.

ಏಕಾಏಕಿ ಬಿಜೆಪಿಗೆ ಹಾರಿ, ದೊಡ್ಡಬಳ್ಳಾಪುರದ ಅಭಿವೃದ್ಧಿಗೋಸ್ಕರವೇ ತಾನು ಬಿಜೆಪಿ ಸೇರಿದ್ದೇನೆ, ಇದಕ್ಕೆ ತಂದೆಯವರ ಕ್ಷಮೆ ಯಾಚಿಸುತ್ತೇನೆ ಎಂದ ಜಾಲಪ್ಪ ಪುತ್ರ ನರಸಿಂಹಸ್ವಾಮಿಗೂ ಅವತ್ತು ಧರ್ಮಸಿಂಗ್ ಸರ್ಕಾರ ಕೆಡವಿ ಬಿಜೆಪಿ ತೆಕ್ಕೆಗೆ ಬಿದ್ದು ಅಪ್ಪನ ಕ್ಷಮೆ ಯಾಚಿಸುತ್ತೇನೆ ಎಂದ ಕುಮಾರಸ್ವಾಮಿಗೂ ಹೆಚ್ಚು ವ್ಯತ್ಯಾಸವಿಲ್ಲ.


ಇದು ಅಪ್ಪಮಕ್ಕಳ ನಾಟಕದ ಮತ್ತೊಂದು ಅವತರಣಿಕೆಯಷ್ಟೇ. ದೇವೇಗೌಡರ ಜೊತೆ ಗುಟ್ಟಾಗಿ ಕೈ ಜೋಡಿಸಿದ ಖರ್ಗೆ-ಧರ್ಮಸಿಂಗ್ ವಿರುದ್ಧ ಜಾಲಪ್ಪನವರಿಗೆ ವಿಪರೀತ ಹೊಟ್ಟೆ ಸಂಕಟವಿದೆ. ಸಾಲದ್ದಕ್ಕೆ ಕೋಲಾರದ ಕಾಂಗ್ರೆಸ್ ಅಧಿಪತಿ ಕೆ.ಎಚ್. ಮುನಿಯಪ್ಪನವರ ಕಾಟ ಬೇರೆ. ಚಿಕ್ಕಬಳ್ಳಾಪುರಕ್ಕೆ ತಮ್ಮ ಬಾಮೈದ ಜಿ.ಹೆಚ್. ನಾಗರಾಜ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವುದು ಜಾಲಪ್ಪನವರ ಉದ್ದೇಶವಾಗಿತ್ತು. ಅದಕ್ಕೆ ಮುನಿಯಪ್ಪ ಅಡ್ಡಗಾಲಿಟ್ಟರು. ಪರಿಣಾಮ ಬಾಮೈದ ನಾಗರಾಜ್ ಪಕ್ಷೇತರನಾಗಿ ನಿಂತು ಸೋತರು. ಗೌರಿಬಿದನೂರಿನಿಂದ ಶಿವಶಂಕರ ರೆಡ್ಡಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಲು ಜಾಲಪ್ಪ ಏನೆಲ್ಲಾ ಸರ್ಕಸ್ ಮಾಡಿದರೂ ಅದಕ್ಕೂ ಮುನಿಯಪ್ಪ ತಡೆಹಾಕಿದ್ದರು. ಶತಾಯಗತಾಯ ಶಿವಶಂಕರರೆಡ್ಡಿಯನ್ನು ಸೋಲಿಸುತ್ತೇನೆಂದ ಜಾಲಪ್ಪ ಶಪಥವೂ ಮಣ್ಣು ಪಾಲಾಯಿತು. ಇಷ್ಟೆಲ್ಲಾ ಅವಮಾನವನ್ನು ಹೇಗೋ ಸಹಿಸಿಕೊಂಡಿದ್ದ ಜಾಲಪ್ಪನವರಿಗೆ ಬರುಬರುತ್ತ ಖರ್ಗೆ ದೇವೇಗೌಡರಿಗೆ ಹೆಚ್ಚು ಆಪ್ತನಾಗುತ್ತಿರುವುದು ಹೊಟ್ಟೆಯಲ್ಲಿ ಖಾರ ಕಿವುಚಿದಂತಾಗಿದೆ. ಹಿಂದಿನಿಂದಲೂ ಸಿದ್ದರಾಮಯ್ಯ, ಸಿಂಧ್ಯ ಜೊತೆಗೆ ಜಾಲಪ್ಪನವರ ಒಡನಾಟ ಹೆಚ್ಚು. ಕಾಂಗ್ರೆಸ್ ಕದ್ದು ಮುಚ್ಚಿ ದೇವೇಗೌಡರ ಜೊತೆ ಬಿಜೆಪಿ ವಿರುದ್ಧ ಕೈಜೋಡಿಸಿದ್ದು ಮತ್ತಷ್ಟು ಕಂಗೆಡಿಸಿದೆ. ಸದ್ದಿಲ್ಲದೇ ಮಗ ನರಸಿಂಹಸ್ವಾಮಿಯನ್ನು ಬಿಜೆಪಿಗೆ ಸಾಗಹಾಕಿದ್ದಾರೆ. ತಾನು ಕೇರಳದಲ್ಲಿದ್ದೆ, ಮಗ ಬಿಜೆಪಿಗೆ ಹೋಗಿದ್ದು ಗೊತ್ತೇ ಇಲ್ಲ ಎನ್ನುವ ಅಪ್ಪ, ಇದಕ್ಕೆ ಅಪ್ಪನ ಕ್ಷಮೆಯಾಚಿಸುತ್ತೇನೆ ಎನ್ನುವ ಮಗ!




ದೇವೇಗೌಡರ ತಂತ್ರವನ್ನೇ ಜಾಲಪ್ಪ ಕಾಪಿ ಹೊಡೆದಿದ್ದಾರೆ.

ಕಾರವಾರ-ಅಂಕೋಲ

ಕ್ಷೇತ್ರದ ಜನರಿಗೆ ದ್ರೋಹ ಬಗೆದ ಅಸ್ನೋಟಿಕರ್!







ಕಾರವಾರ-ಅಂಕೋಲಾ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ 47,900 ಮತಗಳನ್ನು ಪಡೆಯುವ ಮೂಲಕ ವಿಜಯ ಸಾಧಿಸಿದ ಆನಂದ ವಸಂತ ಅಸ್ನೋಟಿಕರ್ ಕೇವಲ 40 ದಿನಗಳಲ್ಲಿ ಪಕ್ಷಕ್ಕೆ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ತೆಕ್ಕೆಗೆ ಬೀಳುವ ಮೂಲಕ ತನಗೆ ಟಿಕೆಟ್ ನೀಡಿದ ಕಾಂಗ್ರೆಸ್‌ಗೆ, ತನ್ನನ್ನು ಗೆಲ್ಲಿಸಿ ಕಳುಹಿಸಿದ ಕ್ಷೇತ್ರದ ಜನತೆಗೆ ದ್ರೋಹವೆಸಗಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ಹಿರಿಯ ನಾಯಕರಿದ್ದರೂ ಅವರನ್ನು ಬಿಟ್ಟು ಕಳೆದ ಚುನಾವಣೆಯಲ್ಲಿ 27 ವರ್ಷದ ಕಿರಿಯನಾದ ಆನಂದ್ ಅಸ್ನೋಟಿಕರ್‌ಗೆ ಪಕ್ಷದ ಟಿಕೆಟ್ ನೀಡಲಾಗಿತ್ತು. ಕಾರ್ಯಕರ್ತರ ಪರಿಶ್ರಮದಿಂದ ಅವರನ್ನು ಅಪಾರ ಅಂತರದಲ್ಲಿ ಗೆಲ್ಲಿಸಿದ್ದೂ ಆಯಿತು. ಆದರೆ ಈಗ ಬಿಜೆಪಿ ಮಡಿಲಿಗೆ ಬಿದ್ದು ಇಡೀ ಜಿಲ್ಲೆಯನ್ನು ಕೇಸರಿಮಯ ಮಾಡಲು ಹೊರಟಿರುವ ಅವರ ಬಗ್ಗೆ ಸಹಜವಾಗಿ ಕಾರ್ಯಕರ್ತರಲ್ಲಿ, ಜನರಲ್ಲಿ ಅಸಹನೆ ಮನೆ ಮಾಡಿದೆ.

"ನಾನು ಅಧಿಕಾರಕ್ಕಾಗಿ ಬಿಜೆಪಿ ಸೇರಿಲ್ಲ, ನನಗೆ ಯಾವುದೇ ಸ್ವಾರ್ಥವಿಲ್ಲ, ಕಾರವಾರ ಕ್ಷೇತ್ರ ಕಳೆದ 15 ವರ್ಷಗಳಿಂದ ಅಭಿವೃದ್ಧಿಯಿಂದ ಸಂಪೂರ್ಣ ಕುಂಠಿತಗೊಂಡಿದೆ. ಆದ್ದರಿಂದ ಅಭಿವೃದ್ಧಿಗೋಸ್ಕರ ಬಿಜೆಪಿ ಸೇರಿದ್ದೇನೆ" ಎಂದು ಅಸ್ನೋಟಿಕರ್ ಬೊಗಳೆ ಬಿಡುತ್ತಿದ್ದಾನೆ. ಹಾಗೆ ನೋಡಿದರೆ, ಕಾರವಾರ ಮತ್ತು ಅಂಕೋಲಾ ಎರಡೂ ತಾಲ್ಲೂಕುಗಳಲ್ಲಿ ತಾಲ್ಲೂಕು ಪಂಚಾಯತಿ, ಪಟ್ಟಣ ಪಂಚಾಯತಿ, ಗ್ರಾಮ ಪಂಚಾಯತಿಗಳು ಕಾಂಗ್ರೆಸ್ ಹಿಡಿತದಲ್ಲಿದ್ದವು. ಜಿಲ್ಲಾ ಪಂಚಾಯತಿ ಕೂಡ ಕಾಂಗ್ರೆಸ್ ಆಡಳಿತದಲ್ಲಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಕೆಲಸ ಮಾಡಲು ಇಡೀ ಜಿಲ್ಲೆಯಲ್ಲಿ ಪೂರಕ ವಾತಾವರಣ ಇದೆ. ಹೀಗಿದ್ದಾಗಲೂ ಅಸ್ನೋಟಿಕರ್ ಶಾಸಕನಾಗಿ 40 ದಿನಗಳಲ್ಲಿ ಬಿಜೆಪಿ ಸೇರಿದ್ದಾನೆ. ಅದೂಅಲ್ಲದೇ ಇನ್ನಿತರ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಅಧ್ಯಕ್ಷ ಮತ್ತು ಸದಸ್ಯರನ್ನು ತನ್ನ ಬಗಲಿಗೆ ಹಾಕಿಕೊಂಡು ವಲಸೆ ಹೋಗಿದ್ದಾನೆ.

ಸೊರಗಿದ ಕಾಂಗ್ರೆಸ್-ಜೆಡಿಎಸ್!

ಅಸ್ನೋಟಿಕರ್ ಬಿಜೆಪಿ ಸೇರುತ್ತಿದ್ದಂತೆ ಕಾಂಗ್ರೆಸ್‌ನಿಂದ ಬಿಜೆಪಿಯತ್ತ ಗುಳೆ ಹೋಗುತ್ತಿರುವವರ ಸಂಖ್ಯೆಯೂ ಜಾಸ್ತಿಯಾಗಿದ್ದು ಇಡೀ ಜಿಲ್ಲಾ ಕಾಂಗ್ರೆಸ್ ಸೊರಗಿ ಸುಣ್ಣವಾಗಿದೆ. ಅಂಕೋಲಾ ಕಾಂಗ್ರೆಸ್‌ನ ಜೀವಜಲದಂತಿದ್ದ ಹಿರಿಯ ನಾಯಕ ಆರ್.ಎನ್.ನಾಯಕ್ ಕೂಡ ಆನಂದ ಜೊತೆ ಬಿಜೆಪಿ ಸೇರಿದ್ದಾರೆ. ಅಲ್ಲದೇ, ಮೂರು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಹಾಗೂ ಒಟ್ಟು 9 ಮಂದಿ ಪಟ್ಟಣ ಪಂಚಾಯತ್ ಸದಸ್ಯರು ಕಾಂಗ್ರೆಸ್ ತೊರೆದು ಅಸ್ನೋಟಿಕರ್‌ನನ್ನು ಹಿಂಬಾಲಿಸಿದ್ದಾರೆ. ಕಾಂಗ್ರೆಸ್‌ನ ಜಿಲ್ಲಾ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅನ್ವರ್ ಎಸ್. ಮುಲ್ಲಾ, ಜಿಲ್ಲಾ ಕಾಂಗ್ರೆಸ್ ಪದವೀಧರ ಮತದಾರರ ಕ್ಷೇತ್ರದ ಅಧ್ಯಕ್ಷ ರಾಮಕೃಷ್ಣ ನಾಯಕ್, ಜಿಲ್ಲಾ ಕಾಂಗ್ರೆಸ್ ಸೇವಾದಳದ ಅಧ್ಯಕ್ಷ ಅಪ್ಪಣ್ಣ ಕಾಂಬ್ಳೆ ಈಗಾಗಲೆ ಪಕ್ಷಕ್ಕೆ ರಾಜೀನಾಮೆ ನೀಡಿ ಆನಂದ ಅಸ್ನೋಟಿಕರ್‌ನನ್ನು ಹಿಂಬಾಲಿಸಿದ್ದಾರೆ. ಇದೆಲ್ಲದರಿಂದ ಈಗ ಅಂಕೋಲಾದ ಕಾಂಗ್ರೆಸ್‌ನಲ್ಲಿ ಪ್ರಭಾವಿ ನಾಯಕರೇ ಇಲ್ಲದಂತಾಗಿದೆ. ಅದೇರೀತಿ ಕಾರವಾರದಲ್ಲಿ ಕೂಡ ಕಾಂಗ್ರೆಸ್ ಮನೆ ಸಂಪೂರ್ಣ ಖಾಲಿಯಾಗಿದೆ. ಇನ್ನು ಶಿರಸಿ, ಕುಮಟಾ, ಹೊನ್ನಾವರ, ಭಟ್ಕಳ, ಹಳಿಯಾಳ ಮುಂತಾದ ಪ್ರದೇಶಗಳ ಹಲವು ಕಾಂಗ್ರೆಸ್ಸಿಗರನ್ನು ಬಿಜೆಪಿಗೆ ಸೆಳೆಯುವ ಕಾರ್ಯದಲ್ಲಿ ಆನಂದ ನಿರತರಾಗಿದ್ದಾರೆ.

ಆನಂದ್ ಅಸ್ನೋಟಿಕರ್‌ನ ತಾಯಿ ವಿಧಾನ ಪರಿಷತ್ ಸದಸ್ಯೆ ಶುಭಲತಾ ಅಸ್ನೋಟಿಕರ್ ಈಗಾಗಲೇ ಪುತ್ರರತ್ನನ ನಿರ್ಧಾರಕ್ಕೆ ತಮ್ಮ ಬೆಂಬಲ ಸೂಚಿಸಿದ್ದಾರಲ್ಲದೆ ಅವರೂ ಸಹ ಬಿಜೆಪಿಯತ್ತ ಮುಖ ಮಾಡುತ್ತಿರುವಂತಿದೆ. ಆನಂದರ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಿರುವ ಶುಭಲತಾ ಅಸ್ನೋಟಿಕರ್ ಗೌರವಯುತವಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಪ್ರದೇಶ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಉಮೇಶ ಭಟ್ಟ ಸೂಚಿಸಿದ್ದಾರೆ. ಶುಭಲತಾ ಅಸ್ನೋಟಿಕರ್ ಅವರ ವಿಧಾನ ಪರಿಷತ್ತಿನ ಸದಸ್ಯತ್ವ ಮುಂದಿನ ವರ್ಷ ತೆರವಾಗಲಿರುವುದರಿಂದ ಆ ಸ್ಥಾನ ಶಿವಾನಂದ ನಾಯ್ಕರ ಪಾಲಾಗುವ ಸಾಧ್ಯತೆಯಿದೆ.

ಈ ಸಾಮೂಹಿಕ ವಲಸೆಗೆ ಜೆಡಿಎಸ್ ಕೂಡ ಹೊರತಾಗಿಲ್ಲ. ಹಳಿಯಾಳದ ಹಾಗೂ ಕುಮಟಾಗಳ ಜೆಡಿಎಸ್ ಶಾಸಕರಾದ ಸುನೀಲ ಹೆಗಡೆ ಮತ್ತು ದಿನಕರ ಶೆಟ್ಟಿಯವರೂ ಬಿಜೆಪಿ ಕಡೆ ಮುಖ ಮಾಡಿದ್ದು ಜೆಡಿಎಸ್ ವಲಯದಲ್ಲೂ ಆತಂಕ ಸೃಷ್ಟಿಯಾಗಿದೆ.

ವಾಸ್ತವದಲ್ಲಿ ಕಾಂಗ್ರೆಸ್‌ನಲ್ಲಿ ಪರಂಪರಾಗತವಾಗಿ ಮನೆಮಾಡಿಕೊಂಡು ಬಂದಿರುವ ವೈಮನಸ್ಸು-ಒಳಜಗಳೇ ಒಂದು ರೀತಿಯಲ್ಲಿ ಈ ಸಾಮೂಹಿಕ ಗುಳೆಗೆ ಕಾರಣವಾಗಿವೆ. ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಮಾಜಿ ಸಚಿವ ಆರ್.ವಿ. ದೇಶಪಾಂಡೆ ಮತ್ತು ಮಾಜಿ ಸಂಸದೆ ಮಾರ್ಗರೆಟ್ ಆಳ್ವಾರಂಥವರು ಪಕ್ಷದ ಕಾರ್ಯಕರ್ತರನ್ನು, ಕಿರಿಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆಯಲ್ಲಿ ತೊಡಗಿದ್ದರೆ ಉತ್ತರ ಕನ್ನಡದಲ್ಲಿ ಕಾಂಗ್ರೆಸ್‌ಗೆ ಈ ಗತಿ ಬರುತ್ತಿರಲಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆನಂದ ಅಸ್ನೋಟಿಕರ್ ಪರವಾಗಿ ಮತಯಾಚನೆಯಲ್ಲಿ ಈ ಇಬ್ಬರೂ ನಾಯಕರು ಆಪ್ತಾಗಿ ತೊಡಗಿಸಿಕೊಂಡಿರಲಿಲ್ಲ.

ಅಸ್ನೋಟಿಕರ್‌ಗೆ ಪ್ರತಿಸ್ಪರ್ಧಿ ಯಾರು?

ಮೀನುಗಾರ ಸಮುದಾಯದ ಪ್ರಭಾವಿ ನಾಯಕ ಮತ್ತು ಕಾರವಾರ ನಗರಸಭಾ ಅಧ್ಯಕ್ಷ ಗಣಪತಿ ಉಳ್ವೇಕರ್ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಅವರ ಪರವಾಗಿ ಪ್ರಬಲ ಒತ್ತಡಗಳಿದ್ದರೂ ಕೊನೆಕ್ಷಣದಲ್ಲಿ ಟಿಕೆಟ್ ಆನಂದ ಅಸ್ನೋಟಿಕರ್ ಪಾಲಾಯಿತು. ಗಣಪತಿ ಉಳ್ವೇಕರ್ ಅವರ ಅಭಿಮಾನಿಗಳು ಅವರನ್ನು ಪಕ್ಷೇತರವಾಗಿ ಸ್ಪರ್ಧೆಗಿಳಿಸಿ 27,500 ಮತಗಳನ್ನು ಪಡೆದು ಅಚ್ಚರಿ ಮೂಡಿಸಿದ್ದರು. ಆ ಮೂಲಕ ಅವರು ಈ ಕ್ಷೇತ್ರದ ಭವಿಷ್ಯದ ನಾಯಕ ಎಂಬಂತೆ ಪರಿಗಣಿಸಲ್ಪಟ್ಟಿದ್ದರು. ಇಲ್ಲಿ ಬಿಜೆಪಿ ಮೂರನೇ ಸ್ಥಾನಕ್ಕೆ ಇಳಿದಿತ್ತು.

ಬರುವ ಆರು ತಿಂಗಳಲ್ಲಿ ಆನಂದ ಅಸ್ನೋಟಿಕರ್ ಮತ್ತೆ ಚುನಾವಣೆ ಎದುರಿಸಬೇಕಾಗಿದೆ. ಗಣಪತಿ ಉಳ್ವೇಕರ್ ಅವರನ್ನೇ ಕಾಂಗ್ರೆಸ್‌ನಿಂದ ಕಣಕ್ಕಿಳಿಸುವುದು ಗ್ಯಾರಂಟಿ. ಇಬ್ಬರ ನಡುವೆ ಭಾರಿ ದೊಡ್ಡ ಸ್ಪರ್ಧೆ ನಡೆಯಲಿದ್ದು ಆನಂದ ಪರವಾಗಿ ಗಣಿ ಧಣಿಗಳ ಹಣದ ಹೊಳೆ ಹರಿಯಲಿದೆ. ಈಗ ಕಾಂಗ್ರೆಸ್ ಕೂಡ ಇದನ್ನು ತನ್ನ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಂಡಿದ್ದು ಈಗಿನಿಂದಲೇ ಚುನಾವಣಾ ಕಾರ್ಯತಂತ್ರ ರೂಪಿಸುತ್ತಿದೆ. ಆದರೆ ಕಾಂಗ್ರೆಸ್‌ನ ಮಾಜಿ ಪ್ರಭಾವಿ ನಾಯಕರು ಮತ್ತು ಜನಪ್ರತಿನಿಧಿಗಳು ಆನಂದ ಜೊತೆ ಇರುವುದರಿಂದ ಅದು ಆನಂದಗೆ ಪೂರಕವಾಗಲಿದೆ. ಅಲ್ಲದೇ, ಕಳೆದ ಚುನಾವಣೆಯನ್ನು ಅತ್ಯಂತ ಚಾಣಾಕ್ಷತನದಿಂದ ನಿರ್ವಹಿಸಿದ ಆರ್.ಎನ್. ನಾಯಕ ಆನಂದ ಜೊತೆ ಇರುವುದರಿಂದ ಅವರಿಗೆ ದೊಡ್ಡ ಪ್ಲಸ್ ಪಾಯಿಂಟ್ ಆಗಿದೆ.

ರಮೇಶ್ ಅಂಕೋಲ

ಬಿಜೆಪಿಯತ್ತ ಮುಖೇಡಿಗಳು ಕುರಿಗಳು ಸಾರ್ ಕುರಿಗಳು!

ಬಳ್ಳಾರಿಯ ಗಣಿ ರೆಡ್ಡಿಗಳ ಮ್ಯಾಗ್ನೆಸ್ ಧೂಳಿಗೆ ಮರುಳಾಗಿ ಕೊಪ್ಪಳ ಜಿಲ್ಲೆಯ ವಿರೋಧ ಪಕ್ಷದ ಮೂವರು ಶಾಸಕರು ಮತ್ತು ಅರ್ಧ ಡಜನ್ ಮುಖೇಡಿ ನಾಯಕರು ಈಗ ಅಧಿಕಾರದಲ್ಲಿರುವ ಬಿಜೆಪಿ ಸೇರಲು ತುದಿಗಾಲಲ್ಲಿ ನಿಂತಿದ್ದಾರೆ. "ರೆಡ್ಡಿಗಳಿದ್ದರೆ ನಮಗ್ಯಾವುದರ ಚಿಂತೆ" ಎಂದು ಈಗ ಜಪ ಮಾಡುತ್ತಿರುವ ಈ ಅವಿವೇಕಿಗಳು ಯಲಬುರ್ಗಾದ ಶಾಸಕ ಈಶಣ್ಣ ಗುಳಗಣ್ಣನ ಪ್ರಸ್ತುತ ಪಜೀತಿ ನೋಡಿದರೆ ನಾಳೆ ತಮಗೇನಾಗುತ್ತದೆ ಎಂದು ಅರ್ಥವಾಗುತ್ತದೆ.

ಮೊನ್ನೆಯ ವಿಧಾನಸಭೆ ಚುನಾವಣೆಯಲ್ಲಿ ಯಲಬುರ್ಗಾದಿಂದ ಬಿಜೆಪಿಯ ಅಭ್ಯರ್ಥಿ ಈಶಣ್ಣ ಗುಳಗಣ್ಣ ಭಾರೀ ಬಹುಮತದೊಂದಿಗೆ ಗೆದ್ದಿದ್ದರು. ಅದಕ್ಕೆ ಕಾರಣ ಅವರು ಈ ಹಿಂದೆ ಎರಡು ಬಾರಿ ಸೋತಿದ್ದರ ಬಗೆಗಿನ ಮತದಾರರ ಅನುಕಂಪ, ಕಾಂಗ್ರೆಸ್‌ನ ರಾಯರೆಡ್ಡಿಯ ದುರಹಂಕಾರ ಮತ್ತು ಚುನಾವಣೆಗೆ ಮುನ್ನ ಬಿಜೆಪಿಯ ಅಭ್ಯರ್ಥಿಗಳಿಗೆ ಗಣಿ ದಂಧೆಯ ಜನಾರ್ದನ ರೆಡ್ಡಿ ಹಣ ಕೊಟ್ಟಂತೆ ಈಶಣ್ಣನಿಗೂ 96 ಲಕ್ಷ ರೂಪಾಯಿ ಕೊಟ್ಟಿದ್ದು. ಆದರೆ ಅದು ಪಾರ್ಟಿ ಫಂಡ್ ಆಗಿರದೇ ಗಣಿ ಫಂಡ್ ಆಗಿತ್ತು!


ರೆಡ್ಡಿ ಕೊಟ್ಟ ಗಣಿ ಹಣವನ್ನು ಹರಿಸಿದ ಈಶಣ್ಣ ಜನರ ಅನುಕಂಪ ಪಡೆದು ಗೆದ್ದೇ ಬಿಟ್ಟ. ಆದರೆ ಈಗ ನೋಡಿದರೆ ಈಶಣ್ಣ ಹೌಹಾರಿ ಕುಂತಿದ್ದಾನೆ. ಅದಕ್ಕೆ ಕಾರಣ "ನಾವು ಕೊಟ್ಟಿದ್ದು ಫ್ರೀ ಅಲ್ಲ, ಅದು ಸಾಲ" ಅನ್ನುತ್ತಿವೆ ರೆಡ್ಡಿಗಳು! ಹೀಗೆ ತಮ್ಮ ಪಕ್ಷದ ಶಾಸಕನಾದ ಈಶಣ್ಣನಿಗೇ ರೆಡ್ಡಿಗಳು ಈಗ ನೀರಿಳಿಸಲು ಕಾರಣ ಆತ ರೆಡ್ಡಿ ಗುಂಪಿನೊಂದಿಗೆ ತನ್ನನ್ನು ಗುರುತಿಸಿಕೊಳ್ಳದಿರುವುದು.

> ಗಣಿಧಣಿಗಳ ಹಣದ ಆಮಿಷಕ್ಕೆ ಹಲವು ಶಾಸಕರು ತಮ್ಮನ್ನು ಮಾರಿಕೊಂಡಿದ್ದಾರೆ. ಆದರೆ ಈ ವ್ಯಾಪಾರ ಇಲ್ಲಿಗೇ ನಿಂತಿಲ್ಲ. ಈಗಾಗಲೇ ಹಲವಾರು ಜಿಲ್ಲೆಗಳಲ್ಲಿ ವಿರೋಧ ಪಕ್ಷದ ನಾಯಕರು ಬಿಜೆಪಿ ಸೇರಿದ್ದಾರೆ ಅಥವಾ ಸೇರಲು ತುದಿಗಾಲ ಮೇಲೆ ನಿಂತಿದ್ದಾರೆ. ಅಂತಹ ಎರಡು ಜಿಲ್ಲೆಗಳ ರಾಜಕೀಯ ಚಿತ್ರಣ ಇಲ್ಲಿದೆ.

ಈಶಣ್ಣನ ಪರಿಸ್ಥಿತಿಯೇ ಹೀಗಿರುವಾಗ ಇದೇ ಯಲಬುರ್ಗಾದ ಮಾಜಿ ಶಾಸಕ ಶಿವಶರಣಪ್ಪ ಗೌಡ ಪಾಟೀಲ್ ಈಗ ತನ್ನ ಸ್ವಜಾತಿ ಸಚಿವ ಲಕ್ಷ್ಮಣ ಸವದಿಯ ಮೂಲಕ ಬಿಜೆಪಿ ಸೇರಲು ಹೊರಟಿದ್ದಾನೆ. ಮೊನ್ನೆಯ ಚುನಾವಣೆಯಲ್ಲಿ ಜೆಡಿಎಸ್‌ನಲ್ಲಿದ್ದ ಅದಕ್ಕೆ ಚೂರಿ ಹಾಕಿದ ಗೌಡ ತನ್ನ ಮಗ ಅರವಿಂದನನ್ನ ಮುಂದಿನ ಜಿಪಂ ಚುನಾವಣೆಯಲ್ಲಿ ಗೆಲ್ಲಿಸಲು ಒಪ್ಪಂದ ಮಾಡಿಕೊಂಡು ಬಿಜೆಪಿ ಸೇರಲಿದ್ದಾನೆ.







ಇನ್ನು ಕೊಪ್ಪಳದ ಶಾಸಕ ಸಂಗಣ್ಣ ಕರಡಿ 10 ಸಾವಿರ ಮತಗಳಿಂದ ಗೆದ್ದಿದ್ದು ಆತ ತನ್ನ ವರ್ಚಸ್ಸಿನಿಂದಲ್ಲ. ಬಡವರಿಗೆ ಕೊಡಬೇಕಾದ ಆಶ್ರಯ ಮನೆಗಳ ಹೆಸರಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ಮಾಡಿ, ನಕಲಿ ಹಕ್ಕುಪತ್ರ ಕೊಟ್ಟು ದೊಡ್ಡ ಹಗರಣದಲ್ಲಿ ಸಿಲುಕಿಕೊಂಡಿರುವ ಕರಡಿ ಗೆಲ್ಲಲು ಮುಖ್ಯ ಕಾರಣ ಕಾಂಗ್ರೆಸ್‌ನಲ್ಲಿ ಭಿನ್ನಮತೀಯರ ಕೈವಾಡ. ಈ ಸಂಗಣ್ಣ ಹಿಂದೊಮ್ಮೆ ಬಿಜೆಪಿಯಲ್ಲಿದ್ದಾಗ "ನನಗೆ ಅಲ್ಪಸಂಖ್ಯಾತರ ಓಟು ಬೇಕಿಲ್ಲ" ಎಂದು ಬಹಿರಂಗವಾಗಿ ಹೇಳಿದ್ದನಲ್ಲದೇ ಕೋಮು ಪ್ರಚೋದಕ ಭಾಷಣಗಳನ್ನು ಮಾಡಿದ್ದ. ಅದೆಲ್ಲದರ ಪರಿಣಾಮದಿಂದಾಗಿ ಇಲ್ಲಿ ಸೋತು ಹೋಗಿದ್ದ. ಕೊನೆಗೆ ದೇವೇಗೌಡರ ಜೆಡಿಎಸ್‌ನಲ್ಲಿ ಆಶ್ರಯ ಪಡೆದು ಒಂದಿಷ್ಟು ಚಿಗುರಿಕೊಂಡ ಸಂಗಣ್ಣ ಆ ನಂತರ ಬಿಜೆಪಿಯನ್ನು ಬೈಯುತ್ತಲೇ ಬಂದಿದ್ದ.

ಈಗ ನೋಡಿದರೆ ಒಂದೆಡೆ ಆತನ ಆಶ್ರಯ ಹಗರಣದ ಫೈಲ್ ಹಿಡಿದು ರೆಡ್ಡಿಗಳು ಆತನನ್ನು ಬೆದರಿಸುತ್ತಿದ್ದಾರೆ. ಇನ್ನೊಂದೆಡೆ ಬಿಜೆಪಿ ಪಕ್ಷ ಸೇರಿದರೆ 25 ಕೋಟಿ ರೂ. ನೀಡುವುದಾಗಿ ಆಮಿಷವನ್ನೂ ಒಡ್ಡಿದ್ದಾರೆ. ಇದನ್ನು ನೋಡಿ ಸಂಗಣ್ಣನ ಬಾಯಲ್ಲಿ ನೀರು ಹರಿಯುತ್ತಿದೆ. ಒಂದು ವೇಳೆ ತಾನು ಬರುವ ಐದು ವರ್ಷ ಶಾಸಕನಾಗಿದ್ದರೂ ಇಷ್ಟೊಂದು ಹಣ ಗಳಿಸುವುದು ಅಸಾಧ್ಯ ಎಂದು ಲೆಕ್ಕ ಹಾಕಿರುವ ಸಂಗಣ್ಣ ಈಗ ಬಿಜೆಪಿಗೆ ಸೇರಿ ಲಿಂಗಾಯತ ಪ್ಲಸ್ ವಾಲ್ಮೀಕಿ ಮತಗಳಿಂದ ಮತ್ತೆ ಗೆದ್ದು ಬರುವ ಪ್ಲಾನ್ ಹಾಕಿದ್ದಾನೆ. ಈ ವಿಷಯ ಗೊತ್ತಾಗುತ್ತಿದ್ದಂತೆ ಸಂಗಣ್ಣನಂತಹ ಸುಂಗಣ್ಣನನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಡಿ ಎಂದು ಸ್ಥಳೀಯ ಚೆಡ್ಡಿಗಳು ಬಾಯಿ ಬಡಿದುಕೊಳ್ಳಹತ್ತಿವೆ.

ಅಂದಹಾಗೆ ಈ ಸಂಗಣ್ಣ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ತಕ್ಷಣವೇ ಹೊಸಪೇಟೆಯಲ್ಲಿ ಸೋತಿರುವ ಗಣಿ ಮಾಲೀಕರಾದ ಹೆಚ್.ಆರ್. ಗವಿಯಪ್ಪ ಅಥವಾ ದೀಪಕ್ ಸಿಂಗ್ ಕೊಪ್ಪಳಕ್ಕೆ ಲಗ್ಗೆ ಇಡುವುದು ಖಚಿತ.

ಇನ್ನು ಗಂಗಾವತಿಯ ಮಾಜಿ ಸಂಸದ ಹೆಚ್.ಜಿ. ರಾಮುಲು ಅವರ ಪುತ್ರ ಶ್ರೀನಾಥ ಸದ್ಯ ಕಾಂಗ್ರೆಸ್‌ನಿಂದ ಎಂಎಲ್‌ಸಿ. ಈ ಹಿಂದೆ ಈ ಶ್ರೀನಾಥ್ ಡಿಸಿಸಿ ಅಧ್ಯಕ್ಷನಾಗಿದ್ದಾಗ ಗುಜರಾತ್ ಹತ್ಯಾಕಾಂಡವನ್ನು ವಿರೋಧಿಸಿ ಕೊಪ್ಪಳ ಡಿಸಿ ಕಚೇರಿ ಮುಂದೆ ತಾಸುಗಟ್ಟಲೇ ಭಾಷಣ ಬಿಗಿದು ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಬಾಯಿತುಂಬ ಬೈದಿದ್ದ. ಆದರೆ ಈಗ ಈ ಶ್ರೀನಾಥ್ ಇಷ್ಟು ದಿನ ಹೇಳುತ್ತಿದ್ದ ತತ್ವ-ಸಿದ್ಧಾಂತ ತೊರೆದು ಬಿಜೆಪಿ ಸೇರಲು ಸಿದ್ಧನಾಗಿದ್ದಾನೆ. ಬರುವ ಲೋಕಸಭಾ ಚುನಾವಣೆಯಲ್ಲಿ ಕೊಪ್ಪಳದಿಂದ ಬಿಜೆಪಿ ಅಭ್ಯರ್ಥಿಯಾಗಲಿದ್ದಾನೆ ಶ್ರೀನಾಥ!

ಎಲ್ಲಕ್ಕಿಂತ ಮಜವಾಗಿರುವುದು ಕುಷ್ಟಗಿಯಲ್ಲಿಯ ರಾಜಕೀಯ ಸ್ಥಿತಿ. ಇಲ್ಲಿ ಕಾಂಗ್ರೆಸ್‌ನಿಂದ ಗೆದ್ದಿರುವ ಅಮರೇಗೌಡ, ಜೆಡಿಎಸ್‌ನಿಂದ ಸೋತಿರುವ ಶರಣಪ್ಪ, ಬಿಜೆಪಿಯಿಂದ ಸೋತಿರುವ ದೊಡ್ಡನಗೌಡ... ಇವರೆಲ್ಲರೂ ಈಗ ಬಿಜೆಪಿಯ ಜಪ ಮಾಡುತ್ತಿದ್ದಾರೆ. ಹೊರಗಿನಿಂದ ಈ ಕ್ಷೇತ್ರಕ್ಕೆ ಬಂದು ಗೆದ್ದಿರುವ ಅಮರೇಗೌಡನ ವಿರುದ್ಧ ಶರಣಪ್ಪ, ದೊಡ್ಡನಗೌಡರಷ್ಟೇ ಅಲ್ಲ, ಕಾಂಗ್ರೆಸ್ಸಿನ ಹಸನ್‌ಸಾಬ ಸೇರಿದಂತೆ ಅನೇಕರಿಗೆ ಅಸಮಾಧಾನವಿದೆ. ಇದಕ್ಕೆ ಸರಿಯಾಗಿ ತಾನು ಗೆದ್ದು ತಿಂಗಳಾದರೂ ಜಿಲ್ಲಾ ಕಾಂಗ್ರೆಸ್ಸಿಗರಾಗಲಿ, ಕೆಪಿಸಿಸಿಯವರಾಗಲಿ "ಹೇಗಿದ್ದೀಯಪ್ಪಾ?" ಅಂತ ತನ್ನನ್ನು ಮಾತನಾಡಿಸಿಲ್ಲ ಎಂಬ ಅಸಮಾಧಾನ ಅಮರೇಗೌಡನದ್ದು. ಅದಕ್ಕೆಂದೇ ಆತ ತನ್ನನ್ನು ಸನ್ಮಾನಿಸಲು ಕರೆಯುವ ಸಮಾರಂಭಗಳಲ್ಲಿ ತಾನು ಕಾಂಗ್ರೆಸ್ಸಿಗನಾಗಿರುವುದನ್ನೇ ಮರೆತು ಇತರೆ ಪಕ್ಷಗಳನ್ನು ಒಡೆಯುವ ಬಿಜೆಪಿಯ ಕಾರ್ಯತಂತ್ರವನ್ನು ಬೆಂಬಲಿಸಿ ಮಾತನಾಡುತ್ತಿದ್ದಾನೆ. ಈ ಅಮರೇಗೌಡ ಈಗ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಬಿಸಾಡಿ ಬಿಜೆಪಿ ಸೇರಲು ತುದಿಗಾಲಲ್ಲಿ ನಿಂತಿದ್ದಾನೆ.

ಅಮರೇಗೌಡನ ಈ ನಡೆ-ನುಡಿಯನ್ನು ನೋಡಿ ಶರಣಪ್ಪ ಮತ್ತು ದೊಡ್ಡನಗೌಡ ದಿಗಿಲುಗೊಂಡಿದ್ದಾರೆ. ಇವರಿಬ್ಬರೂ ಬಿಜೆಪಿಯಲ್ಲೇ ಇದ್ದು ಬಿಡೋಣ ಎಂಬ ನಿರ್ಧಾರಕ್ಕೆ ತಡೆ ಒಡ್ಡಿರುವ ಅಮರೇಗೌಡ ಹಾಗೊಮ್ಮೆ ಬಿಜೆಪಿ ಸೇರಿದ್ದೇ ಆದರೆ ಇವರಿಬ್ಬರು ಸೀದಾ ಕಾಂಗ್ರೆಸ್ ಸೇರುವುದು ಖಚಿತವಾಗಿದೆ.

ಖಾಸಗಿ ವಾಹನಗಳಿಗೆ ಕುರಿಗಳನ್ನು ತುಂಬಿದಂತೆ ತನ್ನ ಗಣಿ ಲಾರಿಗಳಿಗೆ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರನ್ನು ತುಂಬುತ್ತಿರುವ ಜನಾರ್ದನ ರೆಡ್ಡಿಯ ಈ ಕೆಲಸವೇ ಮುಂದೆ ಬಿಜೆಪಿಗೆ ಮುಳುವಾದರೂ ಆಶ್ಚರ್ಯವಿಲ್ಲ. ಇವರೆಲ್ಲ ಒಮ್ಮೆ ಯಲಬುರ್ಗಾ ಶಾಸಕ ಈಶಣ್ಣನ ಪ್ರಸ್ತುತ ಸ್ಥಿತಿ ಅರಿತುಕೊಂಡರೆ, ರೆಡ್ಡಿಗಳ ರಾಜಕೀಯ ಎಂಥದ್ದು ಎಂಬುದು ಗೊತ್ತಾಗುತ್ತದೆ.

ಆದರೆ ಇವರ್‍ಯಾರೂ ಸದ್ಯ ತಲೆ ಎತ್ತಿ ನೋಡದೆ ಕುರಿ ಮಂದೆಗಳಂತೆ ಸಾಗುತ್ತಿದ್ದಾರೆ.

ವೃದ್ಧೆಯ ಜಾಗಕ್ಕೆ ಗಂಟುಬಿದ್ದ ರವಿ ಸುಬ್ರಹ್ಮಣ್ಯ!

ಬೆಂಗಳೂರಿನ ಬಸವನಗುಡಿ ಕ್ಷೇತ್ರದ ಶಾಸಕ ರವಿ ಸುಬ್ರಹ್ಮಣ್ಯನಿಗೆ ಅದೇನು ಹಸಿವೆಯಾಗಿತ್ತೋ ಗೊತ್ತಿಲ್ಲ, ಅಲ್ಲಲ್ಲಿ ತಿಂದದ್ದು ಸಾಲದೆಂಬಂತೆ ಈಗ ಭಕ್ತಾರಾಮ್ ಎಂಬ ವೈದ್ಯನೊಂದಿಗೆ ಸೇರಿಕೊಂಡು ಅಮಾಯಕ ವೃದ್ಧೆಯೊಬ್ಬಳ ಜಾಗವನ್ನು ನುಂಗುವುದಕ್ಕೆ ಹೊರಟಿದ್ದಾನೆ.


ಶಾಸಕ ರವಿಸುಬ್ರಹ್ಮಣ್ಯ

ನೀವು ಗಮನಿಸಿದ್ದಿರಬೇಕು, 'ವಿಜಯ ಕರ್ನಾಟಕ' ದಿನಪತ್ರಿಕೆಯ 10-06-2008ರ ಸಂಚಿಕೆಯಲ್ಲಿ 'ನಿಲ್ದಾಣಕ್ಕೆ ಗುದ್ದಲಿ ಪೂಜೆ' ಎಂಬ ಶೀರ್ಷಿಕೆಯಡಿ ಸಣ್ಣದೊಂದು ನ್ಯೂಸ್ ಐಟಂ ಪ್ರಕಟಗೊಂಡಿತ್ತು. ಈ ವರದಿಯೊಂದಿಗೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಸತ್ಯನಾರಾಯಣ, ಪಾಲಿಕೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ನಾನಾ ಸ್ಥಳೀಯ ಬಿಜೆಪಿ ಮುಖಂಡರುಗಳ ಸಮ್ಮುಖದಲ್ಲಿ ಬಸವನಗುಡಿ ಶಾಸಕ ರವಿಸುಬ್ರಮಣ್ಯ ನಾಯ್ಡು ನೂತನ ಬಸ್ ನಿಲ್ದಾಣಕ್ಕೆ ಗುದ್ದಲಿ ಪೂಜೆ ಮಾಡುತ್ತಿರುವ ಫೋಟೊ ಕೂಡಾ ಪ್ರಕಟಗೊಂಡಿತ್ತು, 'ಚನ್ನಮ್ಮನಕೆರೆ ಸಮೀಪದ ಎಸ್‌ಎಸ್‌ಎಂ ಶಾಲೆಯ ಪಕ್ಕದ ಖಾಲಿ ಮೈದಾನವು ಇಲ್ಲಿಯವರೆಗೆ ಬಿಡಿಎ ಸುಪರ್ದಿಯಲ್ಲಿದ್ದು, ಈಗ ಇದು ಬಿಬಿಎಂಪಿಗೆ ಹಸ್ತಾಂತರಗೊಂಡಿದ್ದು; ಅಚ್ಚುಕಟ್ಟು ಪ್ರದೇಶಕ್ಕೆ ಒಂದು ಉತ್ತಮ ಬಸ್ ನಿಲ್ದಾಣ ಬೇಕು ಎಂಬ ಸಾರ್ವಜನಿಕರ ಬೇಡಿಕೆಗೆ ಕೊನೆಗೂ ಸರ್ಕಾರ ಸ್ಪಂದಿಸಿದೆ' ಎಂಬ ಶಹಬ್ಬಾಷ್‌ಗಿರಿಯನ್ನು ಈ ಪತ್ರಿಕೆ ಯಡಿಯೂರಪ್ಪ ಸರ್ಕಾರಕ್ಕೆ ನೀಡಿತ್ತು. ಆದರೆ, ವಾಸ್ತವ ದಲ್ಲಿ ಅದು ರವಿಸುಬ್ರಹ್ಮಣ್ಯ ಮತ್ತು ಭಕ್ತಾರಾಂ ಎಂಬ ನೆಲಗಳ್ಳರು ಕೋರ್ಟಿನ ಆದೇಶವನ್ನೂ ಮೀರಿ ನಡೆಸುತ್ತಿರುವ ದಂಧೆ ಎಂಬುದು ಬಹಳ ಜನಕ್ಕೆ ಗೊತ್ತಿರಲಿಲ್ಲ.


[illegible] ಜಾಗದಲ್ಲಿ ನಡೆದ ಕಾಮಗಾರಿ


ಗುದ್ದಲಿ ಪೂಜೆ

ಅಸಲಿಗೆ ಈ ಜಾಗ ಯಾರದ್ದು?


ಬಸವನಗುಡಿ ಅಡ್ನಾಡಿ ಶಾಸಕ ರವಿಸುಬ್ರಹ್ಮಣ್ಯ ಇಷ್ಟೊಂದು ಮುತುವರ್ಜಿ ವಹಿಸಿ ತ್ಯಾಗರಾಜನಗರದ 3ನೇ ಬ್ಲಾಕ್‌ನ 9ನೇ ಅಡ್ಡರಸ್ತೆಯ ವಾರ್ಡ್ ನಂ, 51ರಲ್ಲಿ (ಸ.ನಂ. 34/2) ಇರುವ 17,000 ಚದರ ಅಡಿಯಷ್ಟು ದೊಡ್ಡದಾಗಿರುವ ಮತ್ತು ಮೂರು ಕೋಟಿಗೂ ಮೀರಿ ಬಾಳಬಹುದಾದ ಖಾಲಿ ಜಾಗದಲ್ಲಿ ಬಸ್ ನಿಲ್ದಾಣ ಕಟ್ಟಲು ಹೊರಟಿದ್ದಾನಲ್ಲ ಅಸಲಿಗೆ ಈ ಜಾಗ ಯಾರದ್ದು ಗೊತ್ತೆ? ಅದು ಶ್ರೀಮತಿ ಚಿಕ್ಕಗಂಗಮ್ಮ ಎಂಬ 84 ವರ್ಷದ ವಯೋವೃದ್ಧೆಗೆ ಸೇರಿದ್ದು. ಶಾಸಕ ಹೇಳಿಕೊಂಡಿರುವಂತೆ ಇದು ಇಲ್ಲಿಯವರೆಗೆ ಬಿಡಿಎ ಸುಪರ್ದಿಯಲ್ಲೂ ಇರಲಿಲ್ಲ ಹಾಗೂ ಈಗದು ಬಿಬಿಎಂಪಿಗೆ ಹಸ್ತಾಂತರವೂ ಆಗಿಲ್ಲ. ಚಿಕ್ಕಗಂಗಮ್ಮ ಎಂಬ ಈ ಅನಾಥೆ ತಾನು ಚಿಕ್ಕ ಬಾಲಕಿಯಾಗಿದ್ದಾಗ ತ್ರಿಪುರ ಸುಂದರಮ್ಮಾಳ್, ರಾಣೋಜಿರಾವ್ ಎಂಬ ಸಭ್ಯಸ್ಥರ ಮನೆಯಲ್ಲಿ ಮನೆಗೆಲಸ ಮಾಡಿಕೊಂಡು ಬೆಳೆದವಳು. ಮಕ್ಕಳಿಲ್ಲದ ತ್ರಿಪುರ ಸುಂದರಮ್ಮಾಳ್ ದಂಪತಿಗಳು ಈ ಹುಡುಗಿಯ ನಿಷ್ಠೆ, ಶ್ರದ್ಧೆ ಮತ್ತು ಸೇವೆಗೆ ಮಾರುಹೋಗಿ 25-6-1962 ದಿನಾಂಕದ ವಿಲ್ ಮೂಲಕ ತಮಗೆ ಸೇರಿದ ಈ ಜಾಗವನ್ನು ಈಕೆಗೆ ನೀಡಿದ್ದರು. ತೀರಾ ಇತ್ತೀಚಿಗೆ, 01-08-2002ರಲ್ಲಿ ಈ ಚಿಕ್ಕಗಂಗಮ್ಮ ಈ ಆಸ್ತಿಯನ್ನು ತನ್ನ ಮಗ ಎಂ. ನಾಗರಾಜುವಿಗೆ ದಾನಪತ್ರದ ಮೂಲಕ ವರ್ಗಾಯಿಸಿದ್ದರು. ತನಗಿರುವ ಈ ಏಕೈಕ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನೂ ತನ್ನ ಸೆರಗಿನಲ್ಲಿ ಕಟ್ಟಿಕೊಂಡು ಈ ಹಣ್ಣಣ್ಣು ಮುದುಕಿ ಇವತ್ತಿಗೂ ಬದುಕಿದೆ.


ಎಂ. ನಾಗರಾಜು


ಚಿಕ್ಕಗಂಗಮ್ಮ

ಎಲ್ಲಾ ಭಕ್ತಾರಾಂನ ಎಂಜಲಿಗಾಗಿ!

ಈ ಮಧ್ಯೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈ ಭಾಗದ ಸರ್ವೆ ನಂ. 26 ಭೂಭಾಗವನ್ನು ನೋಟಿಫಿಕೇಶನ್ ಮೂಲಕ ತನ್ನ ಸುಪರ್ದಿಗೆ ತೆಗೆದುಕೊಂಡು ಬನಶಂಕರಿ ಎರಡನೇ ಹಂತವೆಂಬ ರೆಸಿಡೆನ್ಷಿಯಲ್ ಲೇಔಟ್ ನಿರ್ಮಿಸಿತು. ಹಾಗೆಯೇ ತ್ಯಾಗರಾಜನಗರ ಸ.ನಂ. 36/2, 2ನೇ ಅಡ್ಡರಸ್ತೆಗೆ ಹೊಂದಿಕೊಳ್ಳುವಂತೆ ಒಂದು ಲಿಂಕ್‌ರೋಡನ್ನು ಕೂಡಾ ಪ್ರಾಪೋಜಿಸಿತು. ಈ ಲಿಂಕ್ ರಸ್ತೆಯ ಪಕ್ಕದಲ್ಲಿಯ ಸ.ನಂ. 36/2ರಲ್ಲಿರುವ ಐದು ಎಕರೆ ಖಾಲಿ ನಿವೇಶನದ ಹಕ್ಕುದಾರನ ಹೆಸರು ಡಾ. ಭಕ್ತಾರಾಂ. ಈತ ವೃತ್ತಿಯಲ್ಲಿ ಒಬ್ಬ ಡಾಕ್ಟರ್. ಈತನ ಮಕ್ಕಳು ಅಮೆರಿಕದಲ್ಲಿದ್ದಾರೆ. ಆಗರ್ಭ ಶ್ರೀಮಂತನಾದ ಈತ ಪಾರ್ಶ್ವವಾಯುವಿಗೆ ತುತ್ತಾಗಿ ಹಾಸಿಗೆ ಹಿಡಿದಿರುವ ವಯೋವೃದ್ಧ. ಈ ವಾರ್ಡಿನ ಮಾಜಿ ಕಾರ್ಪೋರೇಟರ್ ಸತ್ಯನಾರಾಯಣ ಮತ್ತು ಬಸವನಗುಡಿಯ ಶಾಸಕ ರವಿಸುಬ್ರಹ್ಮಣ್ಯ ಚಿಕ್ಕಗಂಗಮ್ಮನ ಆಸ್ತಿಯಲ್ಲಿ ಸರ್ಕಾರಿ ಬಸ್‌ನಿಲ್ದಾಣ ಕಟ್ಟಲು ಹೊರಟಿರುವುದೇ ಡಾ. ಭಕ್ತಾರಾಂ ಕೊಡುವ ಎಂಜಲುಕಾಸಿಗಾಗಿ.


ಸತ್ಯನಾರಾಯಣ

ಡಾ. ಭಕ್ತಾರಾಂ ತನ್ನ ಐದು ಎಕರೆ ಖಾಲಿ ನಿವೇಶನದಲ್ಲಿ ಒಂದು ಬೃಹತ್ ನರ್ಸಿಂಗ್ ಹೋಂ ಕಟ್ಟಿಸಬೇಕೆಂಬ ಆಸೆ ಇಟ್ಟುಕೊಂಡಿದ್ದಾನೆ. ಈತನ ಖಾಲಿ ನಿವೇಶನದ ಪಶ್ಚಿಮಕ್ಕೆ, 40 ಅಡಿ ರಸ್ತೆ ಇದ್ದು, ಉತ್ತರಕ್ಕೆ 60 ಅಡಿ ರಸ್ತೆ ಇದೆ. ಈ 60 ಅಡಿ ರಸ್ತೆಯ ಪಕ್ಕದಲ್ಲಿರುವುದೇ ಚಿಕ್ಕಗಂಗಮ್ಮನ 17000 ಚದರ ಅಡಿಯ ಖಾಲಿ ಮೈದಾನ. ಈ ಜಾಗದಲ್ಲೇನಾದರೂ ಚಿಕ್ಕಗಂಗಮ್ಮ ಮನೆ ಕಟ್ಟಿಸಿಕೊಂಡರೆ, ಡಾ. ಭಕ್ತಾರಾಂ ಮುಂದೆ ಕಟ್ಟಲಿರುವ ತನ್ನ ನರ್ಸಿಂಗ್‌ಹೋಂನ ಪ್ರವೇಶದ್ವಾರವನ್ನು ಪಶ್ಚಿಮಾಭಿಮುಖವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಈತನ ನಿವೇಶನದ ಪಶ್ಚಿಮಕ್ಕೆ 40 ಅಡಿಯ ರಸ್ತೆ ಇರುವುದರಿಂದ ಮಹಾನಗರ ಪಾಲಿಕೆಯ ಕಾನೂನಿನಂತೆ 1.25 ಲಕ್ಷ ಅಡಿಗಿಂತ ಹೆಚ್ಚು ನರ್ಸಿಂಗ್ ಹೋಂ ಸಂಕೀರ್ಣ ಕಟ್ಟಲು ಸಾಧ್ಯವಿಲ್ಲ, ಆದರೆ ಇದೇ ಚಿಕ್ಕಗಂಗಮ್ಮನ ನಿವೇಶನದಲ್ಲಿ ಬಸ್‌ಸ್ಟ್ಯಾಂಡ್ ಬಂದು, ಈತನ ನಿವೇಶನಕ್ಕೆ ಅಂಟಿಕೊಂಡಂಥ ರಸ್ತೆಯೊಂದಾದರೆ, ಆಗ ಈತ 2.75 ಲಕ್ಷ ಚದರ ಅಡಿಯಷ್ಟು ಬಿಲ್ಡಿಂಗ್ ಕಟ್ಟಿಸಬಹುದು. ಈ ಕಾರಣಕ್ಕಾಗಿ ಈತ ಹಿಡಿದುಕೊಂಡಿದ್ದು ಸತ್ಯನಾರಾಯಣ ಮತ್ತು ರವಿಸುಬ್ರಹ್ಮಣ್ಯರನ್ನು.

ನ್ಯಾಯಾಲಯಕ್ಕೂ ಕಿಮ್ಮತ್ತು ಕೊಡಲಿಲ್ಲ!

ಈ ದುಷ್ಕರ ಚತಾವಣೆಗೊಳಗಾಗಿ ಚಿಕ್ಕಗಂಗಮ್ಮ, ನಾಗರಾಜರಿಗೆ ಇನ್ನಿಲ್ಲದಂತೆ ಆಟಕಾಯಿಸಿದ್ದು ಇದೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಬನಶಂಕರಿ ಎರಡನೇ ಹಂತದ ರೆಸಿಡೆನ್ಸಿಯಲ್ ಲೇಔಟ್‌ಗಾಗಿ ಸ್ವಾಧೀನಪಡಿಸಿಕೊಂಡ ಸ.ನಂ. 26ರಲ್ಲೇ ಚಿಕ್ಕಗಂಗಮ್ಮ/ನಾಗರಾಜರ ಆಸ್ತಿಯೂ ಬರುತ್ತದೆ ಎಂದು ಕ್ಯಾತೆ ತೆಗೆದ ಬಿಡಿಎ ವಿರುದ್ಧ ಇದೇ ಚಿಕ್ಕಗಂಗಮ್ಮನ ಮಗ ನಾಗರಾಜು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಬೇಕಾಯಿತು.

ಮೂಲ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಉಚ್ಚನ್ಯಾಯಾಲಯ ಸಿವಿಲ್ ಕೋರ್ಟಿಗೆ ಹೋಗುವಂತೆ ನಾಗರಾಜುವಿಗೆ ಆದೇಶಿಸಿತು. 27ನೇ ಅಡಿಷನಲ್ ಸಿಟಿ ಸಿವಿಲ್ ನ್ಯಾಯಾಲಯ ಇದೇ ಕೇಸನ್ನು ಆಮೂಲಾಗ್ರವಾಗಿ ಶೋಧಿಸಿ, ನಾಗರಾಜುವಿನ ಪರ ಇಂಜಕ್ಷನ್ ನೀಡಿತು. **(O.S.No. 918/2004 Dated 07/2/04)** ಅಲ್ಲಿಂದೀಚೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬಾಯಿಮುಚ್ಚಿಕೊಂಡಿತು.

ಅನಂತರ ಅಬ್ಬರಿಸತೊಡಗಿದವನು ಇದೇ ಭಕ್ತಾರಾಂ. ಈ ವ್ಯಕ್ತಿಗೆ ನಾಗರಾಜುವಿನ ನಿವೇಶನದ ಮೇಲೆಯೇ ರಸ್ತೆ ಬೇಕಿತ್ತು. ಅದಕ್ಕಾಗಿ ನಕಲಿ ದಾಖಲಾತಿಗಳೊಡನೆ ಈ ವ್ಯಕ್ತಿ ಮೆಯೋಹಾಲ್‌ನಲ್ಲಿರುವ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ. ಮತ್ತೊಮ್ಮೆ ಆಮೂಲಾಗ್ರವಾಗಿ ದಾಖಲಾತಿ ಪರಿಶೀಲಿಸಿದ ಸಿಟಿ ಸಿವಿಲ್ ನ್ಯಾಯಾಲಯ ಡಾ. ಭಕ್ತಾರಾಂಗೆ ಛೀಮಾರಿ ಹಾಕಿ, ಆತನ ದಾವೆಯನ್ನು ಡಿಸ್‌ಮಿಸ್ ಮಾಡಿತು. **(S.No. 17418/06 Dated 7-12-06)**

ಚಿಕ್ಕಗಂಗಮ್ಮಳ ಮಗ ನಾಗರಾಜುವಿನ ಆಸ್ತಿಯ ಹಿನ್ನೆಲೆ ಹೀಗಿರುವಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಾಗಲಿ, ಬಿಬಿಎಂಪಿಯಾಗಲಿ ಅಥವಾ ಈ ಭಾಗದ ಯಾವುದೇ ಜನಪ್ರತಿನಿಧಿಯಾಗಲಿ ಈ ಜಾಗದ ವಿಚಾರದಲ್ಲಿ ಏನೇ ನಿರ್ಣಯ ತೆಗೆದುಕೊಳ್ಳುವುದೇ ನ್ಯಾಯಾಲಯ ನಿಂದನೆಯಾಗುತ್ತದೆ. ಹೀಗಿದ್ದರೂ ಇದೇ ತಿಂಗಳ 9, 2008ರಲ್ಲಿ ಈ ಕ್ಷೇತ್ರದ ಶಾಸಕ ರವಿಸುಬ್ರಹ್ಮಣ್ಯ ತನ್ನ ಪಟಾಲಂನೊಂದಿಗೆ ಈ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿ ಅಲ್ಲಿ ಕಟ್ಟಲಾಗಿದ್ದ ಶೆಡ್ಡುಗಳನ್ನು ಕಿತ್ತು ಹಾಕಿ, ಎರಡು ಲಕ್ಷಕ್ಕೂ ಮೀರಿದ ವಸ್ತುಗಳನ್ನು ಲಾರಿಗಳಲ್ಲಿ ತುಂಬಿಸಿಕೊಂಡು ಹೋಗಿದ್ದಲ್ಲದೇ ಈ ಜಾಗದಲ್ಲಿ ಬಿಬಿಎಂಪಿ ವತಿಯಿಂದ ಸಾರ್ವಜನಿಕ ಬಸ್‌ನಿಲ್ದಾಣಕ್ಕಾಗಿ ಗುದ್ದಲಿ ಪೂಜೆ ಕೂಡಾ ಮಾಡಿದ್ದಾನೆ. ಇದು ಕಾನೂನುಬಾಹಿರವೆಂದು ಗೊತ್ತಿದ್ದರೂ ಬಿಬಿಎಂಪಿಯ ಅಧಿಕಾರಿಗಳು ಶಾಸಕ ಸುಬ್ರಮಣ್ಯನಿಗೆ ಸಾಥ್ ನೀಡಿದ್ದಾರೆ.

ಚಿಕ್ಕಗಂಗಮ್ಮ ಎಂಬ ಹಣ್ಣಣ್ಣು ಮುದುಕಿಯ ಮಗ ಎಂ. ನಾಗರಾಜು ಇದೇ 19-06-08ರಂದು ತ್ಯಾಗರಾಜನಗರದ ಪೊಲೀಸ್ ಠಾಣೆಯಲ್ಲಿ ಡಾ.ಭಕ್ತಾರಾಂ, ಶಾಸಕ ರವಿಸುಬ್ರಹ್ಮಣ್ಯ, ಮಾಜಿ ಕಾರ್ಪೋರೇಟರ್ ಬಿ.ಎಸ್. ಸತ್ಯನಾರಾಯಣ, ಬಿಬಿಎಂಪಿ ಇಂಜನಿಯರ್ ವಿರುದ್ಧ ಕೇಸು ದಾಖಲಿಸಿದ್ದಾರೆ. ಹಾಗೆಯೇ ಬಿಬಿಎಂಪಿಯ ಟ್ರಾಫಿಕ್ ಮ್ಯಾನೇಜರ್ ಮತ್ತು ಜನರಲ್ ಮ್ಯಾನೇಜರ್‌ಗೆ ಕಂಪ್ಲೇಟ್ ಕೊಟ್ಟಿದ್ದಾರೆ.

ಡಾ. ಭಕ್ತಾರಾಂನ ಹಡಬೆ ದುಡ್ಡಿಗಾಗಿ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ಚಿಕ್ಕಗಂಗಮ್ಮನಂತಹ 84ರ ವಯೋವೃದ್ಧೆಯ ಕನಸಿನ ಗೂಡಿಗೆ ಬೆಂಕಿ ಹಚ್ಚುತ್ತಿರುವ ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ ಹೊಟ್ಟೆಗೆ ಅನ್ನ ತಿನ್ನುತ್ತಾನಾ ಎಂಬ ಪ್ರಶ್ನೆ ಬಾರದಿರದು. ಇದು ಯಡ್ಡಿಯ ಗುಜರಾತ್ ಮಾದರಿಯ ಒಂದು ಸಣ್ಣ ಸ್ಯಾಂಪಲ್ ಅಷ್ಟೆ.

■ ಮಂಜುನಾಥ ನಿಲಸೋಗೆ

ಕಾಂಗ್ರೆಸ್‌ಗೆ ಒಂದು ಮೂಟೆ ಅಡಕೆ, ಮೂರುಪಿಂಡಿ ಎಲೆ ಬೇಕಂತೆ

ಕಾಂಗ್ರೆಸ್ ಪಾರ್ಟಿಯಲ್ಲಿದ್ದು ಬಾಳಿ ಬದುಕಿ ಸತ್ತವರ ಹೆಂಡತಿಗೂ, ಮಗನಿಗೂ ಟಿಕೆಟ್ ಕೊಟ್ಟು ಶುದ್ಧ ಕಂತ್ರಿ ರಾಜಕಾರಣ ಮಾಡುತ್ತಿತ್ತಂತಲ್ಲಾ, ಅನಂತರ ಸಿನಿಮಾ ನಟರ ಬೆನ್ನಿಗೆ ಬಿದ್ದು ಅವರಿಗೂ ಟಿಕೆಟ್ ಕೊಟ್ಟು ಮಾಡುತ್ತಿದ್ದ ಹಾರಾಕಿಗಡಿ ರಾಜಕಾರಣಕ್ಕೆ ತಕ್ಕ ಶಾಸ್ತಿ ಎಂಬಂತೆ ಜಡೆ ಮಾಯಸಂದ್ರದ ಜಗ್ಗೇಶ್ ಹಗಲು ಹನ್ನೆರಡು ಗಂಟೆ ಸಮಯದಲ್ಲಿ ಬಿಜೆಪಿಗೆ ಹರಾಜಾಗಿ ಹೋದನಂತಲ್ಲಾ, ಈತನನ್ನು ಹಿಡಿದು ತರಲೆಂದು ಹೋದ ಕಾಂಗ್ರೆಸ್ಸಿನ ಮಾನವಂತರು, ಒಳ್ಳೆಯವರ ಮಾನ ಹಳ್ಳಿಲೋಯ್ತು ಎನ್ನುವಂತೆ ಜಗ್ಗೇಶನ ಸಂಬಂಧಿಗಳಿಂದ ಕಿವಿ ಮುಚ್ಚಿಕೊಳ್ಳುವಂತಹ ಬೈಗುಳ ತಿಂದು ಬಂದವಂತಲ್ಲಾ, ಜಗ್ಗೇಶ್ ಇದ್ದರೆ ಕಾಂಗ್ರೆಸ್ ಬೆಳೆಸಿ ಮುಂದೆ ಪವರ್ರಿಗೂ ಬರುತ್ತಿದ್ದೆವು; ಈಗ ಜಗ್ಗೇಶಿಲ್ಲದ ಪಾರ್ಟಿಯನ್ನು ಕಲ್ಪಿಸಿಕೊಳ್ಳಲೂ ಆಗುತ್ತಿಲ್ಲ ಎಂಬಂತಾಡುತ್ತಿರುವ ಕಾಂಗ್ರೆಸ್ಸಿಗರನ್ನು ಕಂಡ ಜನ ಬಿದ್ದುಬಿದ್ದು ನಗುತ್ತಿದ್ದಾರಂತಲ್ಲಾ, ಥೂತ್ತೇರಿ!

* * * * *

"ನಮ್ಮ ಕಡೆಯಿಂದ ಒಬ್ಬ ಹೋದರೇನಂತೆ? ಕಾಂಗ್ರೆಸ್ ಕಡೆಯಿಂದ ಇಬ್ಬರು ಹೋದರು" ಎಂದು ಒಳಗೊಳಗೇ ಪದ್ಮನಾಭನಗರದ ಧೃತರಾಷ್ಟ್ರ ನಗುತ್ತಿದ್ದಾರಂತಲ್ಲಾ, ಅಷ್ಟೇ ಅಲ್ಲದೆ, ತಾವು ಕಾಂಗ್ರೆಸ್ ಒಳಗೆ ಒಂದು ಪಾದ ಇಟ್ಟಕೂಡಲೇ ಸಿದ್ಧರಾಮಯ್ಯ ಮಾರಿಷಸ್‌ಗೆ ಹೋಗಿ ಮಾಲಿಷ್ ಮಾಡಿಸಿಕೊಳ್ಳುತ್ತಿದ್ದಾನೆ; ಇನ್ನ ಆ ಜಾಲಪ್ಪ ಬಿಜೆಪಿಗೆ ಹೋಗಿ ಕಣ್ಣು ಕಿವಿ ಕಿಡ್ನಿ ಸರಿ ಮಾಡಿಸಿಕೊಳ್ಳುವ ಆಲೋಚನೆಯಲ್ಲಿದ್ದಾನೆ; ಈ ದೇವೇಗೌಡನನ್ನು ಟೀಕಿಸಿದವರು ಅದು ಹೇಗೆ ನೆಮ್ಮದಿಯಾಗಿರುತ್ತಾರೆ; ಅದ್ಯಾವ ಪಾರ್ಟಿಯಲ್ಲಿರುತ್ತಾರೆ, ನೋಡೋಣ ಎಂದು ಗುಟುರು ಹಾಕಿದರಂತಲ್ಲಾ, ದೇವೇಗೌಡ ಮತ್ತವನ ಮಕ್ಕಳಿಗೆ ಸರಿಯುತ್ತರ ಕೊಡುವ ಗಂಡುಗಳೆಂದರೆ ಗಣಿ ಅಗೆತದಲ್ಲಿ ನಿರತರಾಗಿರುವ ರೆಡ್ಡಿ, ರಾಮುಲು ಇತ್ಯಾದಿ ನೆಲ ನುಂಗಪ್ಪರೆ ಎಂದು ಯಡ್ಡಿ ಚೆಡ್ಡಿಯೊಳಕ್ಕೆ ಕೈಹಾಕಿ ಹೊಸೆಯುತ್ತಿರಬೇಕಾದರೆ, ಇತ್ತ ದೇವೇಗೌಡರು "ಗಣಿಯನ್ನು ರಾಷ್ಟ್ರೀಕರಿಸಿ ಬಿಡಿ. ನಾನು ಯುಪಿಎ ಸರ್ಕಾರ ಬೀಳದಂತೆ ಸರಿಯಾದ ಚಿಣಿ ಹೊಡೆಯುತ್ತೇನೆ" ಎಂಬ ಸಂದೇಶವನ್ನು ರವಾನಿಸಿದ್ದಾರಂತಲ್ಲಾ, ಥೂತ್ತೇರಿ!!

* * * * * *


ಕಾಂಗ್ರೆಸ್ ಪಾರ್ಟಿಯಿಂದ ಗೆದ್ದು ಏಕಾಏಕಿ ಬಿಜೆಪಿ ಸೇರಿದವರ ವಿರುದ್ಧ ಎಲೆಯಡಿಕೆ ಹಾಕಿ ಉಗಿಯುವ ಚಳವಳಿ ಮಾಡಬೇಕೆಂದು ಕಾಂಗ್ರೆಸ್ ತೀರ್ಮಾನ ತೆಗೆದುಕೊಂಡಿತಂತಲ್ಲಾ. "ಈ ಕಾರ್ಯಕ್ರಮ ತುಂಬ ರಸವತ್ತಾಗಿದೆ. ಎಲೆಯಡಿಕೆ ಕರಗಿ ಬಾಯಿ ಕೆಂಪಾಗಿ ಉಗಿಯಬೇಕಾದರೆ ಒಂದು ಮೂಟೆ ಅಡಕೆ, ಮೂರು ಪಿಂಡಿ ಎಲೆ, ಒಂದು ಡಬ್ಬ ಸುಣ್ಣಬೇಕು" ಎಂದು ಉಗ್ರಪ್ಪ ಉಗ್ರವಾಗಿಯೇ ಆಜ್ಞೆ ಮಾಡಿದಾಗ ಯಾರೂ ತಮ್ಮ ಕಿಸೆಗೆ ಕೈಹಾಕಲಿಲ್ಲವಂತಲ್ಲಾ. ಟಿಕೆಟ್ ಕೊಡಲು ಕಾಸು ಕಿತ್ತವರು ಡೆಲ್ಲಿಯಲ್ಲಿದ್ದಾರೆ, ಅಂತೂ ಇಂತು ಗೆದ್ದು ಬಂದವರು ಅಡ್ಡಗೋಡೆ ಮೇಲಿದ್ದಾರೆ, ಇನ್ನಾರು ಎಲೆಯಡಿಕೆಗೆ ಕಾಸು ಕೊಡಬೇಕು ಎಂದು ಆಲೋಚಿಸುತ್ತಿರುವಾಗ, ವಿ. ಸೋಮಣ್ಣ "ಬಿಜೆಪಿ ಸೇರಿದವರ ಬಳಿಗಾದರೂ ಹೋಗಿ ಹಣ ಈಸಿಕೊಂಡು ಬಂದು ಬಾಯಿತುಂಬ ಎಲೆಯಡಿಕೆ ಹಾಕಿ, ಮೊದಲು ಕಾಂಗ್ರೆಸ್ಸಿನ ಹೈಕಮಾಂಡಿನವರಿಗೆ ಉಗಿಯಿರಿ. ನಂತರ ಇನ್ನು ಉಗುಳಿದ್ದರೆ ಕರಗೆ ಹರಗೆ, ಧರಮಸಿಂಗನಿಗೆ ಉಗಿರಿ" ಎಂದರಂತಲ್ಲಾ, ಥೂತ್ತೇರಿ!!!

* * * * * *

ಥೂತ್ತೇರಿ ■ ಯಾಹೂ

"ಬಿಜೆಪಿಗೆ ಸೇರ್ಪಡೆಯಾಗಬೇಕಾದರೆ ಅಂತಹ ವ್ಯಕ್ತಿಗೆ ಕನಿಷ್ಠ ಒಂದು ವರ್ಷ ಲಾಠಿ ಬೀಸಿದ ಅನುಭವ ಇರಬೇಕು. ಇಲ್ಲದಿದ್ದರೆ ಗುರೂಜಿ, ಹೆಡ್ಗೆವಾರ್, ಗೋಳವಲ್‌ಕರ್ ಇತ್ಯಾದಿಗಳ ಬಗ್ಗೆ ಗೌರವ ಮತ್ತು ಕನಿಷ್ಠ ಮಾಹಿತಿ ಇರಬೇಕು. ಅದೂ ಇಲ್ಲದಿದ್ದರೆ ಪುರೋಹಿತಶಾಹಿಗಳನ್ನು ಗೌರವಿಸುವಂತಹ ಮನಸ್ಸಿರಬೇಕು. ಪೇಜಾವರನನ್ನು ಕಂಡರೆ ಕಾಲಿಗೆ ಬೀಳಬೇಕು. ಇಲ್ಲ ಅಡ್ವಾಣಿ, ವಾಜಪೇಯಿ ಬಗ್ಗೆ ಅತೀವ ಗೌರವ ಹೊಂದಿರಬೇಕು. ಇಂತಹ ಯಾವುದಾದರೂ ಯೋಗ್ಯತೆಯಲ್ಲಿ ಕನಿಷ್ಠ ಎರಡು ಗುಣಗಳಿದ್ದರೆ ಅಂತವರನ್ನು ಪಾರ್ಟಿಗೆ ಸೇರಿಸಿಕೊಂಡು ಮಂತ್ರಿಗಳನ್ನ ಮಾಡಲಿ, ನಮ್ಮ ಅಭ್ಯಂತರವಿಲ್ಲ. ಆದರೆ ಈ ಎಡೂರಪ್ಪ ಸೇರಿಸಿಕೊಳ್ಳುತ್ತಿರುವ ಜನಗಳನ್ನು ನೋಡಿದರೆ ಬರೀ ದುಡ್ಡಿಗೆ ಮಾತ್ರ ಗೌರವ ಕೊಡುವಂತೆ ಕಾಣುತ್ತಾರೆ. ಇಂತಹ ಜನರ ಹಾವಳಿಯಿಂದ ಬಿಜೆಪಿಗೆ ಉಳಿಗಾಲವಿದೆಯಾ? ತಥಾಕಥಿತ ಹಿಂದೂ ರಾಷ್ಟ್ರದ ಕಲ್ಪನೆಯ ಗತಿಯೇನು?" ಎಂದು ಹಳೆ ಚೆಡ್ಡಿಗಳು ಕೇಶವಕೃಪದಲ್ಲಿ ಪಿಸುದನಿಯಲ್ಲಿ ಮಾತಾಡಿಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!!!

* * * * * *



ಯಡ್ಡಿ ಪಕ್ಷಕ್ಕೆ ಹಾರಿ ದಿಢೀರೆಂದು ಮಂತ್ರಿಗಳಾದ ಆನಂದ, ಬಾಲಚಂದ್ರ, ಶಿವನಗೌಡ ಈ ಯಾರ ಮುಖದಲ್ಲೂ ಮಂತ್ರಿಗಳಾಗುವಾಗ ನಗುವೇ ಇರಲಿಲ್ಲವಂತಲ್ಲಾ, ತಿಂದಿರುವ ಅಮೇಧ್ಯ ಹೊಟ್ಟೆ ತೊಳಸುತ್ತಿದ್ದರಿಂದ ಅವರ ಮುಖದಲ್ಲಿ ನಗು ಬರಲು ಸಾಧ್ಯವೇ? ಅಂತೂ ಮಾಲು ಸಮೇತ ಸಿಕ್ಕಿಬಿದ್ದ ಕಳ್ಳರನ್ನು ವಿಧಾನಸೌಧದ ಎದುರು ಹಾಜರುಪಡಿಸಿ, ಅವರ ಕೈಗೆ ಹಾಳೆ ಕೊಟ್ಟು, ರಾಜ್ಯಪಾಲರು ಓದಿಸಿದ ಪ್ರಮಾಣವಚನ, ಇಂತಹ ಕೆಲಸವನ್ನು ಯಾರೂ ಮುಂದೆ ಮಾಡಬಾರದೆಂಬ ವಚನದಂತಿದೆಯಂತಲ್ಲಾ, ಇಂತಹ ಅಪೂರ್ವ ಸಮಾರಂಭ ನೋಡಿ ಕಿವಿಯವರೆಗೂ ತುಟಿಬಿರಿದು ಹಲ್ಲು ಬಿಡುವ ಸದಾನಂದಗೌಡರು ತಲೆಮರೆಸಿಕೊಂಡಿದ್ದು ಪಾರ್ಟಿಯ ಅಧ್ಯಕ್ಷನ ಸಹಜ ನಡವಳಿಕೆಯಾಗಿತ್ತೆಂದು ಚೆಡ್ಡಿಗಳು ವ್ಯಾಖ್ಯಾನಿಸುತ್ತಿದ್ದಾರಂತಲ್ಲಾ, ಅದೇ ಹೊತ್ತಿಗೆ ಉಮೇಶ್ ಕತ್ತಿ ಎಂಬ ಆಯುಧ ಹಾನಿ ದುಃಖದಿಂದ ಮಸೆದಿರುವ ಕತ್ತಿಯನ್ನು ಒರೆಗೆ ಸೇರಿಸಿಕೊಂಡು ಸುಮ್ಮನಾದರಂತಲ್ಲಾ, ಬಿಜೆಪಿಗೆ ಬಂದು ಬೋಳಿಸಲು ರೆಡಿಯಾದ ಕತ್ತಿ ಇನ್ನೈದು ವರ್ಷದಲ್ಲಿ ತುಕ್ಕು ಹಿಡಿಯುವುದರಲ್ಲಿ ಯಾವ ಅನುಮಾನವೂ ಇಲ್ಲವಂತಲ್ಲಾ, ಥೂತ್ತೇರಿ!!! ■

ಮಂಗಳೂರು ಮಹಾನಗರ ಪಾಲಿಕೆ: ನೂತನ ರೋಗದ ಹೆಸರೇ 'ಇಲ್ಲ'



ಮಂಗಳೂರು ಮಹಾನಗರಪಾಲಿಕೆ ಕಟ್ಟಡ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಿಸಿರುವ ಚಿಕೂನ್ ಗುನ್ಯಾ ಎಂಬ ಗಂಟು ನೋವಿನ ಕಾಯಿಲೆ ಇಲ್ಲಿನ ಜನಜೀವನವನ್ನೇ ಬರ್‌ಬಾದ್ ಮಾಡಿದೆ. ಜಿಲ್ಲೆಯ ಕೇಂದ್ರಸ್ಥಾನವಾದ ಮಂಗಳೂರಿಗೆ ಈ ವಿಚಿತ್ರ 'ಗುನ್ಯಾ' ಅಷ್ಟೊಂದು ಬಾಧಿಸದಿದ್ದರೂ ಈ ವಾಣಿಜ್ಯ ನಗರಿಯ ಆಡಳಿತ ನಡೆಸುವ ಮಹಾನಗರ ಪಾಲಿಕೆಗೇ ಹೊಸದೊಂದು ರೋಗ ಬಡಿದಿದೆ. ಈ ಸರ್ಕಾರಿ ರೋಗದ ಹೆಸರು 'ಇಲ್ಲ'.

ಮಂಗಳೂರು ಪುರಸಭೆಯು ಮಹಾನಗರ ಪಾಲಿಕೆಯಾಗಿ ಬಡ್ತಿ ಹೊಂದಿದ ನಂತರದ 30 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷವೇ ಆಡಳಿತ ನಡೆಸಿ ಜನರಿಗೆ ಬೋರ್ ಹೊಡೆದು ಹೋಗಿತ್ತು. ಕಾಂಗ್ರೆಸ್‌ನ ಎಲ್ಲೆ ಮೀರಿದ ಭ್ರಷ್ಟಾಚಾರ ಕಂಡು ಬೇಸತ್ತ ಮಂಗಳೂರಿಗರು ಬದಲಾವಣೆ ಬಯಸಿ, ಹೊಸ ನಿರೀಕ್ಷೆಗಳೊಂದಿಗೆ ಬಜೆಪಿಗೆ ಓಟು ಹಾಕಿದರು. ಇದೀಗ ಪ್ರಥಮ ಬಾರಿಗೆ ಬಜೆಪಿ ಬಹುಮತದೊಂದಿಗೆ ಮಂಗಳೂರು ಮಹಾನಗರ ಪಾಲಿಕೆಗೆ ಲಗ್ಗೆಯಿಟ್ಟಿದೆ. ಆದರೇನು ಬಂತು? ಭ್ರಷ್ಟಾಚಾರದ ಪಕ್ಷಭೇದ ಮರೆತು ವರ್ತಿಸುತ್ತಿರುವ ಚೆಡ್ಡಿಗಳು 'ಹೊಸ ಬಾಟಲಿಯಲ್ಲಿ ಹಳೆಯ ಮದ್ಯ' ಎಂಬಂತಾಗಿದ್ದಾರಷ್ಟೇ.

ಹಾಗೆ ನೋಡಿದರೆ ಬಜೆಪಿಗಳು ವಿಪಕ್ಷ ಸ್ಥಾನದಲ್ಲಿದ್ದಾಗ ತೋರಿಕೆಗಾದರೂ ಕೌನ್ಸಿಲ್ ಸಭೆಗಳಲ್ಲಿ ಗಲಾಟೆ ಎಬ್ಬಿಸಿ, ಪತ್ರಿಕೆಗಳಿಗೆ ಪೋಸು ಕೊಡುತ್ತಿದ್ದರು. (ಆದರೆ ರಾತ್ರಿ ಪಾನಗೋಷ್ಠಿಯಲ್ಲಿ ಕಾಂಗ್ರೆಸ್, ಬಜೆಪಿಗಳು ಒಟ್ಟಾಗುತ್ತಿದ್ದದ್ದು ಆಫ್ ದಿ ರೆಕಾರ್ಡ್ಸ್!) ಆದರೆ ಇದೀಗ ಪ್ರತಿಪಕ್ಷದ ಸ್ಥಾನದಲ್ಲಿರುವ ಕಾಂಗ್ರೆಸ್ ಕಾರ್ಪೊರೇಟರ್‌ಗಳು ಈ ಗಲಾಟೆಯ ಗೋಜಿಗೂ ಹೋಗದೆ ಸುಮ್ಮನೆ ಕುಳಿತಿರುವುದರಿಂದ ಸಾಮೂಹಿಕ ಸಹಭೋಜನ ಸಾಂಗವಾಗಿ ನಡೆಯುತ್ತಿದೆ.

ಲೋಕಾಯುಕ್ತರ ದಾಳಿ ನಡೆದರೂ ಮಿತಿಮೀರಿದ ಭ್ರಷ್ಟಾಚಾರದಿಂದ ಎಕ್ಕುಟ್ಟಿ ಹೋಗಿರುವ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ 8 ವರ್ಷಗಳಿಂದ 37 ವಿವಿಧ ಹುದ್ದೆಗಳು ಖಾಲಿ ಬಿದ್ದಿವೆ. ಈಗ ಮತ್ತಷ್ಟು ಆಯಕಟ್ಟಿನ ಸ್ಥಾನಗಳು ಖಾಲಿ ಬಿದ್ದು ಪಾಲಿಕೆಯ ಆಡಳಿತ ಯಂತ್ರಕ್ಕೇ ತುಕ್ಕು ಹಿಡಿದಿದೆ.

ಪಾಲಿಕೆಯಲ್ಲಿನ 'ಇಲ್ಲ'ಗಳನ್ನು ಪಟ್ಟಿ ಮಾಡಬೇಕಾದರೆ...

ಕಳೆದ ಒಂದು ತಿಂಗಳಿನಿಂದ ಇಲ್ಲಿ ಕಮೀಷನರ್ ಇಲ್ಲ, ಅಸಿಸ್ಟೆಂಟ್ ಕಮೀಷನರ್ ನಾಲ್ಕೈದು ತಿಂಗಳಿಂದ ಇಲ್ಲ, ಸಾರ್ವಜನಿಕ ಸಂಪರ್ಕಾಧಿಕಾರಿ ಕೂಡಾ ಮೂರು ತಿಂಗಳಿಂದ ಇಲ್ಲ, ಕಳೆದ ಒಂದೂವರೆ ವರ್ಷದಿಂದ ರೋಗದಿಂದ ಬಳಲುತ್ತಾ ಸಹಿ ಜಡಿಯಲಷ್ಟೇ ಬರುತ್ತಿದ್ದ ರೆವಿನ್ಯೂ ಅಧಿಕಾರಿ ಮಲ್ಲಯ್ಯ ಕೆಲಸದಿಂದ ಬಿಡುಗಡೆ ಹೊಂದಿ ಮೂರು ತಿಂಗಳಾದರೂ ಅವರು ಜಾಗ ಖಾಲಿಯಾಗೇ ಉಳಿದಿದೆ. ಪಾಲಿಕೆಯ ಇಷ್ಟು ಎಕ್ಸಿಕ್ಯೂಟಿವ್ ಹುದ್ದೆಗಳೇ ಖಾಲಿ ಬಿದ್ದಿರುವಾಗ ಇವರ ಕೈಕೆಳಗಿನವರನ್ನು ಕೇಳುವವರ್ಯಾರು?.

ರಘುಪಾಲ ಎಂಬ ಇಂಜಿನಿಯರ್ ಜಿ.ಐ. ದರ್ಜೆಯ ಪೈಪುಗಳ ಬದಲಾಗಿ ನಕಲಿ ಪ್ಲಾಸ್ಟಿಕ್ ಪೈಪುಗಳನ್ನು ಹಾಕಿಸಿ 4.5 ಲಕ್ಷ ರೂಪಾಯಿಯ ಬಿಲ್ಲು ಮಾಡಿ 2.5 ಲಕ್ಷ ನುಂಗಿದ್ದ. ಅವನಿಗೆ ಇನ್ನೆಂತಹ ಕೇಡುಗಾಲವೋ, ಈ ಹಗರಣ ಹೊರಬಿದ್ದು ಆತ ಸಸ್ಪೆಂಡ್ ಆದ. ನಾಗೇಂದ್ರ ಎಂಬ ಇನ್ನೋರ್ವ ಇಂಜಿನಿಯರ್ ಚರಂಡಿ ನಿರ್ಮಿಸದೆಯೇ ತನ್ನ 'ಬಿಲ್'ಗಾರಿಕೆ ಪ್ರದರ್ಶಿಸಿ 1.70 ಲಕ್ಷ ರೂಪಾಯಿಗಳನ್ನು ನುಂಗಿ ನೀರು ಕುಡಿದು ಸಿಕ್ಕಿಬಿದ್ದ. ಈ ಇಬ್ಬರೂ ಖದೀಮರುಗಳು ಜಾಗ ಖಾಲಿ ಮಾಡಿ ನಾಲ್ಕು ತಿಂಗಳಾಯ್ತು; ಹೊಸಬರು ಬಂದಿಲ್ಲ.

ಇನ್ನು ಪಾಲಿಕೆಯಲ್ಲಿ ಕೆಲಸ ಮಾಡುತ್ತಿರುವವರ ಅರ್ಹತೆಯಾದರೂ ಏನು ಎಂದು ನೋಡಿದರೆ ಅಚ್ಚರಿಯಾಗುತ್ತದೆ. ಇಲ್ಲಿ ಐಟಿಐ, ಡಿಪ್ಲೊಮಾ ಮಾಡಿರುವವರೇ ಇಂಜಿನಿಯರ್‌ಗಳು! ಅದೂ ಕೂಡಾ ಓದಿದ್ದು ಒಂದು, ಆದರೆ ಮಾಡುವುದು ಇನ್ನೊಂದು. ಉದಾ: ಎಲೆಕ್ಟ್ರಿಕಲ್ ಡಿಪ್ಲೊಮಾ ಮಾಡಿರುವ ಸೀನ ಮೂಲ್ಯ ಮತ್ತು ರಿಚರ್ಡ್ ಇಲ್ಲಿ ನೀರಿನ ವಿಭಾಗದ ಇಂಜಿನಿಯರ್‌ಗಳು. ಮೆಕ್ಯಾನಿಕಲ್ ಓದಿರುವ ಅನಿಲ್ ಡ್ರೈನೇಜ್ ನೋಡಿಕೊಳ್ಳುತ್ತಾನೆ. ಇದೆಲ್ಲಾ ಕುರುಡುಕಾಂಚಾಣದ ಮಹಿಮೆಯಿಂದ ಎಗ್ಗಿಲ್ಲದೇ ನಡೆಯುತ್ತಿದೆ. ಎಲ್ಲಿಯವರೆಗೆ ಎಂದರೆ ಎಲೆಕ್ಟ್ರಿಕಲ್ ವಿಭಾಗದಲ್ಲಿ ಸಹಾಯಕರಾಗಿರುವ, ಡಿಪ್ಲೊಮಾ ಕೂಡಾ ಮಾಡಿರದ ಸಂಜೀವ ಮತ್ತು ಚಂದ್ರಹಾಸರು ತಲಾ 2 ಲಕ್ಷ ಕಪ್ಪ ಕೊಟ್ಟು ಎಲ್ಲಾ ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿ ಇಂಜಿನಿಯರ್‌ಗಳಾಗಿ ಮಿಂಚುತ್ತಿದ್ದಾರೆ.

ಪಾಲಿಕೆಯಲ್ಲಿನ ನಗರ ಯೋಜನಾ ವಿಭಾಗವು ಮೇಯುವವರಿಗೆ ಹುಲುಸಾದ ಹುಲ್ಲುಗಾವಲಿನಂತಿರುವ ಕ್ಷೇತ್ರ. ವರ್ಷದ ಹಿಂದೆ ನಕಲಿ ಲೋಕಾಯುಕ್ತರಿಗೆ 12.5 ಲಕ್ಷ ಕಪ್ಪ ತೆತ್ತು ಕೈಸುಟ್ಟುಕೊಂಡ ಇಲ್ಲಿನ ಬಕಗ್ರೇಸರ ಜೋಡಿಯ ಹೆಸರು ಶಿವರಾಜ ಮತ್ತು ಮಂಜುನಾಥ. ಆದರೆ ಅಕ್ರಮ ಆಸ್ತಿ ಹೊಂದಿದ್ದ ಆರೋಪದ ಮೇಲೆ ಅಸಲಿ ಲೋಕಾಯುಕ್ತರ ಬಲೆಗೆ ಬಿದ್ದು ಆರು ತಿಂಗಳ ಹಿಂದೆ ಸಸ್ಪೆಂಡ್ ಆದ ಈ ನಗರ ಯೋಜನಾಧಿಕಾರಿಗಳೆಂಬ ಖದೀಮರ ಸ್ಥಾನಕ್ಕೆ ಇಲ್ಲಿಯತನಕ ಹೊಸಬರ್‍ಯಾರೂ ಬಂದಿಲ್ಲ.

ಪಾಲಿಕೆಯಲ್ಲಿ ಲೆಕ್ಕಕ್ಕೆ ಐದು ಮಂದಿ ಸಹಾಯಕ ನಗರ ಯೋಜನಾಧಿಕಾರಿಗಳಿರಬೇಕು. ಆದರೆ ಇರುವುದು ಮೂರು ಮಂದಿ. ಅದರಲ್ಲೂ ಅರ್ಹ ವ್ಯಕ್ತಿ ದಿಲೀಪ್ ಎಂಬಾತ ಮಾತ್ರ.

ಡ್ರಾಫ್ಟ್‌ಮೆನ್ ಆಗಿ ಪಾಲಿಕೆಯಲ್ಲಿ ಕೆಲಸಕ್ಕೆ ಸೇರಿದ ಅಶೋಕ್ ಕುಮಾರ್ ಐದು ವರ್ಷದ ಹಿಂದೆ ಕಮೀಷನರ್ ಆಗಿದ್ದ ವಿ.ಎಸ್. ನಾಯಕ್‌ರ ಕೈ ಬಿಸಿ ಮಾಡಿ ಜೆ.ಇ. ಸ್ಥಾನವನ್ನು ಅಲಂಕರಿಸಿದ್ದ. ಇದನ್ನು ವಿರೋಧಿಸಿ ನಾಗರಿಕ ಹಿತರಕ್ಷಣಾ ವೇದಿಕೆಯ ಹನುಮಂತ ಕಾಮತ್‌ರವರು ಮೇಲಧಿಕಾರಿಗೆ ದೂರಿದ್ದರು. ಆಗ ಸರ್ಕಾರದಿಂದ ಈ ನೇಮಕಾತಿ ಅಸಿಂಧುವೆಂದು ಆದೇಶ ಬಂತು. ಈ ಆದೇಶ ಬರುವ ಹೊತ್ತಿಗೆ ಕಮೀಷನರ್ ಕುರ್ಚಿಗೆ ಬಕಾಸುರ ಖ್ಯಾತಿಯ ಕೃಷ್ಣಪ್ಪ ಪೂಜಾರಿ ವಕ್ಕರಿಸಿದ್ದ. ಇದೇ ಅಶೋಕ್ ಕುಮಾರ್ ಸದರಿ ಪೂಜಾರಿಗೂ ಐದು ಲಕ್ಷ ಕಪ್ಪ ಸಲ್ಲಿಸಿ ಸಹಾಯಕ ನಗರ ಯೋಜನಾಧಿಕಾರಿಯಾಗಿ ಭಡ್ತಿ ಪಡೆದ!

ಇನ್ನೊಬ್ಬ ಶ್ರೀಕಾಂತ ಎಂಬಾತ ಜೆ.ಇ. ಆಗಿದ್ದು ಬಾಲಚಂದ್ರ ಕಾಮತ್ ಎಂಬ ಕಂಟ್ರಾಕ್ಟುದಾರನ ಜತೆ ಮಿಲಾಕತ್ತು ನಡೆಸಿ ಹಣ ದೋಚಿದ್ದಕ್ಕೆ ವರ್ಗಾವಣೆ ಶಿಕ್ಷೆಗೆ ಗುರಿಯಾಗಿದ್ದ. ಆದರೆ ಭ್ರಷ್ಟರ ಆಪದ್ಬಾಂಧವನಂತೆ ಬಂದ ಕಮೀಷನರ್ ಪೂಜಾರಿಗೆ ಎರಡು ಲಕ್ಷ ರೂಪಾಯಿಯ ಕಪ್ಪ ಸಲ್ಲಿಸಿ ಸಹಾಯಕ ನಗರ ಯೋಜನಾಧಿಕಾರಿ ಹುದ್ದೆಗೆ ಏರಿಬಿಟ್ಟ!


ಭ್ರಷ್ಟ ನಂ. 1

ಪಾಲಿಕೆಯ ಇತಿಹಾಸದಲ್ಲಿಯೇ ಅತಿಭ್ರಷ್ಟ ಅಧಿಕಾರಿಯೆಂದು ಗುರುತಿಸಿ ಸನ್ಮಾನಿಸುವುದಾದರೆ, ಅದಕ್ಕೆ ಅರ್ಹನಾದ ವ್ಯಕ್ತಿ ಮುಖ್ಯ ಲೆಕ್ಕಾಧಿಕಾರಿ ಜಗದೀಶ. ಸೂತ್ರ ಕಡಿದ ಗಾಳಿಪಟದಂತಾ ಗಿರುವ ಪಾಲಿಕೆಯಲ್ಲಿ ಅದೆಂತಹ ಲೆಕ್ಕಗಳನ್ನು ನಿಸೂರವಾಗಿ ಹಳ್ಳ ಹಿಡಿಸಿ ಕಮಾಯಿಸುವ ಕಲೆ ಈತನಿಗೆ ಕರಗತ. ಕುಮಾರಸ್ವಾಮಿ ಸರ್ಕಾರದ ಕಾಲದಲ್ಲಿ ಮೂರನೇ ಹಣಕಾಸು ಯೋಜನೆಯಿಂದ ನಗರ ಮುಖ್ಯ ರಸ್ತೆಗಳ ಕಾಂಕ್ರಿಟೀಕರಣ ಮತ್ತು ಪೇವರ್ ಫಿನಿಷ್ ಗೋಸ್ಕರ 20 ಕೋಟಿ ಅನುದಾನ ಬಿಡುಗಡೆಯಾಗಿತ್ತು. ಈ ಹಣವನ್ನು ಉದ್ದೇಶರಹಿತವಾಗಿ ಬಳಸುವಂತಿಲ್ಲ ಎಂದೂ ಸ್ಪಷ್ಟವಾಗಿ ಆದೇಶಿಸಲಾಗಿತ್ತು.



ರಘುಪಾಲ್ | ಜಗದೀಶ | ಮಧುಸೂದನ್

ಆ ಹಣದಲ್ಲಿ ಉದ್ದೇಶಿತ ಕಾಮಗಾರಿಗೆ ಎರಡು ಕೋಟಿಯಷ್ಟೇ ಖರ್ಚಾಗಿದ್ದು ಮಿಕ್ಕುಳಿದ 18 ಕೋಟಿಯನ್ನು ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡಿದ್ದರೂ ಎರಡು ವರ್ಷದಲ್ಲಿ 24 ಲಕ್ಷದಷ್ಟು ಬಡ್ಡಿ ಹಣದ ರೂಪದಲ್ಲಿ ಪಾಲಿಕೆಗೆ ಬರುತ್ತಿತ್ತು. ಆದರೆ ಈ ಚಾಣಾಕ್ಷ ಜಗದೀಶ ಉಳಿದ 12 ಕೋಟಿ ಹಣವನ್ನು ಇತರೆ ಕಾಮಗಾರಿಗಳನ್ನು ಮಾಡಿದ್ದ ಕಂಟ್ರಾಕ್ಟುದಾರರು ಸಲ್ಲಿಸಿದ್ದ ಬಾಕಿ ಬಿಲ್ಲುಗಳಿಗೆ ಡ್ರಾ ಮಾಡಿ ಕೊಟ್ಟ. ಹಾಗೆ ಹಣ ಕೊಡುವಾಗ ಒಂದು ಲಕ್ಷಕ್ಕೆ ಒಂದು ಸಾವಿರ ರೂಪಾಯಿಯಂತೆ ಕಮೀಷನ್ ಪಡೆದ. ಅಂದರೆ 12 ಕೋಟಿಗೆ ಈತ ಎಷ್ಟು ಕಮಿಷನ್ ಪಡೆದಿದಾನೆಂದು ಲೆಕ್ಕ ಹಾಕಿ?!



ಚಂದ್ರಹಾಸ | ನಾಗೇಂದ್ರ | ಅಶೋಕ್ ಕುಮಾರ್ | ಮಂಜುನಾಥ್



ರಿಚರ್ಡ್ | ಸಂಜೀವ | ಶಿವರಾಜ್ | ಸುರೇಶ್ ಶೆಟ್ಟಿ

ಅಂತೆಯೇ ತುಂಬೆ ವೆಂಟೆಂಡ್ ಡ್ಯಾವನ್‌ಗೆಂದು ಎಂಸಿಎಫ್ ಕಾರ್ಖಾನೆಯವರು ನಾಲ್ಕು ಕೋಟಿ ಮೊತ್ತವನ್ನು ಪಾಲಿಕೆಯ ಹೆಸರಲ್ಲೇ ಬ್ಯಾಂಕ್‌ನಲ್ಲಿ ಡಿಪಾಸಿಟ್ಟು ಮಾಡಿದ್ದು ಅದರಲ್ಲಿ ಬರುವ ಬಡ್ಡಿ ಹಣದಲ್ಲಿ ಸದರಿ ಕಾರ್ಖಾನೆಯ ನೀರಿನ ಬಿಲ್ಲನ್ನು ಮುರಿದುಕೊಳ್ಳುವುದು ಒಪ್ಪಂದ. ಅದರಲ್ಲೂ ಈ ಖದೀಮ ಜಗದೀಶ ರೂ. 50 ಲಕ್ಷ ಡ್ರಾ ಮಾಡಿ ಲಕ್ಷಕ್ಕೆ ಐದು ಸಾವಿರದ ಕಮೀಷನ್‌ನಂತೆ ಹಳೆಯ ಕಂಟ್ರಾಕ್ಟ್ ಬಿಲ್ಲುದಾರರಿಗೆ ಹಂಚಿ ಕೃತಾರ್ಥನಾಗಿದ್ದಾನೆ.

ಅಕ್ರಮ-ಸಕ್ರಮದಲ್ಲಿ ಎಷ್ಟೇ ಹಣ ವಸೂಲಾದರೂ ಅದನ್ನು ಅಭಿವೃದ್ಧಿ ಕೆಲಸಗಳಿಗಷ್ಟೇ ವಿನಿಯೋಗಿಸಬೇಕಾಗಿರುವುದು ನಿಯಮ. ಆದರೆ ಇಲ್ಲಿ ವಸೂಲಾದ ಒಂದು ಕೋಟಿ 19 ಲಕ್ಷವನ್ನೂ ಈತ ಮೇಲಿನಂತೆ ವಿತರಣೆ ಮಾಡಿ ಅದರಲ್ಲೂ ಕಮೀಷನ್ ಪಡೆದಿರುವ ಭೂಪನೀತ. ಈತನಿಗೆ ಯಾರು ಕಪ್ಪ ಸಲ್ಲಿಸಲು ತಯಾರಿರುತ್ತಾರೋ ಅವರ ಬಿಲ್‌ಗಳು ಸೀನಿಯಾರಿಟಿ ಪಡೆದು ಪಾಲಿಕೆಯ ನಿಯಮಗಳೆಲ್ಲಾ ಗಾಳಿಗೆ ತೂರಲ್ಪಡುತ್ತವೆ. ಇದೆಲ್ಲವೂ ಜನ ಪ್ರತಿನಿಧಿಗಳಿಗಾಗಲೀ ಜಿಲ್ಲಾಧಿಕಾರಿಗಳಿಗಾಗಲೀ ಗೊತ್ತಿಲ್ಲದ್ದಲ್ಲ. ಅವರೆಲ್ಲ ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿದ್ದಾರಷ್ಟೆ. ಈತನ ಈ ಅಪ್ರತಿಮ 'ಬಿಲ್ಲು'ಗಾರಿಕೆಯಲ್ಲಿ ಸಹಕರಿಸುತ್ತಾ ಅಂತೆಗೆ ತಕ್ಕ ಬೊಂತೆಯಂತಿರುವವನು ಆಪ್ತ ಸಹಾಯಕ ಕೃಷ್ಣಪ್ಪ.

ಅನಾರೋಗ್ಯ ಇಲಾಖೆ

ಇಡೀ ಪಾಲಿಕೆಯ ಆಡಳಿತಯಂತ್ರದ ರೋಗಗ್ರಸ್ತ ಸ್ಥಿತಿಗೆ ಕೈಗನ್ನಡಿಯಂತಿರುವುದು ಆರೋಗ್ಯ ವಿಭಾಗ. ಇಲ್ಲಿ ಆರೋಗ್ಯಾಧಿಕಾರಿಯಾಗಿರುವ ಡಾ. ಮಂಜಯ್ಯ ಶೆಟ್ಟಿ ಎಂಬ ಪೊಳಲಿ ಮನೆತನದ ವ್ಯಕ್ತಿಗೆ ಪಾಲಿಕೆಯ ಕೆಲಸಗಳಿಗಿಂತ ಸ್ವಂತ ತಲೆಬಿಸಿಗಳೇ ಜಾಸ್ತಿ. ಗುತ್ತಿನ ಮನೆಯ ಗತ್ತಿನ ಶೆಟ್ಟರು ಮಂಗಳೂರಲ್ಲಿ ಗುಪ್ತಾಗಿ ಫ್ಲ್ಯಾಟ್ ಕಟ್ಟಲು ಹೋಗಿ, ಅದರಲ್ಲಿ ಇನ್ನಿಲ್ಲದ ತಕರಾರುಗಳಿಂದ ಕೈಸುಟ್ಟುಕೊಂಡು ಸದಾ ಹೈ ಬಿ.ಪಿ.ಯಲ್ಲೇ ಕಾಲ ಕಳೆಯುವಂತಾಗಿದೆ. ಕಣ್ಣಮುಂದೆ ಬೀಳುವ ಫೈಲುಗಳನ್ನೆಲ್ಲ ನೋಡುವ ವ್ಯವಧಾನವೂ ಇಲ್ಲದೇ ಕಣ್ಣುಮುಚ್ಚಿ ಸಹಿ ಜಡಿಯುವ ಜಾಯಮಾನ ಡಾ ಶೆಟ್ಟಿಯವರದ್ದು.

ಹೇಳುವುದಕ್ಕೆ ತೀರಾ ಹಗುರವಾಗಿ ಕಾಣುವ ತ್ಯಾಜ್ಯ ವಿಲೇವಾರಿಗೆಂದೇ ಪಾಲಿಕೆಯು ತಿಂಗಳಿಗೆ ರೂ. 44 ಲಕ್ಷ ವ್ಯಯ ಮಾಡುತ್ತದೆ. ಕಸದ ಕಂಟ್ರಾಕ್ಟರುಗಳಿಂದಲೂ ಸಾಲ ಎತ್ತಿರುವ ಆರೋಗ್ಯಾಧಿಕಾರಿಯ ಸಡಿಲುತನದಿಂದ ಇಲ್ಲಿ ತ್ಯಾಜ್ಯ ವಿಲೇವಾರಿ ಕಂಟ್ರಾಕ್ಟರುಗಳು ಆಡಿದ್ದೇ ಆಟವಾಗಿದೆ.

ಆರೋಗ್ಯ ವಿಭಾಗದಲ್ಲಿ ಸಹಾಯಕ ಆರೋಗ್ಯಾಧಿಕಾರಿಯ ಹುದ್ದೆ ಖಾಲಿ ಇದೆ. ಮಲೇರಿಯಾಕ್ಕೆ ರಾಜ್ಯದಲ್ಲೇ ಕುಖ್ಯಾತಿ ಪಡೆದಿರುವ ಮಂಗಳೂರು ಪಾಲಿಕೆಯಲ್ಲಿ ಮಲೇರಿಯಾಕ್ಕೆಂದೇ ಒಂದು ವಿಭಾಗವಿದೆ. ಆದರೆ ಅದಕ್ಕೊಬ್ಬ ಬರಕತ್ತಿನ ಅಧಿಕಾರಿ ಇಲ್ಲ. ಮಲೇರಿಯಾದ ಬಗ್ಗೆ ಓನಾಮ ಅರಿಯದ ನಿವೃತ್ತ ಕ್ಲರ್ಕ್ ಸುರೇಶ್ ಎಂಬಾತನೇ ಈ ವಿಭಾಗಕ್ಕೆ ಬಾಸ್!

ನಗರದಲ್ಲಿ ಮಲೇರಿಯಾ ರೋಗಿಗಳ ಚಿಕಿತ್ಸೆಗೆಂದೇ ಓರ್ವ ವೈದ್ಯನಿದ್ದಾನೆ. ಆತನ ಹೆಸರು ಡಾ. ದಿಲೀಪ್

ಲೋಬೋ ಬಂದರು ದಾರಿ ಬಿಡಿ!

ಕಳೆದ ಎರಡು ದಶಕಗಳ ಕಾಲ ಮಂಗಳೂರು ಬಿಟ್ಟು ಕದಲದ ಮತ್ತು ತಾನು ಮಂಗಳೂರಲ್ಲಿ ಇದಷ್ಟು ಕಾಲ ಎರಡೆರಡು ಹುದ್ದೆಗಳಲ್ಲಿ ವಿಜೃಂಭಿಸಿದ ಕೀರ್ತಿ ಜೆ.ಆರ್. ಲೋಬೋ ಎಂಬ ಅಧಿಕಾರಿಗೆ ಸಲ್ಲುತ್ತದೆ. ಅಧಿಕಾರವನ್ನು ಡಿಪ್ಲೋಮೇಟಿಕ್ ಆಗಿ ಚಲಾಯಿಸುತ್ತಲೇ ಕಮಾಯಿಸುವುದರಲ್ಲಿ ಪಳಗಿರುವ ಜೆ.ಆರ್. ಲೋಬೋಗೂ ಮಂಗಳೂರಿನ ಏಕೈಕ ನಿಸರ್ಗ (ಸರ್ಕಾರಿ) ಪಿಲಿಕುಲಕ್ಕೂ ಎಲ್ಲಿಲ್ಲದ ಸಂಪರ್ಕ ಎನ್ನುವುದಕ್ಕಿಂತಲೂ ಬಿಡಿಸಲಾಗದ ನಂಟು.

ಪುತ್ತೂರಲ್ಲಿ ತಹಶೀಲ್ದಾರರಾಗಿ ಹೆಸರು ಮಾಡಿದ್ದ ಲೋಬೋ ಡಿ.ಸಿ ಕಚೇರಿಯಲ್ಲಿ ಎಚ್.ಕ್ಯೂ. ಆಗಿದ್ದು ಪಿಲಿಕುಲದ ಡೈರೆಕ್ಟ್ ಆದರು. ಅನಂತರ ಭೂಸ್ವಾಧೀನ ಅಧಿಕಾರಿಯಾದರು, ಮಂಗಳೂರು ಮ.ನ.ಪಾ.ದ ಕಮೀಷನರ್ ಆದರು. ಅಷ್ಟೊತ್ತಿಗೆ ಎಡಿಬಿ ಭೂಪ ಮಂಗಳೂರಿಗೆ ಪ್ರವೇಶಿಸಿತು. ಇವರೇ ಅದರ ನಿರ್ದೇಶಕರಾದರು. ಇಷ್ಟಾದರೂ ಪಿಲಿಕುಲದ ನಿರ್ದೇಶಕಗಿರಿ ಮಾತ್ರ ಲೋಬೋರ ಕೈ ತಪ್ಪಲೇ ಇಲ್ಲ. ಇದೀಗ ಕುಡ್ಸೆಂಪ್ ಯೋಜನೆ ಸಮಾಪ್ತಿ ಹಂತದಲ್ಲಿದೆ. ಮ.ನ.ಪಾ. ಕುರ್ಚಿ ಕೂಡಾ ಖಾಲಿ ಇದೆ. ತಕ್ಷಣ ಅದಕ್ಕೆ ಅಮರಿಕೊಂಡಿದ್ದಾರೆ ಲೋಬೋ. ಜೂನ್ ಏಳನೇ ತಾರೀಖು ಚಾರ್ಜ್ ತೆಗೆದುಕೊಂಡ ಲೋಬೋ ಸಾಹೇಬರು ಅಂದೇ ರಜೆ ಹಾಕಿ 20 ನೇ ತಾರೀಖು ತನಕ ನಾಪತ್ತೆಯಾಗಿದ್ದರು. ಇದೀಗ ಡಿಪ್ಯೇಶನ್‌ನಲ್ಲಿ ಮ.ನ.ಪಾ.ಗೆ ಬಂದಿರುವ ಲೋಬೋ ಅಲ್ಲೇ ಗೂಟ ಹೂಡಲು ಲಾಬಿ ಮಾಡತೊಡಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ಪಡಪೋಸಿಯಂತೆ ವರ್ತಿಸುವ ಕೃಷ್ಣ ಜೆ. ಪಾಲೇಮಾರ್‌ಗೆ ಗಂಟುಬಿದ್ದಿದ್ದಾರೆ. ಪಿಲಿಕುಳದ ನಿರ್ದೇಶಕಗಿರಿಯನ್ನು ವರ್ಷಾನುಗಟ್ಟಲೆ ಅನುಭವಿಸುತ್ತಾ ಬಂದಿರುವ 'ಡಬ್ಬಲ್ ಆಕ್ಟರ್ ಲೋಬೋ'ಗೆ ಮತ್ತೆ ಮ.ನ.ಪಾ.ಗೆ ವಕ್ಕರಿಸುವುದು ಕಷ್ಟದ ಕೆಲಸವೇನಲ್ಲ.

...ಮಿಬ್ಬ್ಬಿ. ಈತನಂತೂ ಕಚೇರಿ ಬಿಟ್ಟು ಹೊರಗೆ ಬಂದ ...ವಾಹರಣೆಗಳಿಲ್ಲ. ಇನ್ನು ಘಾಗಿಂಗ್, ಔಷಧಿ ಸಿಂಪಡಣೆ, ...ನಾಗ್ರತಿಗಾತಲೇ ಒಂದಷ್ಟು ಕಾರ್ಯಕರ್ತೆಯರೂ ಇದ್ದಾರೆ. ...ವರೆಲ್ಲರೂ ಬಿಟ್ಟು ಸೇರಿ ಕಚೇರಿಯಲ್ಲೇ ಫೀಲ್ಡ್‌ವರ್ಕ್ ಮಾಡುತ್ತಾರೆ. ...ಫಿಲಿಪ್ ಸೊಳ್ಳೆ ಬೇಕಾದರೆ ಹುಡುಕಿಕೊಂಡು ಇವರಿದ್ದಲ್ಲಿಗೆ ...ಬೇಕು. ಆದರೆ ಇವರ ಓಡಾಟಕ್ಕೆಂದೇ ಇರುವ ವಾಹನದ ...ಸೆಲ್ ಬಿಲ್ಲು ಮಾತ್ರ ತಿಂಗಳಿಗೊಮ್ಮೆ ಕರೆಕ್ಟ್ ಆಗಿ ಡ್ರಾ ಆಗುತ್ತದೆ.

ಕಸದಲ್ಲೂ ರಸ ಹೀರುವ ಮಧು

ಪಾಲಿಕೆಯ ತ್ಯಾಜ್ಯ ವಿಲೇವಾರಿ ನೋಡಿಕೊಳ್ಳಲೆಂದೇ ಪರಿಸರ ...ಜಿನಿಯರ್ ಒಬ್ಬನಿರುತ್ತಾನೆ. ಕಸದಿಂದ ರಸ ಹೀರುವುದರಲ್ಲಿ ...ಸ್ಸಾತನಾಗಿರುವ ಈತನ ಹೆಸರು ಕೂಡಾ ಪ್ರವೃತ್ತಿಗೆ ತಕ್ಕಂತೆಯೇ ...ಧು. ತಾನು ಕೆಲಸಕ್ಕೆ ಸೇರಿದ ತಿಂಗಳಲ್ಲೇ ತ್ಯಾಜ್ಯ ವಿಲೇವಾರಿ ...ಟ್ರಾಕ್ಟರುಗಳೊಂದಿಗೆ ದೋಸ್ತಿ ಮಾಡಿಕೊಂಡ ಈತನ ಶರವು ...ಗಾಗೂಪತಿ ದೇವಸ್ಥಾನದ ಬಳಿಯಿರುವ ಮನೆಗೆ ಸಂಜೆ ಏಳಾಗುತ್ತಲೇ ...ವರ ದರ್ಶನಕ್ಕೆ ಬಂದಂತೆ ಕಂಟ್ರಾಕ್ಟರುಗಳು ಬಂದು ನಿಲ್ಲುತ್ತಾರೆ.

ಪರಿಣಾಮವಾಗಿ ತ್ಯಾಜ್ಯ ವಿಲೇವಾರಿಗೆಂದು 28 ಲಾರಿಗಳಿಗೆ ...ಲ್ಲು ಪಾವತಿಯಾದರೂ 15-16 ಲಾರಿಗಳು ಮಾತ್ರ ಡಪ್ಪಿಂಗ್ ...ಯಾರ್ಡ್‌ಗೆ ಕಸತಂದು ಸುರಿಯುತ್ತವೆ. ಡಪ್ಪಿಂಗ್ ಯಾರ್ಡ್‌ನಲ್ಲಿ ...ದ್ದೆ ಬೀಳುವ ಕಸದ ರಾಶಿಯನ್ನು ಮಟ್ಟ ಮಾಡಲೆಂದೇ ಪಾಲಿಕೆಯ ...ಸಿ.ಬಿ.ಯೊಂದಿದೆ. ಆದರೆ ಈ ಜೆ.ಸಿ.ಬಿ. ಕಸ ಮಟ್ಟಸ ...ಡುವುದಕ್ಕಿಂತ ಖಾಸಗಿ ಕಂಟ್ರಾಕ್ಟರುಗಳ ಲಾರಿಗಳಿಂದ ಕಸವನ್ನು ...ನ್‌ಲೋಡ್ ಮಾಡಲು ಬಳಕೆಯಾಗುವುದೇ ಹೆಚ್ಚು.

ಜೆ.ಸಿ.ಬಿ.ಗೆ ದಿನವಹಿ 80 ಲೀಟರ್ (8 ಗಂಟೆಗೆ) ಡೀಸೆಲ್ ...ದಲು 130 ಲೀಟರ್ ಡೀಸಲ್ ಖರ್ಚಾಗಿದೆಯೆಂದು ಲೆಕ್ಕ ...ತೋರಿಸಿ ಪ್ರತಿದಿನ 50 ಲೀಟರ್‌ನಂತೆ ತಿಂಗಳಿಗೆ 1,500 ಲೀಟರ್ ...ಸೆಲ್ ಲೆಕ್ಕ ತೋರಿಸಿ ಕಮಾಯಿಸುತ್ತಿದ್ದಾನೆ. ಈ ಡೀಸಲ್ ಮೊದಲೇ ...ತ್ತಾದ ಪಳ್ನೀರ್‌ನ ವಿಷ್ಣು ಪೆಟ್ರೋಲ್ ಬಂಕ್‌ನಿಂದ ಅಧಿಕೃತವಾಗಿ ...ಬರಾಜಾಗುತ್ತಿದ್ದು, ಅಲ್ಲಿಂದ ಡಪಿಂಗ್ ಯಾರ್ಡ್ ಇರುವ ...ಮಂಜೂರಿಗೆ ಹೇಗೆ ಒಯ್ಯಲಾಯಿತು? ಕನಿಷ್ಠವೆಂದರೂ ಪಳ್ನೀರಿನಿಂದ ...ಪಿಂಗ್ ಯಾರ್ಡಿಗೆ 100 ರೂ. ಆಟೋರಿಕ್ಷಾ ಬಾಡಿಗೆ ಆಗುತ್ತದೆ. ...ದೆಲ್ಲೂ ದಾಖಲಾಗಿಲ್ಲವೆಂದರೆ ಅಲ್ಲಿ ಏನೋ ನಡೆದಿದೆ ಎಂಬುದು ...ಷ.

ಪ್ರತಿ ಲಾರಿಗೆ ತಿಂಗಳ ರೂ. 5,000 ಮಾಮೂಲು ...ಸಿ.ಬಿ.ಯಿಂದ ಅನ್‌ಲೋಡ್ ಮಾಡಿದ್ದಕ್ಕೆ) ಮತ್ತು ಡೀಸಲ್ ಕದ್ದದ್ದು ...ದೆಲ್ಲ ಲೆಕ್ಕ ಹಾಕಿದರೆ ತಿಂಗಳಲ್ಲಿ ಕಸದಿಂದ ರಸ ಹೀರಿದ್ದು ಎಷ್ಟು ...ದು ಗೊತ್ತಾಗುತ್ತದೆ. ಇದು ಒಂದು ಸ್ಯಾಂಪಲ್ ಅಷ್ಟೆ.

ಒಮ್ಮೆ ಈ ಕಸದಲ್ಲಿ ಕಮಾಯಿಸುವ ರುಚಿ ಹಿಡಿದ ಕಂಟ್ರಾಕ್ಟರುಗಳು ...ತ್ತೆಂದೂ ಅದು ತಮ್ಮ ಕೈ ತಪ್ಪಲು ಬಿಡುವುದಿಲ್ಲ. ಈ ತ್ಯಾಜ್ಯ ...ಲೇವಾರಿ ಕಂಟ್ರಾಕ್ಟು ಪಡೆಯಲು ಭಾರಿ ದೊಡ್ಡ ಲಾಬಿಯೇ ...ಡೆಯುತ್ತದೆ. ಇನ್ನು ಆಸ್ಪತ್ರೆಗಳು ತಮ್ಮ ವೈದ್ಯಕೀಯ ತ್ಯಾಜ್ಯಗಳನ್ನು ...ಂಗಳೂರಿನಿಂದ 25 ಕಿ.ಮೀ. ದೂರದಲ್ಲಿರುವ ಮೂಲ್ಕಿಯ ರಾಮ್ಕೀ ...ಯೋ ಮೆಡಿಕಲ್ ಡಂಪ್ಪಿಂಗ್ ಯಾರ್ಡನಲ್ಲೇ ವಿಲೇವಾರಿ ...ಡಬೇಕೆಂಬ ನಿಯಮವಿದೆ. ಆದರೆ ಅಷ್ಟು ದೂರ ಸಾಗಿಸಲು ...ಬಾರಿಯಾಗುತ್ತದೆಂದು ಆಸ್ಪತ್ರೆಗಳು ಪಾಲಿಕೆಯ ಕಂಟ್ರಾಕ್ಟರುಗಳ ...ತೆ ವ್ಯವಹಾರ ಕುದುರಿಸುತ್ತಾರೆ. ಲಾರಿಗಳ ಅಡಿಯಲ್ಲಿ ಆಸ್ಪತ್ರೆಯ ...ತ್ಯಾಜ್ಯ ತುಂಬಿ ಅದರ ಮೇಲೆ ಇತರೇ ತ್ಯಾಜ್ಯಗಳನ್ನು ಹಾಕಿ ಪಾಲಿಕೆಯ ...ಪ್ಪಿಂಗ್ ಯಾರ್ಡ್‌ಗೇ ಸುರಿಯುತ್ತಾರೆ. ಇದರಿಂದ ಕಂಟ್ರಾಕ್ಟರುದಾರರಿಗೆ ...ಬ್ಬಲ್ ಕಮಾಯಿ. ಬರೆಯುತ್ತಾ ಹೋದರೆ ಮಂಗಳೂರು ಪಾಲಿಕೆಯ ...ತ್ಯಾಜ್ಯ ವಿಲೇವಾರಿಯದ್ದೇ ಒಂದು ಕೊನೆ ಇಲ್ಲದ ಪುರಾಣವಾಗುತ್ತದೆ.

ಇನ್ನು ಒಂದೂವರೆ ವರ್ಷದಿಂದ ಸರ ಸತ್ತಂತಿರುವ ಪಾಲಿಕೆಯ ...ದಾಯ ಇಲಾಖೆಯಲ್ಲಿ ಕಂದಾಯ ನಿರೀಕ್ಷಕ ಮಹಮ್ಮದ್ ಎಂಬಾತನೇ ...ರಸ; ಆತನದ್ದೇ ಅಟ್ಟಹಾಸ. ಕಾಲಕಾಲಕ್ಕೆ ಬರುವ ಕಮೀಷನ್ನರುಗಳನ್ನು ...ಕ್ಕೆ ಬುಟ್ಟಿಗೆ ಹಾಕಿಕೊಂಡು ಖಾತೆ ಬದಲಾವಣೆಯ ಸಂದರ್ಭದಲ್ಲಿ ...ಕಲಿ ಡೋರ್ ನಂಬರ್‌ಗಳನ್ನು ಸೃಷ್ಟಿಸುವ ಮಹಮ್ಮದ್ ಇಲ್ಲಿಯತನಕ ...ಮಾಯಿಸಿದ ಸಾವಿರಕ್ಕೂ ಹೆಚ್ಚು ಪ್ರಕರಣಗಳು ಸಿಗುತ್ತವೆ. ಇದನ್ನು ...ಖೆಗೆ ಒಳಪಡಿಸಬೇಕಷ್ಟೇ.

ಇನ್ನು ಯಾರೂ ಯೋಚಿಸದೇ ಇರುವ ಒಳಚರಂಡಿಯ ...ಹಾರದಲ್ಲಿಯೂ ಅಧಿಕಾರಿಗಳು ಗುಪ್ತವಾಗಿ ಕಂಟ್ರಾಕ್ಟರರ ಜೊತೆ ...ಮೀಲಾಗಿ ಅಮೇಧ್ಯ ತಿನ್ನುತ್ತಾರೆಂದರೆ, ಇವರು ಯಾವುದರಲ್ಲಿ ...ಮ್ಮ ನಾಲಿಗೆ ಚಾಚಿಲ್ಲ ಎಂದು ಅಚ್ಚರಿಯಾಗುತ್ತದೆ.

ಒಟ್ಟಾರೆ ಹೇಳಬೇಕೆಂದರೆ ಮಂಗಳೂರು ಮಹಾನಗರ ಪಾಲಿಕೆಯ ...ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು ಎಂಬಂತಾಗಿದೆ. ಆಡಳಿತ ಪಕ್ಷ, ...ರೋಧ ಪಕ್ಷ ಮತ್ತು ಕಾರ್ಯಾಂಗ ಒಂದೇ ತಟ್ಟೆಯಲ್ಲಿ ಸಹಮತದಿಂದ ...ಣ್ಣಲು ಕೂತಿರುವುದರಿಂದ ಇಡೀ ಪಾಲಿಕೆ ದರಿದ್ರ ಸ್ಥಿತಿಗೆ ತಲುಪಿದೆ. ...ಮದನಿಗಿಂತ ಖರ್ಚು ಜಾಸ್ತಿಯಾಗಿ ಆಡಳಿತದಲ್ಲಿ ಲಯ ತಪ್ಪಿದೆ. ...ಗಾಗಲೇ ತಿಳಿದುಬಂದಿರುವಂತೆ ಸುಮಾರು 20 ಕೋಟಿಯಷ್ಟು ...ಮೊತ್ತವನ್ನು ಬಾಕಿ ಕಂಟ್ರಾಕ್ಟುದಾರರಿಗೆ ಕೊಡಬೇಕಾಗಿದೆ. 316 ...ಕೋಟಿಯ ಎಡಿಬಿ ಸಾಲದಿಂದ ನಡೆದ ಅಭಿವೃದ್ಧಿ ಕಾಮಗಾರಿಗಳು ...ಟಿಕ್ಕಿಲ್ಲದ ಉಪ್ಪಿನಕಾಯಿಯಂತಾಗಿದ್ದು ಇನ್ನಷ್ಟು ಸಾಲದ ಶೂಲಕ್ಕೆ ...ಲಿಕೆಯನ್ನು ದೂಡಿದೆ.

'ಇಲ್ಲ' ಎಂಬ ರೋಗಕ್ಕೆ ಬಲಿಯಾಗುತ್ತಿರುವ ಮಂಗಳೂರು ...ಹಾನಗರ ಪಾಲಿಕೆಯನ್ನು ಬಚಾವು ಮಾಡುವವರು ಯಾರು ...ಬ ಪ್ರಶ್ನೆಯಷ್ಟೇ ಈಗ ಉಳಿದಿದೆ.

■ ಪ್ರಕಾಶ್ ಪಿಂಟೋ

ಬೆಂಗಳೂರು ಮಹಾನಗರ ಪಾಲಿಕೆ

ಬಿಜೆಪಿಗೆ ಈಗ ಚುನಾವಣೆ ಬೇಡವಂತೆ!

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯನ್ನು ಮೂರು ತಿಂಗಳ ಒಳಗೆ ನಡೆಸಬೇಕೆಂದು ಹೈಕೋರ್ಟ್ ಸೂಚಿಸಿದೆ. ಆದರೆ ಈಗಲೇ ಚುನಾವಣೆ ನಡೆಸಲು ಮುಖ್ಯಮಂತ್ರಿ ಯಡ್ಡಿಗೆ ಸುತರಾಂ ಇಷ್ಟವಿಲ್ಲ. ಈಗಾಗಲೇ ಅಧಿಕಾರಿಗಳು ಅಪಸ್ವರ ಎತ್ತಿದ್ದು ಸರ್ಕಾರ ಕೂಡ ಹಿಂದೇಟು ಹಾಕುವ ಸೂಚನೆ ಕಾಣಿಸುತ್ತಿದೆ.

ಈ ಚುನಾವಣೆ ಯಡ್ಡಿ ಪಾಲಿಗೆ ಮೊದಲ ಅಗ್ನಿ ಪರೀಕ್ಷೆ. ವಿಧಾನಸಭೆಯಲ್ಲಿ ಬಹುಮತ ಹೊಂದಲು ಕೀಳು ಮಟ್ಟದ ರಾಜಕೀಯ ಮಾಡುತ್ತಿರುವ ಯಡ್ಡಿಯ ಬಿಜೆಪಿ ಈಗ ಒಡೆದ ಮನೆ. ಈಗಲೇ ಚುನಾವಣೆ ನಡೆದರೆ ಬೆಂಗಳೂರಿನ ಪ್ರಜ್ಞಾವಂತರು ತಪರಾಕಿ ನೀಡಬಹುದು. ಅಲ್ಲದೆ ಪಕ್ಷದಲ್ಲಿನ ಕೆಲ ನಾಯಕರೇ ತಮ್ಮ ಕಾಲೆಳೆಯಬಹುದು ಎಂದು ಯಡ್ಡಿ ಹೆದರಿದ್ದಾರೆ.

ಮೊನ್ನೆಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬೆಂಗಳೂರಿನಲ್ಲಿ ಹೆಚ್ಚು ಸ್ಥಾನಗಳಲ್ಲಿ ಗೆದ್ದಿದೆ ನಿಜ. ಆದರೆ ರಾಜಧಾನಿಯಲ್ಲಿ ಬಿಜೆಪಿ ಪ್ರಬಲವಾಗಿದೆ ಎಂದರ್ಥವಲ್ಲ. ಯಾಕೆಂದರೆ ಹೆಚ್ಚಿನ ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆದ್ದಿರುವುದು ಕಡಿಮೆ ಅಂತರದಿಂದ. ಹೀಗಾಗಿ ನಾವೇ ಗೆದ್ದು ಮಹಾನಗರ ಪಾಲಿಕೆಯ ಅಧಿಕಾರ ಹಿಡಿಯುತ್ತೇವೆ ಎಂಬ ಹುಮ್ಮಸ್ಸಿನಲ್ಲಿ ಚುನಾವಣೆ ಎದುರಿಸುವ ಧೈರ್ಯವಂತೂ ಬಿಜೆಪಿಗೆ ಸದ್ಯಕ್ಕಿಲ್ಲ.


ಹೀಗಾಗಿ ಮಹಾನಗರ ಪಾಲಿಕೆಯ ಚುನಾವಣೆಯನ್ನು ಒಂದಷ್ಟು ದಿನ ಮುಂದೂಡಿ, ಲೋಕಸಭಾ ಚುನಾವಣೆಯೊಂದಿಗೇ ನಡೆಸೋಣ ಎಂಬ ಯೋಚನೆಯಲ್ಲಿ ಯಡ್ಡಿ ಇದ್ದಾರೆ. ಆದರೆ ಚುನಾವಣಾ ಆಯೋಗ ಮತ್ತು ಹೈಕೋರ್ಟ್ ಇದಕ್ಕೆ ಅವಕಾಶ ಮಾಡಿಕೊಡುವ ಸಾಧ್ಯತೆ ಬಹಳ ಕಡಿಮೆ.

ಕಾಲೆಳೆಯಲು ಕಾಯುತ್ತಿರುವ ಸಚಿವರು!



ಬಿಜೆಪಿಯಲ್ಲಿ ಯಡ್ಡಿ ಈಗ 'ಸೂಪರ್ ಮ್ಯಾನ್'. ಯಾರ ಮಾತನ್ನೂ ಕೇಳದೆ ತಾವಂದುಕೊಂಡಿದ್ದನ್ನೇ ಸಾಧಿಸುತ್ತಿರುವ ಯಡ್ಡಿಗೆ ಸರಿಯಾಗಿ ಪಾಠ ಕಲಿಸಬೇಕೆಂದು ಅವರ ಸಚಿವ ಸಂಪುಟದ ಕೆಲ ಸದಸ್ಯರೇ ಕತ್ತಿಮಸೆಯುತ್ತಿದ್ದಾರೆ. ಇದಕ್ಕೆ ಈ ಚುನಾವಣೆ ಅವಕಾಶ ಮಾಡಿಕೊಡಲಿದೆ ಎಂದು ಅವರು ತುದಿಗಾಲಲ್ಲಿ ನಿಂತಿದ್ದಾರೆ.

ಚುನಾವಣೆಗೂ ಮೊದಲು ಯಡ್ಡಿಯ ಹಿಂದೆ-ಮುಂದೆ ಜಯ-ವಿಜಯರಂತೆ ಓಡಾಡಿಕೊಂಡಿದ್ದ ಸಚಿವ ಅಶೋಕ್ ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾತಿಗೆ ಯಡ್ಡಿ ಮೂರು ಕಾಸಿನ ಬೆಲೆ ಕೊಡುತ್ತಿಲ್ಲ. ಐಎಎಸ್ ಅಧಿಕಾರಿಗಳಿರಲಿ, ಬೆಂಗಳೂರಿನ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿಸಲು ಕೂಡ ಇವರಿಂದ ಈಗ ಸಾಧ್ಯವಾಗುತ್ತಿಲ್ಲ. ಯಡ್ಡಿ ಬೇಕಂತಲೇ ಹೀಗೆ ತಮ್ಮನ್ನು ದೂರ ಮಾಡುತ್ತಿದ್ದಾರೆ ಎಂದುಕೊಂಡು 'ಬುಸ್ ಬುಸ್' ಎಂದು ಬುಸುಗುಟ್ಟುತ್ತಾ ಓಡಾಡಿಕೊಂಡಿರುವ ಈ ನಾಯಕರಿಗೆ ತಮ್ಮ 'ಯೋಗ್ಯತೆ'ಯನ್ನು ಯಡ್ಡಿಗೆ ಪರಿಚಯ ಮಾಡಿಕೊಡಲು ಈ ಚುನಾವಣೆ ಅವಕಾಶ ಮಾಡಿಕೊಂಡುವುದಂತೂ ಖಂಡಿತ.





ರಿಯಲ್ ಎಸ್ಟೇಟ್ ವ್ಯಾಪಾರಿಗಳಾದ ಈ ಇಬ್ಬರು ನಾಯಕರಿಗೂ ಚುನಾವಣೆ ವ್ಯಾವಹಾರಿಕವಾಗಿ ಬಹಳ ಮುಖ್ಯ. ಹೀಗಾಗಿ ಯಡ್ಡಿಗೂ ಪಾಠ ಕಲಿಸಿದಂತಾಗಬೇಕು, ತಮಗೂ ಲಾಭವಾಗಬೇಕು ಅಂತಹ ಒಂದು ತಂತ್ರಗಾರಿಕೆಯನ್ನು ರೂಪಿಸುವಲ್ಲಿ ಇವರು ನಿರತರಾಗಿದ್ದಾರೆ.

ಇತ್ತ ಅನಂತ್‌ಕುಮಾರ್ ಬಣದಲ್ಲಿ ಗುರುತಿಸಿಕೊಂಡಿರುವ ಸುರೇಶ್‌ಕುಮಾರ್ ಕೂಡ ಯಡ್ಡಿಗೆ ಈ ಚುನಾವಣೆಯಲ್ಲಿ ಪಾಠ ಕಲಿಸಲು ತಣ್ಣಗೆ ತಂತ್ರಗಾರಿಕೆ ರೂಪಿಸುತ್ತಿದ್ದಾರೆ. ಅಂಥದ್ದೇನೂ ಮಹತ್ವವಲ್ಲದ ಖಾತೆ ತಮಗೆ ನೀಡಿದ್ದಾರೆ ಎಂದು ಬೇಜಾರಿನಲ್ಲಿರುವ ಅವರನ್ನು ಯಡ್ಡಿ ಬೆಂಗಳೂರು ಉಸ್ತುವಾರಿಯಿಂದ ಸಂಪೂರ್ಣ ಹೊರಗಿಟ್ಟಿರುವುದು ಅವರಿಗೆ ಬೇಸರ ತಂದಿದೆ. ಪಕ್ಕದ ತುಮಕೂರು ಜಿಲ್ಲೆಯ ಉಸ್ತುವಾರಿ ಸ್ಥಾನ ನೀಡಲಾಗಿದ್ದರೂ, ಯಡ್ಡಿಯ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ಅವರು ಅಲ್ಲಿಗೆ ಇನ್ನೂ ಒಂದು ಬಾರಿಯೂ ಕಾಲಿಟ್ಟಿಲ್ಲ.

ಇನ್ನು ಪಕ್ಷದ ಪರವಾಗಿ ಹಲವಾರು ವರ್ಷಗಳಿಂದ ಸುರೇಶ್ ಕುಮಾರ್ ಪುಂಗಿ ಊದಿಕೊಂಡು ಬಂದಿದ್ದರೂ ಯಡ್ಡಿ ಸರ್ಕಾರದ ಪರವಾಗಿ ಮಾತನಾಡಲು ಅವರಿಗೆ ಅವಕಾಶ ಕೊಟ್ಟಿಲ್ಲ. ಬದಲಾಗಿ ಬೆಂಗಳೂರಿನ ರಾಜಕೀಯಕ್ಕೆ ನಿನ್ನೆ-ಮೊನ್ನೆ ಕಾಲಿಟ್ಟಿರುವ ಶೋಭಕ್ಕ ಈ ಕೆಲಸ ಮಾಡಿಕೊಂಡು, ಮಿಂಚುತ್ತಿರುವುದನ್ನು ನೋಡಿ ಸುರೇಶ್‌ಕುಮಾರ್ ಹೊಟ್ಟೆಯಲ್ಲಿ ಹುಳಿ ಹಿಂಡಿದಂತಾಗಿದೆ! ಹೀಗಾಗಿ ಈ ಚುನಾವಣೆಯಲ್ಲಿ ಆತ ಕ್ರಿಯಾಶೀಲವಾಗಿ ತನ್ನನ್ನು ತೊಡಗಿಸಿಕೊಳ್ಳುವ ಸಾಧ್ಯತೆ ಕಡಿಮೆ ಎಂದು ಅವರ ಆಪ್ತರು ಗುಸುಗುಸು ಎನ್ನುತ್ತಿದ್ದಾರೆ.

ಈ ಮೂವರು ಸಚಿವರು ಒಗ್ಗಟ್ಟಾಗಿ ಯಡ್ಡಿಯ ಕಾಲೆಳೆಯದೇ ಇರಬಹುದು. ಆದರೆ ತಮ್ಮ ಮಾತಿಗೆ ಬೆಲೆ ಇಲ್ಲ ಎಂದಾದರೆ ಚುನಾವಣೆಯನ್ನು ನಿರ್ಲಕ್ಷಿಸಿ ಯಡ್ಡಿಯ ಮುಖಕ್ಕೆ ಮಸಿಬಳಿಯುವಂತೆ ಮಾಡುವುದು ಗ್ಯಾರಂಟಿ ಎನ್ನುತ್ತಿದೆ ಬಿಜೆಪಿಯ ಮೂಲಗಳು.

ಶಾಸಕರಿಗೂ ಬೇಡ

ಬಿಜೆಪಿ ಶಾಸಕರೂ ಕೂಡ ಈಗಲೇ ಚುನಾವಣೆ ಬೇಡ ಎಂದು ರೊಚ್ಚಿಗೆದಿದ್ದಾರೆ. ಇದಕ್ಕೆ ಎರಡು ಕಾರಣ. ಇನ್ನು ಮೊನ್ನೆ, ಮೊನ್ನೆ ಗೆದ್ದು ಬಂದಿರುವ ತಮಗೆ ಏನೂ ಮಾಡಲಾಗಿಲ್ಲ. ಈಗಲೇ ಮತದಾರರ ಮನೆಗೆ ಮತ್ತೆ ಹೋಗುವುದಾದರೂ ಹೇಗೆ ಎಂಬುದು ಅವರ ಮೊದಲ ಸಮಸ್ಯೆ. ಇನ್ನು ಮಹಾನಗರ ಪಾಲಿಕೆ ಸದಸ್ಯರು ಇಲ್ಲದಿರುವುದರಿಂದ ಶಾಸಕರಿಗೆ ಬರುವ ಮಾಮೂಲಿ ಹೆಚ್ಚಾಗಿದೆ. ಆದರೆ ಪಾಲಿಕೆಗೆ ಚುನಾವಣೆ ನಡೆದರೆ ತಮ್ಮ ಮಾಮೂಲಿ ಹಂಚಿಕೆಯಾಗುತ್ತಲ್ಲ ಎಂಬುದೂ ಅವರು ಚಿಂತೆಯಾಗಿದೆಯಂತೆ!

ಕಮಲಕ್ಕೆ ಕೈಕೊಟ್ಟ ಸೋಮಣ್ಣ

ಮಹಾನಗರ ಪಾಲಿಕೆ ಚುನಾವಣೆ ಇನ್ನೇನು ನಡೆಯಲಿರುವುದರಿಂದ ಕಾಂಗ್ರೆಸ್‌ನ 'ರೆಬಲ್ ಸ್ಟಾರ್' ವಿ. ಸೋಮಣ್ಣ ಬಿಜೆಪಿ ಸೇರಲಿದ್ದಾರೆ ಎಂಬ ವದಂತಿ ರಾಜಕೀಯದಲ್ಲಿ ದಟ್ಟವಾಗಿತ್ತು. ಈ ಬಾರಿ ಚುನಾವಣೆಯಲ್ಲಿ ಚೆನ್ನೈನಂತೆ ಮೇಯರ್ ಸ್ಥಾನಕ್ಕೆ ನೇರವಾಗಿ ಚುನಾವಣೆ ನಡೆಸುವ ಸಾಧ್ಯತೆಗಳಿರುವುದರಿಂದ ಬಿಜೆಪಿ ಸೇರಲಿರುವ ಸೋಮಣ್ಣ ಮೇಯರ್ ಸ್ಥಾನದ ಅಭ್ಯರ್ಥಿಯಾಗಲಿದ್ದಾರೆ ಎಂದೂ ಹೇಳಲಾಗುತ್ತಿತ್ತು. ಆದರೆ ಈ ಡೀಲ್ ಕುದುರಿದಂತೆ ಕಾಣುತ್ತಿಲ್ಲ. ಮೇಯರ್ ಆದರೆ ಗೌನ್ ಹಾಕಿಕೊಂಡು ಬೆಂಗಳೂರಿಗೆ ಬರುವ ಅತಿಥಿಗಳನ್ನು ಸ್ವಾಗತಿಸುವುದನ್ನು ಬಿಟ್ಟರೆ ಬೇರೇನೂ ಪ್ರಯೋಜನವಿಲ್ಲ. ಅಷ್ಟೇ ಅಲ್ಲದೆ ಈಗಾಗಲೇ ಬೆಂಗಳೂರಿನಲ್ಲಿ ನಾಲ್ಕಾರು ಸಚಿವರಿರುವುದರಿಂದ ಏನು ಮಾಡಿದರೂ ಅವರನ್ನು ಕೇಳಿಯೇ ಮಾಡಬೇಕಾಗುತ್ತದೆ. ಹೀಗಾಗಿ 'ನೊಣ ತಿನ್ನಲು ಜಾತಿ ಏಕೆ ಕೆಡಿಸಿಕೊಳ್ಳಬೇಕು' ಎಂಬುದು ಸೋಮಣ್ಣ ವಾದವಾಗಿದೆ. ಆದ್ದರಿಂದ ಅವರು ತಮಗೆ ಮೇಯರ್ ಸ್ಥಾನ ಬೇಡ, ಕೊಟ್ಟರೆ ಸಚಿವ ಸ್ಥಾನ ಕೊಡಿ ಎಂದು ಹೇಳಿದರಂತೆ. ಆದರೆ ಇದಕ್ಕೆ ಒಪ್ಪದ ಬಿಜೆಪಿ ನಾಯಕರು ಮುಖತಿರುಗಿಸಿಕೊಂಡು ಹೋದರೆಂಬ ಸುದ್ದಿ ಬಂದಿದೆ.

ಬಿಜೆಪಿಯ ಹೊಸ ಕ್ಯಾಂಡಿಡೇಟ್ ಸುಧಾಮೂರ್ತಿ

ಲಿಂಗಾಯಿತ ನಾಯಕ ಸೋಮಣ್ಣ ಹಿಂದೇಟು ಹಾಕುತ್ತಿದ್ದಂತೆಯೇ ಮೇಯರ್ ಸ್ಥಾನಕ್ಕೆ ಹೊಸಬರನ್ನು ಹುಡುಕಿಕೊಂಡು ಬಿಜೆಪಿ ಹೊರಟಿದೆ. ಒಂದಿಷ್ಟು ವರ್ಚಸ್ಸು ಹೊಂದಿರುವವರನ್ನು ಪಕ್ಷದ ಅಭ್ಯರ್ಥಿಯಾಗಿ ನಿಲ್ಲಿಸಿ, ಮೇಯರ್ ಸ್ಥಾನ ಗೆಲ್ಲುವ ತಂತ್ರವನ್ನು ಈಗ ಬಿಜೆಪಿ ಹೂಡಿದೆ.

ಪಕ್ಷದ ಚಿಂತಕರ ಚಾವಡಿ ಇನ್ಫೋಸಿಸ್ ನಾರಾಯಣಮೂರ್ತಿಯ ಪತ್ನಿ, ಸಮಾಜ 'ಶೇವಕಿ', ಕು'ಖ್ಯಾತ' ಸಾಹಿತಿ ಸುಧಾಮೂರ್ತಿಯ ಹೆಸರನ್ನು ಸೂಚಿಸಿದೆ. ಈಗಾಗಲೇ ಇನ್ಫೋಸಿಸ್ ಪ್ರತಿಷ್ಠಾನದ ಮೂಲಕ ಸಂಘಪರಿವಾರದ ಅಜೆಂಡಾಗಳನ್ನು ಜಾರಿಗೆ ತರುತ್ತಿರುವ ಸುಧಾಮೂರ್ತಿ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದರೆ ಎಲ್ಲ ವರ್ಗದವರೂ ಅವರನ್ನು ಬೆಂಬಲಿಸಲಿದ್ದಾರೆ ಎಂಬ ಲೆಕ್ಕಾಚಾರ ಬಿಜೆಪಿಯದು. ಆದರೆ ಇದಕ್ಕೆ ಸುಧಾ ಮೂರ್ತಿ ಒಪ್ಪಿಲ್ಲವಂತೆ. ಈಗ ಅವರ ಮನವೊಲಿಸುವ ಕೆಲಸದಲ್ಲಿ ಬಿಜೆಪಿಯ ಹಿರಿಯ ನಾಯಕರು ನಿರತರಾಗಿದ್ದಾರೆ.



ಹೇಗಾದರೂ ಸುದ್ದಿಯಲ್ಲಿರಬೇಕೆಂದು ಪರದಾಡುವ ಈಯಮ್ಮ ಕೊನೆಗೆ ಒಪ್ಪಿದರೆ ಆಶ್ಚರ್ಯವೇನೂ ಇಲ್ಲ.

ಇವರಲ್ಲದಿದ್ದರೆ ಉದ್ಯಮ, ಸಿನಿಮಾ, ಸಾಹಿತ್ಯ ಹೀಗೆ ಯಾವುದಾದರೂ ಕ್ಷೇತ್ರದಲ್ಲಿ ಒಂದಿಷ್ಟು ಹೆಸರು ಮಾಡಿದವರನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ಬಿಜೆಪಿ ಯೋಚಿಸುತ್ತಿದೆ. ಆದರೆ ಇದೆಲ್ಲ ಅಷ್ಟು ಬೇಗ ಆಗುವ ಕೆಲಸವೇನೂ ಅಲ್ಲ. ಹೀಗಾಗಿ ಬಿಜೆಪಿ ನ್ಯಾಯಾಲಯದ ಆದೇಶವನ್ನೇ ಉಲ್ಲಂಘಿಸಲು ಮುಂದಾಗಿದೆ. ಇತ್ತ ನಾಯಕತ್ವವೇ ಇಲ್ಲದ ಕಾಂಗ್ರೆಸ್‌ಗೂ ಇದೇ ಬೇಕಾಗಿದೆ.

■ ವರದಿಗಾರ

ಒಡೆಯರಮಠ : ನಿಲ್ಲದ ರಕ್ತಕಣ್ಣೀರು!

ನಕ್ಸಲ್ ನಿಗ್ರಹದ ಹೆಸರಿನಲ್ಲಿ ಪ್ರಭುತ್ವದ ಕ್ರೂರ ಪೊಲೀಸರು ಚಿಕ್ಕಮಗಳೂರು ಕಾಡಿನಲ್ಲಿರುವ ಒಡೆಯರಮಠ ಗ್ರಾಮದಲ್ಲಿ ಅಮಾಯಕರ ಹತ್ಯಾಕಾಂಡ ನಡೆಸಿ ಈಗ ಒಂದು ವರ್ಷ ಸಂದಿದೆ. ಪೊಲೀಸರು ಎಷ್ಟೊಂದು ಕ್ರೂರತೆಯಿಂದ ಆ ಹತ್ಯಾಕಾಂಡ ನಡೆಸಿದ್ದರೆಂದರೆ ಘಟನೆ ನಡೆದು ಒಂದು ವರ್ಷ ಕಳೆದರೂ ಭಯ ಆತಂಕಗಳು ಅಲ್ಲಿನ ಜನರ ಮುಖದಿಂದ ಇನ್ನೂ ಮರೆಯಾಗಿಲ್ಲ. ಇನ್ನೊಂದೆಡೆಗೆ ಹತ್ಯಾಕಾಂಡದಲ್ಲಿ ತನ್ನ ತಂದೆತಾಯಿಗಳನ್ನು ಕಳೆದುಕೊಂಡು ತಬ್ಬಲಿಗಳಾದ ಪ್ರಶಾಂತನ ಮತ್ತು ಆದರ್ಶನ ನೆರವಿಗೆ ಸರ್ಕಾರ ಇವತ್ತಿಗೂ ಬಂದಿಲ್ಲ.





ನಿಮಗೆ ನೆನಪಿರಬೇಕು, ಚಿಕ್ಕಮಗಳೂರು ಜಿಲ್ಲೆಯ ಅಮ್ಮಡ್ಲುವಿನ ಒಡೆಯರಮಠದಲ್ಲಿ ಆವತ್ತು ನಕ್ಸಲ್ ಗೌತಮ್ ಎಂಬುವವನು ರಾಮೇಗೌಡ್ಲು ಮತ್ತು ಕಾವೇರಮ್ಮ ಎಂಬ ದಂಪತಿಗಳ ಮನೆಯಲ್ಲಿ ಉಳಿದುಕೊಂಡಿದ್ದಾನೆ ಎಂಬ ಸುಳಿವು ಪಡೆದು ನಕ್ಸಲ್ ನಿಗ್ರಹ ಪೊಲೀಸ್ ಪಡೆ ದಾಳಿಯಿಟ್ಟಿತ್ತು, ಸುಮಾರು ಮೂವತ್ತು ಮಂದಿಯಿದ್ದ ಈ ಪೊಲೀಸ್ ತಂಡ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಗುಬ್ಬಚ್ಚಿಯ ಗೂಡಿನಂತಿದ್ದ ಆ ಪುಟ್ಟ ಮನೆಯ ಮೇಲೆ ಗುಂಡಿನ ಮಳೆಗರೆದು ಅಮಾಯಕ ದಂಪತಿಗಳಾದ ರಾಮೇಗೌಡ್ಲು, ಕಾವೇರಮ್ಮ ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟದ ಕಾರ್ಯದರ್ಶಿ ಪರಮೇಶ್ವರ್ ಅಡಿಕೆ ಮರಗಳಿಗೆ ಔಷಧಿ ಹೊಡೆಯಲು ಬಂದಿದ್ದ ಸುಂದರೇಶ್ ಹಾಗೂ ನಕ್ಸಲ್ ಯುವಕ ಗೌತಮ್‌ರನ್ನು ಹೊರಗೆಳೆದು ಚಿತ್ರಹಿಂಸೆ ಕೊಟ್ಟು ಪಾಯಿಂಟ್ ಬ್ಲಾಂಕ್ ರೇಂಜಿನಿಂದ ಗುಂಡಿಟ್ಟು ಕೊಂದಿದ್ದರು. ರಾಮೇಗೌಡ ಮತ್ತು ಕಾವೇರಮ್ಮರ ಪುತ್ರ ಪ್ರಶಾಂತ್ ಪೊಲೀಸರು ನಡೆಸಿದ ಈ ಬೀಭತ್ಸ ಕೃತ್ಯದಲ್ಲಿ ಕೂದಲೆಳೆಯಲ್ಲಿ ಪಾರಾಗಿದ್ದ.

ನಕ್ಸಲ್ ನಿಗ್ರಹದ ಹೆಸರಿನಲ್ಲಿ ಅಮಾಯಕರನ್ನು ಕೊಲ್ಲುತ್ತಿರುವ ಪೊಲೀಸರ ವಿರುದ್ಧ ಹಾಗೂ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿರುವ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಪ್ರಗತಿಪರರಿಂದ, ಶಾಂತಿಪ್ರಿಯರಿಂದ ಭಾರಿ ಪ್ರತಿಭಟನೆ ವ್ಯಕ್ತವಾಗಿತ್ತು, ತಕ್ಷಣವೇ ಎಚ್ಚೆತ್ತುಕೊಂಡ ಸರ್ಕಾರ ಆದಿವಾಸಿಗಳ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಲಾಗುವುದೆಂದೂ, ಸಾವಿಗೀಡಾದ ಗಿರಿಜನ ಕುಟುಂಬಕ್ಕೆ ಪರಿಹಾರ ನೀಡುವುದೆಂದೂ, ಘಟನೆಯಲ್ಲಿ ತಂದೆ-ತಾಯಿಗಳನ್ನು ಕಳೆದುಕೊಂಡು ತಬ್ಬಲಿಗಳಾದ ಪ್ರಶಾಂತ್ ಮತ್ತು ಆತನ ತಮ್ಮ ಆದರ್ಶರ ಸಂಪೂರ್ಣ ಜವಾಬ್ದಾರಿ ಹೊತ್ತುಕೊಳ್ಳುವುದಾಗಿಯೂ ಭರವಸೆ ನೀಡಿತ್ತು. ಪೇಜಾವರ ಸ್ವಾಮಿ ಗಿರಿಜನರ ಗುಡ್ಡಗಾಡು ಪ್ರದೇಶದಲ್ಲಿ ಪಾದಯಾತ್ರೆ ಮಾಡಿ ತಬ್ಬಲಿ ಮಕ್ಕಳಿಗೆ ಪರಿಹಾರ ನೀಡಿ ವಸತಿ ಮತ್ತು ವಿದ್ಯಾಭ್ಯಾಸದ ವೆಚ್ಚ ಭರಿಸುವುದಾಗಿ ಬೊಗಳೆ ಬಿಟ್ಟು ಹೋಗಿದ್ದರು.

ಇದೆಲ್ಲಾ ಆಗಿ ಈಗ ಒಂದು ವರ್ಷ ಆಗಿದೆ. ಇವೊತ್ತು ಹೋಗಿ ನೋಡಿ, ಆ ಎಲ್ಲ ಭರವಸೆಗಳು ಭರವಸೆಗಳಾಗಿಯೇ ಇವೆ. ಗಿರಿಜನರ ಸಮಸ್ಯೆಗಳನ್ನು ಬಗೆಹರಿಸುವುದಿರಲಿ, ಅವರನ್ನು ನೆಮ್ಮದಿಯಾಗಿ ತಮ್ಮ ಪಾಡಿಗೆ ಬದುಕಲೂ ಈ ಸರ್ಕಾರ, ಪೊಲೀಸರು ಬಿಡುತ್ತಿಲ್ಲ. ನಕ್ಸಲರಿಗೆ ಬೆಂಬಲ ಕೊಟ್ಟಿದ್ದೀರಿ ಎಂತಲೋ, ಅವರಿಗೆ ಆಶ್ರಯ ಕೊಟ್ಟಿದ್ದೀರಿ ಎಂತಲೋ ಒಂದಲ್ಲಾ ಒಂದು ನೆಪ ಹುಡುಕಿಕೊಂಡು ಪೊಲೀಸರು ಗಿರಿಜನರನ್ನು ಹಿಂಸಿಸುತ್ತಲೇ ಇದ್ದಾರೆ. ಮೊನ್ನೆ ತಾನೆ ಇದೇ ಊರಿನ ಕೃಷ್ಣ ಎಂಬುವವರ ಮನೆಗೆ ಮಧ್ಯ ರಾತ್ರಿ ನುಗ್ಗಿ ನಕ್ಸಲೀಯರ ಮಾಹಿತಿ ಕೊಡುವಂತೆ ಬೆದರಿಸಿ ಮನಬಂದಂತೆ ಹೊಡೆದಿದ್ದಾರೆ. ಕೊನೆಗೆ "ಕಳೆದ ವರ್ಷ ಪರಮೇಶ್ವರ್‌ನನ್ನು ಎನ್‌ಕೌಂಟರ್‌ನಲ್ಲಿ ಮುಗಿಸಿದಂತೆ ನಿನ್ನನ್ನೂ ಮುಗಿಸುತ್ತೇವೆ" ಎಂದು ಬೆದರಿಸಿ ಹೋಗಿದ್ದಾರೆ. ಇನ್ನು ಅವರ ಮೂಲಭೂತ ಸಮಸ್ಯೆಗಳು ಹೇಗಿದ್ದವೋ ಹಾಗೇ ಇವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವೆಂಬ ತೂಗುಕತ್ತಿ ಅವರ ನೆತ್ತಿಯ ಮೇಲೆ ನೇತಾಡುತ್ತಲೇ ಇದೆ. ತಲತಲಾಂತರಗಳಿಂದ ಪಶ್ಚಿಮ ಘಟ್ಟದ ತಪ್ಪಲಿನ ಭಾಗವಾಗಿ ಬಂದಿರುವ ತಮ್ಮನ್ನು ತಮ್ಮ ನೆಲದಿಂದ ಯಾವಾಗ ಒಕ್ಕಲೆಬ್ಬಿಸುತ್ತಾರೋ ಎಂಬ ಆತಂಕ ಅವರನ್ನು ಇಂದಿಗೂ ಕಾಡುತ್ತಿದೆ.

ಆ ತಬ್ಬಲಿ ಮಕ್ಕಳ ಪಾಡಂತೂ ಹೇಳುವ ಹಾಗಿಲ್ಲ, ಯಾವ ಆರ್ಥಿಕ ನೆರವೂ ಇಲ್ಲದೆ ಪ್ರಶಾಂತ ಮೊರಾರ್ಜಿ ವಸತಿ ಶಾಲೆಯಲ್ಲಿ ಓದಿಕೊಂಡಿದ್ದರೆ ಆದರ್ಶ ಸಂಬಂಧಿಕರ ಮನೆಯಲ್ಲಿದ್ದಾನೆ. ಅವರ ವಿದ್ಯಾಭ್ಯಾಸದ ವೆಚ್ಚವನ್ನು ಭರಿಸುತ್ತೇವೆಂದು ಹೇಳಿದ್ದ ಸರ್ಕಾರ ಪೊಲೀಸರು ಅದನ್ನು ಮಾಡುವುದರ ಬದಲಿಗೆ 5 ಸಾವಿರ ಕೊಟ್ಟು ಒಂದು ಮೊಬೈಲ್ ಕೊಡಿಸಿ ನಕ್ಸಲೀಯರ ಬಗ್ಗೆ ಮಾಹಿತಿ ಕೊಡು ಎಂದು ಆ ಹುಡುಗರನ್ನು ಇನ್‌ಫಾರ್ಮರ್‌ಗಳನ್ನಾಗಿ ಮಾಡಿಕೊಂಡಿದ್ದಾರೆ. ಇನ್ನು ಜೀವನಾಧಾರವಾಗಿದ್ದ ಪರಮೇಶ್ವರ್‌ನನ್ನು ಕಳೆದುಕೊಂಡ ಅವನ ಕುಟುಂಬವೂ ತಬ್ಬಲಿಯಾಗಿದೆ.

ಇನ್ನೊಂದೆಡೆ ನೋಡಿ. ನಕ್ಸಲೀಯರಿಂದ ಹತ್ಯೆಗೊಳಗಾದ ವೆಂಕಟೇಶ್‌ನ ಮಗನನ್ನು ಸರ್ಕಾರವೇ ಮುಂದೆ ಸಾಕಿ ಬೆಳೆಸುತ್ತಿದೆ; ಆತನ ವಿದ್ಯಾಭ್ಯಾಸ ಮತ್ತು ವಸತಿಯ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡಿದೆ. ಆದರೆ ಪೊಲೀಸರು ನಡೆಸಿದ ಒಡೆಯರಮಠ ಹತ್ಯಾಕಾಂಡದಲ್ಲಿ ಬಲಿಯಾದ ಅಮಾಯಕ ಕಾವೇರಮ್ಮ ಮತ್ತು ರಾಮೇಗೌಡ್ಲು ಎಂಬ ಗಿರಿಜನ ದಂಪತಿಗಳ ಮಕ್ಕಳನ್ನು ಅಕ್ಷರಶಃ ತಬ್ಬಲಿಯಾಗಿ ಬಿಟ್ಟಿದೆ. ನಕ್ಸಲರಿಂದ ಹತನಾದ ಶೇಷೇಗೌಡನ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ. ಆದರೆ ಪೊಲೀಸರಿಂದ ಹತರಾದ ಪರಮೇಶ್ವರ್ ಕುಟುಂಬಕ್ಕೆ ಯಾವ ಪರಿಹಾರವನ್ನೂ ನೀಡಿಲ್ಲ, ಪರಿಹಾರದ ಮಾತು ಒತ್ತಟ್ಟಿಗಿರಲಿ, ಘಟನೆಯ ನಂತರ ಅವರನ್ನು ನೆಮ್ಮದಿಯಾಗಿ ಇರಲೂ ಬಿಟ್ಟಿಲ್ಲ.





ಈ ಹಿಂದೆ ಗಿರಿಜನರು, ತಮಗೆ ಭೂಮಿಯ ಪಟ್ಟಕೊಡಿ, ಮೂಲಭೂತ ಸೌಲಭ್ಯ ಕೊಡಿ ಎಂದು ಕೇಳುತ್ತಿದ್ದರು. ಆದರೆ ಈಗ, ನಮ್ಮನ್ನು ನಮ್ಮ ಪಾಡಿಗೆ ಬದುಕಲು ಬಿಡಿ ಎಂಬ ಏಕೈಕ ಬೇಡಿಕೆಯನ್ನಿಡುತ್ತಿದ್ದಾರೆ ಎಂದರೆ ಅವರ ಶೋಚನೀಯ ಪರಿಸ್ಥಿತಿ ಅರ್ಥವಾಗುತ್ತದೆ.

ರಾಮೇಗೌಡ-ಕಾವೇರಮ್ಮ ಸುಖವಾಗಿ ಬಾಳಲು ಕಟ್ಟಿಕೊಂಡಿದ್ದ ಮನೆ ಈಗ ಕುಸಿದು ಬಿದ್ದಿದೆ. ಅವರ ಜಮೀನು ಪಾಳು ಬಿದ್ದಿದೆ. ಮಕ್ಕಳು ಅನಾಥರಾಗಿದ್ದಾರೆ. ಬೆಳೆದ ಮಕ್ಕಳನ್ನು ಕಳೆದುಕೊಂಡ ಪರಮೇಶ ಮತ್ತು ಸುಂದರೇಶನ ವೃದ್ಧ ತಂದೆ ತಾಯಿಗಳು ದಿನವೂ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ

ಒಡೆಯರಮಠ ಹತ್ಯಾಕಾಂಡ ನಡೆದು ಒಂದು ವರ್ಷ ಪೂರ್ಣಗೊಂಡ ಈ ಸಂದರ್ಭದಲ್ಲಿ ಮಲೆನಾಡಿನಲ್ಲಿ ಆದಿವಾಸಿಗಳ ಮೇಲೆ ಪೊಲೀಸರು ನಡೆಸುತ್ತಿರುವ ದೌರ್ಜನ್ಯವನ್ನು, ಆದಿವಾಸಿಗಳು ಎದುರಿಸುತ್ತಿರುವ ಭೀಕರ ಸಮಸ್ಯೆಗಳನ್ನು ಮತ್ತೆ ನಾಗರಿಕ ಪ್ರಪಂಚಕ್ಕೆ ತೋರಿಸುವುದಕ್ಕಾಗಿ "ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟ'ವು ಒಂದು ಪುಟ್ಟ ಸಮಾರಂಭ ಏರ್ಪಡಿಸಿತ್ತು. ಒಡೆಯರಮಠ ಹತ್ಯಾಕಾಂಡದಲ್ಲಿ ಕೊಲೆಗೀಡಾದವರ ಕುಟುಂಬಗಳಿಗೆ ತಲಾ ಹತ್ತು ಲಕ್ಷ ರೂ.ಗಳನ್ನು ಪರಿಹಾರವಾಗಿ ಕೊಡಬೇಕೆಂದು, ಘಟನೆಯಲ್ಲಿ ಮಕ್ಕಳನ್ನು ಕಳೆದುಕೊಂಡಿರುವ ಇಳಿವಯಸ್ಸಿನ ತಂದೆ-ತಾಯಿಗಳಿಗೆ ಭತ್ಯೆ ನೀಡಬೇಕೆಂದು, ಎಲ್ಲೆ ಮೀರುತ್ತಿರುವ ಪೊಲೀಸ್ ದೌರ್ಜನ್ಯಕ್ಕೆ ಕೊನೆ ಹಾಡಬೇಕೆಂದು ಹಾಗೂ ಇದೀ ಎನ್‌ಕೌಂಟರ್ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಅದು ಸರ್ಕಾರವನ್ನು ಒತ್ತಾಯಿಸಿದೆ. ಎಲ್ಲಿಯತನಕ ಆದಿವಾಸಿ ಗಿರಿಜನರ ನ್ಯಾಯಸಮ್ಮತ ಬೇಡಿಕೆಗಳು ಈಡೇರುವುದಿಲ್ಲವೋ, ಎಲ್ಲಿಯತನಕ ಪೊಲೀಸರ ದೌರ್ಜನ್ಯ ನಿಲ್ಲುವುದಿಲ್ಲವೋ ಅಲ್ಲಿಯತನಕ ತನ್ನ ಹೋರಾಟವನ್ನು ಮುಂದುವರೆಸುವುದಾಗಿ ಒಕ್ಕೂಟ ಘೋಷಿಸಿದೆ.

ಆದರೆ ಸರ್ಕಾರ ಮಾತ್ರ ತನ್ನ ಜಾಣ ಕಿವುಡುತನ ಪ್ರದರ್ಶಿಸುವುದನ್ನು ಮುಂದುವರೆಸಿದೆ. ಪೊಲೀಸರಿಗೆ ಗ್ರೀನ್ ಸಿಗ್ನಲ್ ಕೊಟ್ಟು ಆದಿವಾಸಿಗಳ ವಿರುದ್ಧ ಅವರನ್ನು ಛೂ ಬಿಟ್ಟಿದೆ. ಪೊಲೀಸರ ದೌರ್ಜನ್ಯದಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಜನ ಸಂಘಟಿತರಾಗುತ್ತಿದ್ದಾರೆ. ಒಂದರ್ಥದಲ್ಲಿ ಸರ್ಕಾರ ಮತ್ತು ಪೊಲೀಸರೇ ನಕ್ಸಲರನ್ನು ಸೃಷ್ಟಿಸುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ಮಲೆನಾಡಿನಲ್ಲಿ ಪೊಲೀಸರು ನಡೆದುಕೊಳ್ಳುತ್ತಿರುವ ಪರಿಯನ್ನು ನೋಡಿದರೆ ಇನ್ನೆಷ್ಟು ಒಡೆಯರಮಠಗಳು ಸೃಷ್ಟಿಯಾಗಲಿವೆಯೋ ಎಂದು ಆತಂಕವಾಗದಿರದು.

- ಅಜೀಜ್ ಕಿರಗುಂದ

ಹುಬ್ಬಳ್ಳಿ: ಬಡ್ಡಿ ಕಟ್ಟದ್ದಕ್ಕೆ ಆಟೋವನ್ನೇ ಎತ್ತಾಕಿಕೊಂಡ!

ಇದು ಹುಬ್ಬಳ್ಳಿಯ ಸೆಟ್ಲಮೆಂಟಿನ ಖದರು. ಇಲ್ಲಿನ ಮೀಟರ್ ಬಡ್ಡಿ ಮಾತ್ರ ಎಗ್ಗಿಲ್ಲದೇ ಸಾಗಿದೆ. ಈಗ ಎತ್ತಂಗಡಿಯ ಅಂಚಿನಲ್ಲಿರುವ ಪೊಲೀಸ್ ಕಮೀಷನರ್ ನಾರಾಯಣ ನಡುಮನಿ ಪ್ರಾರಂಭದಲ್ಲಿ ಈ ಮೀಟರ್ ಬಡ್ಡಿ ಕುಳಗಳಿಗೆ ಚೆನ್ನಾಗಿ ಗುದ್ದಿ ಸುದ್ದಿ ಮಾಡಿದ್ದರು. ಆದರೆ ಏನು ಮಾಡೋದು, ಇಲ್ಲಿನ ಕುಳಗಳು ಅದೆಷ್ಟು ಪ್ರಭಾವಶಾಲಿ ಎಂದರೆ ಪೊಲೀಸ್ ಇಲಾಖೆಯನ್ನೇ ತಮ್ಮ ಜೇಬಿನಲ್ಲಿಟ್ಟುಕೊಂಡಿದ್ದಾರೆ.

ನಗರದ ಬೆಂಡಿಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಸೆಟ್ಲಮೆಂಟಿನ ಬಡ್ಡಿ ಕುಳಗಳಿಗೆ ಪೊಲೀಸರೇ ಆಶ್ರಯದಾತರಾಗಿದ್ದಾರೆ. ನೀವು ರಾತ್ರಿ ಎರಡು ಗಂಟೆಗೆ ಹೋದರೂ ಯಾವುದೇ ಅಧಿಕೃತ ದಾಖಲಾತಿಯಿಲ್ಲದಿದ್ದರೂ ಎರಡು ಲಕ್ಷ ಸಾಲವನ್ನು ನಿಮಗೆ ಕೊಡುತ್ತಾರೆ. ಅದನ್ನು ವಸೂಲಿ ಮಾಡುವ ಕಲೆಯೂ ಅವರಿಗೆ ಚೆನ್ನಾಗಿ ಗೊತ್ತಿದೆ. ಇದೊಂಥರಾ ಮಿನಿ ಮಣಿಪಾಲ್ ಫೈನಾನ್ಸ್ ಕಾರ್ಪೋರೇಶನ್ ಇದ್ದಂತೆ. ಯಾವನಾದರೂ ಇವರ ವಿರುದ್ಧ ತಿರುಗಿಬಿದ್ದರೆ ಅವನ ಕತೆ ಮುಗೀತೆಂದೇ ಹೇಳಬೇಕು. ಪೊಲೀಸ್ ಸ್ಟೇಶನ್ ಮೆಟ್ಟಿಲು ಹತ್ತಿದರಂತೂ ಅವನ ಪಾಡು ಹೇಳತೀರದು.

ಮೊನ್ನೆಯ ಒಂದು ಘಟನೆಯನ್ನೇ ನೋಡಿ. ಕ್ರಿಶ್ಚಿಯನ್ ಕಾಲೋನಿಯ ಅಮೃತ ಆನಂದ ಜಮಖಂಡಿ ಎಂಬ ಯುವಕ ಸೆಟ್ಲಮೆಂಟಿನ ಬಡ್ಡಿ ಕುಳ ಮೋಹನ್ ರಾಮಣ್ಣ ದೊಡಮನಿಯಿಂದ ತಿಂಗಳಿಗೆ ಶೇ.10 ಬಡ್ಡಿ ದರದಲ್ಲಿ ಐದು ವರ್ಷಗಳ ಹಿಂದೆ 20 ಸಾವಿರ ಸಾಲ ತೆಗೆದುಕೊಂಡಿದ್ದರು. ಈತನಕ ಅದಕ್ಕೆ ಕಟ್ಟಿದ ಬಡ್ಡಿಯೇ 1 ಲಕ್ಷದ 20 ಸಾವಿರ ಆಗಿದೆ. ಆದರೆ 20 ಸಾವಿರ ಸಾಲ ಮಾತ್ರ ಇನ್ನೂ ತೀರಿಲ್ಲ, ಈ ತಿಂಗಳು ಬಡ್ಡಿ ಕಟ್ಟುವುದು ಸ್ವಲ್ಪ ತಡವಾಗಿದ್ದಕ್ಕೆ ಬಡ್ಡಿ ಕುಳ ಮೋಹನ್ ಅಮೃತ ಆನಂದ ಜಮಖಂಡಿಯ ಆಟೋವನ್ನೇ (ಕೆ.ಎ.25/ಬಿ5447) ಎತ್ತಾಕಿಕೊಂಡು ಹೋಗಿದ್ದಾನೆ!


ಇದರಿಂದ ಬೇಸತ್ತ ಅಮೃತ ಆನಂದ ಜಮಖಂಡಿ ನ್ಯಾಯ ಸಿಗಬಹುದೆಂಬ ಭರವಸೆಯಿಂದ ಬೆಂಡಿಗೇರಿ ಪೊಲೀಸ್ ಠಾಣೆಗೆ ಹೋಗಿ ಇನ್ಸ್‌ಪೆಕ್ಟರ್ ಮಾಳಗೇರನನ್ನು ಕಂಡಿದ್ದಾನೆ. ಮೊದಲೇ ಸೆಟ್ಲಮೆಂಟಿನ ಎಂಜಲು ತಿಂದು ಬದುಕುತ್ತಿರುವ ಮಾಳಗೇರ ಜಮಖಂಡಿಯ ಪರವಾಗಿ ನಿಲ್ಲುತ್ತಾನೆಯೆ? ಸೆಟ್ಲಮೆಂಟಿನ ಜನರೊಂದಿಗೆ ಕಿರಿಕ್ ಮಾಡಿಕೊಳ್ಳಬೇಡ, ಅವರ ಬಡ್ಡಿ ದುಡ್ಡನ್ನು ಸರಿಯಾಗಿ ಕಟ್ಟು ಎಂದು ಜಮಖಂಡಿಗೆ ಉಪದೇಶ ಮಾಡಿ ಕಳಿಸಿದ್ದಾನೆ.

ನ್ಯಾಯ ಸಿಗದಿದ್ದಾಗ ಜಮಖಂಡಿ ಸೀದಾ ಪೊಲೀಸ್ ಕಮೀಷನರ್ ನಾರಾಯಣ ನಡುಮನಿಯ ಬಳಿ ಹೋಗಿದ್ದಾನೆ. ನಡುಮನಿ ಸಾಹೇಬ್ರು ಮೋಹನ ದೊಡಮನಿಯನ್ನು ಕರೆಸಿ ಸಮಾಧಾನ ಮಾಡಿದ ನಾಟಕವಾಡಿದ್ದಾರೆಯೇ ಹೊರತು ಮೋಹನನನ್ನು ಬಂಧಿಸುವ ಗಡುಸನ್ನು ತೋರಿಲ್ಲ.

ತನ್ನ ವಿರುದ್ಧ ಪೊಲೀಸ್ ಠಾಣೆಯ ಮೆಟ್ಟಲೇರಿದ್ದಕ್ಕೆ ಸೇಡು ತೀರಿಸಿಕೊಳ್ಳುವ ಹುರುಪಿನಲ್ಲಿ ಮೋಹನ್ ದೊಡಮನಿಯಿದ್ದರೆ ಅದರಿಂದ ಹೇಗೆ ತಪ್ಪಿಸಿಕೊಳ್ಳಬೇಕೆಂಬ ಆತಂಕದಲ್ಲಿ ಜಮಖಂಡಿಯಿದ್ದಾನೆ. ಅದಕ್ಕಾಗಿಯೇ ತನ್ನ ಮನೆಗೂ ಹೋಗದೆ ಅಲ್ಲಿ ಇಲ್ಲಿ ರಾತ್ರಿಗಳನ್ನು ಕಳೆಯಬೇಕಾದ ಹೀನ ಸ್ಥಿತಿ ಆತನಿಗೆ ಬಂದೊದಗಿದೆ.

ಹರಿಹರ: ಚೆಡ್ಡಿಗಳ ಆಟ ಪ್ರಾರಂಭ

ಬಿಜೆಪಿಗಳ ಚೆಡ್ಡಿ ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭದಲ್ಲೇ ಅವರು ತಮ್ಮ ಫ್ಯಾಸಿಸ್ಟ್ ಅಜೆಂಡಾವನ್ನು ಹೇಗೆ ಜಾರಿ ಮಾಡಲು ಹವಣಿಸುತ್ತಿದ್ದಾರೆ ಎಂಬುದಕ್ಕೆ ಹರಿಹರದ ಎಪಿಎಂಸಿ ಮಾರುಕಟ್ಟೆಯೇ ಉತ್ತಮ ಉದಾಹರಣೆಯಾಗಿದೆ.



ದಿನಬೆಳಗಾದರೆ ಸಾವಿರಾರು ಜನ ಸಾಮಾನ್ಯರು, ರೈತರು ತಮ್ಮ ವ್ಯಾಪಾರ ವಹಿವಾಟು ನಡೆಸುವ ಎಪಿಎಂಸಿ ಮಾರುಕಟ್ಟೆಯ ಪ್ರಾಂಗಣದಲ್ಲಿ ಇದೇ ಇಪ್ಪತ್ತನೇ ತಾರೀಖು ಗಣೇಶನ ದೇವಸ್ಥಾನ ನಿರ್ಮಿಸಲು ಶಂಕುಸ್ಥಾಪನೆಗೆ ಹರಿಹರದ ಚೆಡ್ಡಿಗಳು ಮುಂದಾಗಿದ್ದಾರೆ.

1973ರಲ್ಲಿ ಜಾರಿಗೆ ಬಂದ ಕಾನೂನಿನನ್ವಯ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾರ್ಥನಾ ಮಂದಿರಗಳನ್ನು ನಿರ್ಮಿಸಬಾರದು ಎಂಬುದು ನಿಯಮ. ಆದರೆ ಆ ಕಾನೂನನ್ನು ಸರ್ಕಾರದ ಭಾಗವೇ ಆಗಿರುವ ಎಪಿಎಂಸಿ ಮತ್ತದರ ಮೆಂಬರುಗಳೇ ಮುರಿಯಲು ಮುಂದಾದರೆ ಏನನ್ನಬೇಕು? ಅಲ್ಲದೆ ಕೃಷಿ ಸಚಿವ ರವೀಂದ್ರನಾಥನೇ ಖುದ್ದಾಗಿ ಇದರಲ್ಲಿ ಭಾಗವಹಿಸಲು ಒಪ್ಪಿರುವುದು ಎಂಥಾ ದುರಂತ!

ಕಾನೂನಿನಡಿಯಲ್ಲಿ ನೇಮಕಗೊಂಡಿರುವ ಎಪಿಎಂಸಿಯ ಕಾರ್ಯದರ್ಶಿ ಕೆ. ಚಂದ್ರಪ್ಪ ಎಂಬಾತ ಈ ಘನ ಕಾರ್ಯಕ್ಕೆ ಮುಂದಾಳತ್ವವನ್ನು ವಹಿಸಿದ್ದಾನೆ. ತಾನು ಬಿಜೆಪಿ ಶಾಸಕ ಬಿ.ಪಿ. ಹರೀಶನ ಸಂಬಂಧಿ ಎಂದು ಹೇಳುತ್ತಾ ತಿರುಗಾಡುವ ಈ ಚಂದ್ರಪ್ಪನಿಗೆ ದೇವಸ್ಥಾನ ನಿರ್ಮಿಸುವ ಐಡಿಯಾವನ್ನು ಅದ್ಯಾವ ಪುಣ್ಯಾತ್ಮ ಕೊಟ್ಟನೋ ಗೊತ್ತಿಲ್ಲ. ಈತನ ದೈವಭಕ್ತಿ ಇಷ್ಟಕ್ಕೇ ನಿಂತಿಲ್ಲ, ಎಲ್. ಬಸಪ್ಪ ಎಂಬ ಎಲೆಕ್ಟೆಡ್ ಸದಸ್ಯನನ್ನು ಬಿಟ್ಟು ಸರ್ಕಾರಿ ವಾಹನದಲ್ಲೇ ದೇವಸ್ಥಾನ ನಿರ್ಮಾಣಕ್ಕೆಂದು ಫಂಡೆತ್ತುವ ಕೆಲಸವನ್ನೂ ಮಾಡಿಸುತ್ತಿದ್ದಾನೆ. 83 ಎಕರೆ ವ್ಯಾಪ್ತಿಯಲ್ಲಿ ಗೋದಾಮುಗಳು, ಕಟ್ಟಡಗಳು ನಿರ್ಮಾಣವಾಗಿರುವ ಈ ಎಪಿಎಂಸಿ ಮಾರುಕಟ್ಟೆ ಅಸಲಿಗೆ ಇನ್ನೂ ಉದ್ಘಾಟನೆಯೇ ಆಗಿಲ್ಲ, ಅಷ್ಟೊತ್ತಿಗೆ ದೇವಸ್ಥಾನ ಮಣ್ಣು ಮಸಿ ಎಂಬ ಅಸಂಬದ್ಧ ಕೆಲಸಗಳು ಆರಂಭವಾಗುತ್ತಿವೆ.

ಇವತ್ತು ಈ ಮತಿಗೇಡಿಗಳು ಗಣೇಶನ ದೇವಸ್ಥಾನ ನಿರ್ಮಿಸಲು ಮುಂದಾದರೆ ಮುಂದೊಮ್ಮೆ ಮುಸ್ಲಿಮರು ಬಂದು ಮಸೀದಿ ನಿರ್ಮಿಸಿ ನಮಾಜ್ ನಡೆಸುತ್ತೇವೆ ಎನ್ನುತ್ತಾರೆ, ಕ್ರಿಶ್ಚಿಯನ್ನರು ಚರ್ಚು ಕಟ್ಟುವ ಯೋಜನೆ ಹಾಕಿಕೊಳ್ಳುತ್ತಾರೆ.... ಒಟ್ಟಿನಲ್ಲಿ ಎಪಿಎಂಪಿ ಎಂಬ ವ್ಯಾಪಾರ ಕೇಂದ್ರ ಕೋಮುಗಲಾಟೆಯ ಕೇಂದ್ರಸ್ಥಾನವಾಗುತ್ತದೆ. ಜಾತಿ, ಧರ್ಮದಂತಹ ಭೇದಭಾವಗಳಿಲ್ಲದೆ ವಹಿವಾಟು ನಡೆಯಬೇಕಾದ ಸ್ಥಳದಲ್ಲಿ ರಕ್ತ ಹರಿಯುತ್ತದೆ, ಹೆಣಗಳು ಉರುಳುತ್ತವೆ. ಹರಿಹರದ ಎಪಿಎಂಸಿಯ ಮತಿಗೆಟ್ಟ ಸದಸ್ಯರಿಗಾಗಲಿ, ಅಧಿಕಾರಿಗಳಿಗಾಗಲಿ ಇವೆಲ್ಲಾ ಯಾಕೆ ತಿಳಿಯುತ್ತಿಲ್ಲ?

ಕೃಷಿ ಸಚಿವ ರವೀಂದ್ರನಾಥನ ಮಾರ್ಗದರ್ಶನದಲ್ಲಿ ಆರಂಭಗೊಳ್ಳುತ್ತಿರುವ ಈ ದೇವಸ್ಥಾನ ನಿರ್ಮಾಣ ಕಾರ್ಯ ನಿಲ್ಲಲೇಬೇಕಿದೆ. ಅದರತ್ತ ಪೊಲೀಸರು ಗಮನ ಹರಿಸುವರೋ ಅಥವಾ ಈ ಕಳ್ಳರಿಗೆ ರಕ್ಷಣೆ ಕೊಡುವರೋ?


■ ಅರುಣ್ ಕುಮಾರ್. ಜಿ

ಯಡ್ಡಿ ವಿರೋಧಿ ಬಣ ಸೇರಿದ ಸದಾನಂದ ಗೌಡ!

ಬಿಜೆಪಿ ಈಗ ಒಡೆದ ಹಡಗಾಗಿದೆ. ಅದು ಮುಳುಗುವ ದಿನ ದೂರವಿದ್ದಂತೆ ಕಾಣುತ್ತಿಲ್ಲ, ಒಂದೆಡೆ, ಬೇರೆ ಪಕ್ಷದ ಶಾಸಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸಿದ ಗಣಿಧಣಿಗಳು ಇದೀ ಪಕ್ಷವನ್ನು 'ಸ್ವಾಹಾ' ಮಾಡಲು ಹೊರಟಿದ್ದರೆ, ಇನ್ನೊಂದೆಡೆ ಮುಖ್ಯಮಂತ್ರಿ ಯಡಿಯೂರಪ್ಪ ದಿ ಗ್ರೇಟ್ ಡಿಕ್ಟೇಟರ್‌ನಂತೆ ವರ್ತಿಸುತ್ತಾ ತನ್ನ ವಿರೋಧಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ.

ಪ್ರತಿ ಹಂತದಲ್ಲೂ ತಮ್ಮ ವಿರೋಧಿ ಬಣವನ್ನು ಗಟ್ಟಿಗೊಳಿಸುವುದೇ 'ಚಾಣಕ್ಯ' ತಂತ್ರ ಎಂದು ಯಡ್ಡಿ ನಂಬಿರುವಂತಿದೆ. ಈಗ ಅವರ ವಿರೋಧಿ ಪಾಳೆಯಕ್ಕೆ ಹೊಸ ಸದಸ್ಯರಾಗಿ ಸೇರ್ಪಡೆಯಾಗಿರುವವರು ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದ ಗೌಡ!

ಮೊನ್ನೆ ಮೊನ್ನೆ ತನಕ ಯಡ್ಡಿ ಹೇಳಿದ್ದಕ್ಕೆಲ್ಲಾ ತಲೆಯಾಡಿಸಿಕೊಂಡು, ಅಸಂಬದ್ಧವಾಗಿ ಮಾತನಾಡುತ್ತಿದ್ದ ಈ ಹಲ್ಲುಮುಖಿ ಗೌಡ ಯಕ್ಷಗಾನದ ಹಾಸ್ಯಕಲಾವಿದನಂತೆ ವರ್ತಿಸುತ್ತಿದ್ದರು. ಆದರೆ ಈಗ ತಮ್ಮ ಒಂದೇ ಒಂದು ಮಾತನ್ನೂ ಯಡ್ಡಿ ಕೇಳಿಲ್ಲ ಎಂದು ಬೇಸರಗೊಂಡಿದ್ದಾರೆ. ಸ್ಟೇಜಿನ ಮೇಲೆ ಸಹ ಕಲಾವಿದನೊಬ್ಬ ಹೇಳಿದ ಡೈಲಾಗಿಗೆ ಬೆಚ್ಚಿಬಿದ್ದು ಅಳುಬಂದರೂ ಅಳಲಾಗದ ಹಾಸ್ಯಕಲಾವಿದನಂತೆ ಹಲ್ಲುಮುಖಿ ಗೌಡರು ಮೈಪರಚಿಕೊಳ್ಳುತ್ತಿದ್ದಾರೆ.




ಕೇಳಿದ್ದು ಒಂದೇ ಸಚಿವ ಸ್ಥಾನ!


ರಾಜ್ಯದಲ್ಲಿ ಬಿಜೆಪಿ ಗೆಲ್ಲುವುದರಲ್ಲಿ ಪಕ್ಷದ ಅಧ್ಯಕ್ಷ ಸದಾನಂದಗೌಡರ ಪಾತ್ರವೂ ಇದೆ. ಏನಿಲ್ಲವೆಂದರೂ ರಾಜ್ಯದಾದ್ಯಂತ ಓಡಾಡಿ, ಎಲ್ಲರಿಗೂ ಹಣ ಸರಿಯಾಗಿ ವಿತರಣೆಯಾಗಿದೆಯೇ ಎಂದು ಈ ಗೌಡರು ನೋಡಿಕೊಂಡಿದ್ದರು.

ಆಗಲೂ ತಾವು ಸಚಿವ ಆಕಾಂಕ್ಷಿ ಎನಿಸಿಕೊಂಡರೆ ಎಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕುತ್ತು ಬರುತ್ತದೆಯೋ ಎಂದು ಹೆದರಿದ ಗೌಡರು, ಈ ಕಿರಿಕಿರಿಯೇ ಬೇಡ ಎಂದು, 'ನಾನು ಸಚಿವನಾಗುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿ ತಮ್ಮ 'ಬುದ್ಧಿವಂತಿಕೆ'ಯನ್ನು ತೋರಿದ್ದರು. ಆದರೆ ತಾನು ಹೇಳಿದವರೊಬ್ಬರಿಗೆ ಸಚಿವ ಸ್ಥಾನ ನೀಡಬೇಕೆಂದು ಯಡ್ಡಿಯ ಕಿವಿ ಕಚ್ಚುತ್ತಲೇ ಬಂದಿದ್ದರು, ತಮ್ಮ ಮಾತಿಗೆ ಅಷ್ಟಾದರೂ ಬೆಲೆ ನೀಡುವಂತೆ ಗೌಡರ ಕೋರಿದ್ದರು.

ಅಂತೂಇಂತೂ ಬಿಜೆಪಿ ಅಧಿಕಾರ ಹಿಡಿದು, ಎರಡು ಬಾರಿ ಸಚಿವ ಸಂಪುಟವನ್ನು ವಿಸ್ತರಿಸಲಾಯಿತು. ಆದರೆ ಎರಡು ಬಾರಿಯೂ ರಗಳೆಗಳಾಗಿದ್ದರಿಂದ, ಕೊನೆಯ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ತಮ್ಮ ಮಾತಿಗೆ ಬೆಲೆ ಸಿಗಬಹುದೆಂದು ಗೌಡರು ನಂಬಿದ್ದರು. ಆದರೆ ಯಡವಟ್ಟಾಗಿದ್ದು ಅಲ್ಲೇ, ಮೊನ್ನೆ ಸಚಿವ ಸಂಪುಟ ವಿಸ್ತರಿಸುವಾಗ ಗಣಿಧಣಿ ರೆಡ್ಡಿ ಟೀಂ ತಾವು ಪಕ್ಷಕ್ಕೆ ಕರೆತಂದವರಿಗೇ ಸಚಿವ ಸ್ಥಾನ ನೀಡಬೇಕೆಂದು ಪಟ್ಟು ಹಿಡಿದಿದ್ದರಿಂದ, ಅವರ ಹಂಗಿನಲ್ಲಿ ಸಿಕ್ಕಿರುವ ಯಡ್ಡಿ ತಲೆಯಾಡಿಸಿದರು. ತಮ್ಮನ್ನು ನಂಬಿದ್ದ ಗೌಡರಿಗೆ ದ್ರೋಹ ಬಗೆದರು.







ಪುತ್ತೂರಿನಲ್ಲಿ ತಮ್ಮ ಮಾನ ಉಳಿಸಿದ್ದ ಮಲ್ಲಿಕಾ ಪ್ರಸಾದ್‌ಗೋ ಅಥವಾ ಚಿಕ್ಕಮಗಳೂರಿನ ಹುಂಬ ಸಿ.ಟಿ. ರವಿಗೋ (ಒಕ್ಕಲಿಗರೆಂಬ ಕಾರಣಕ್ಕೆ) ಸಚಿವರನ್ನಾಗಿ ಮಾಡುವ ಉದ್ದೇಶ ಗೌಡರಿಗಿತ್ತು, ಆದರೆ ಗೌಡರ ಭಾವನೆಗೆ ಯಡ್ಡಿ ಮೂರು ಕಾಸಿನ ಬೆಲೆಯನ್ನೂ ನೀಡಲಿಲ್ಲ, ಹೀಗಾಗಿ ಗೌಡರು ಮೂವರು ನೂತನ ಸಚಿವರು ಪ್ರಮಾಣವಚನ ಸ್ವೀಕರಿಸುವಾಗ ಬೆಂಗಳೂರಿನಲ್ಲಿಯೇ ಇದ್ದರೂ, ಪಕ್ಷದ ಅಧ್ಯಕ್ಷರಾದರೂ ರಾಜಭವನಕ್ಕೆ ಹೋಗಿರಲಿಲ್ಲ.

ಖಾತೆ ಹಂಚುವಾಗಲೂ ಯಡ್ಡಿ ತಮ್ಮ ಮಾತು ಕೇಳಲಿಲ್ಲ ಎಂದು ಕೊರಗುತ್ತಿದ್ದ ಸದಾನಂದ ಗೌಡರಿಗೆ ಈಗ ಆಘಾತವಾಗಿದೆ. ಯಡ್ಡಿಯನ್ನು ಈಗಲೇ ನಿಯಂತ್ರಿಸದಿದ್ದಲ್ಲಿ, ಗುಜರಾತ್‌ನ ಮೋದಿಯಂತೆ 'ಪಕ್ಷ ಎಂದರೆ ನಾನೇ' ಎಂಬಂತೆ ಬೆಳೆದು ಮುಂದೆ ತಮ್ಮನ್ನೆಲ್ಲಾ ನುಂಗಿ ನೀರು ಕುಡಿಯುತ್ತಾರೆ ಎಂದು ತಮ್ಮ ಆಪ್ತರಲ್ಲಿ ಹಲ್ಲುಮುಖಿ ಗೌಡರು ಗೊಣಗುತ್ತಿದ್ದಾರಂತೆ.

ತ್ರಿಶಂಕುಸ್ಥಿತಿಯಲ್ಲಿ ಭಿನ್ನಮತೀಯರು!

ಬಿಜೆಪಿಯಲ್ಲಿ ಭಿನ್ನಮತೀಯರ ಸಂಖ್ಯೆ ಹೆಚ್ಚುತ್ತಲೇ ಇದೆ. ಆದರೆ ಎಲ್ಲರದೂ ಈಗ ತ್ರಿಶಂಕು ಸ್ಥಿತಿ. ತಮಗೆ ಮುಕ್ತಿ ದೊರಕಿಸುವ 'ನಾಯಕ'ನಿಗಾಗಿ ಕಾಯುತ್ತಿದ್ದಾರೆ. ನಾಳೆ ಅವರ ಪಾಳೆಯಕ್ಕೆ ನಾಯಕನೊಬ್ಬ ಬಂದರೂ 'ದಾರಿ ಯಾವುದಯ್ಯಾ ವೈಕುಂಠಕ್ಕೆ...' ಎಂದು ಹಾಡುವಂತಾಗಿದೆ ಅವರೆಲ್ಲರ ಪರಿಸ್ಥಿತಿ. ಏಕೆಂದರೆ ಯಾರು ಎಷ್ಟೇ ಅಸಮಾಧಾನಗೊಂಡರೂ ಪಕ್ಷದ ಹೈಕಮಾಂಡ್ ಅವರ ನೋವು ಕೇಳುವ ಸ್ಥಿತಿಯಲ್ಲಿಯಂತೂ ಇಲ್ಲ, ಮುಂಬರುವ ಲೋಕಸಭಾ ಚುನಾವಣೆಗೆ ಸಿದ್ಧತೆ ನಡೆಸುತ್ತಿರುವ ಬಿಜೆಪಿ ಹೈಕಮಾಂಡ್ ದೇಶದಲ್ಲಿ ಹೆಚ್ಚು ಸ್ಥಾನ ಗೆಲ್ಲುವ ತಂತ್ರಗಾರಿಕೆ ನಡೆಸುವುದರತ್ತ ಗಮನ ನೀಡುತ್ತಿದೆಯೇ ಹೊರತು ಮೊನ್ನೆ ಮೊನ್ನೆ ದಕ್ಷಿಣ ಭಾರತದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದ ಯಡ್ಡಿ ವಿರುದ್ಧ ಕೇಳಿಬರುತ್ತಿರುವ ಅಪಸ್ವರಗಳಿಗೆ ಕಿವಿಗೊಡಲು ಅದಕ್ಕೆ ಪುರುಸೊತ್ತಿಲ್ಲ.



ತಮಗಾಗಿರುವ ಅನ್ಯಾಯದ ಬಗ್ಗೆ ಬಾಯಿ ಬಿಟ್ಟರೆ ಏನೂ ಪ್ರಯೋಜನವಿಲ್ಲ ಎಂಬುದೂ ಭಿನ್ನಮತೀಯರಿಗೆ ಗೊತ್ತಿದೆ. ಜಗದೀಶ ಶೆಟ್ಟರ್ ಕೂಡ ಕೊನೆಗೆ ಹೇಗೆ ಬಾಯಿ ಮುಚ್ಚಿಕೊಂಡು ಯಡ್ಡಿ ಹೇಳಿದಂತೆ ಕೇಳುವಂತಾಯಿತೋ ಹಾಗೆ ತಮಗೂ ಆಗುತ್ತದೆ ಎಂದು ಸಿ.ಟಿ.ರವಿ, ಶಂಕರಲಿಂಗೇಗೌಡರಂತವರು ಹೆದರಿದ್ದಾರೆ. ಆದ್ದರಿಂದ ವಿಧಿ ಇಲ್ಲದೆ ಮನಸ್ಸಿನಲ್ಲಿ ವೇದನೆ ತುಂಬಿದ್ದರೂ ಬಾಯಲ್ಲಿ ಬಂಗಾರದಂತಹ ಮಾತುಗಳನ್ನಾಡುತ್ತಿದ್ದಾರೆ.

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೂ ತನಗೆ ಏನೇನೂ ಪ್ರಯೋಜನವಾಗಲಿಲ್ಲವೆಂದು ಬೇಸರಗೊಂಡಿರುವ ಸಿ.ಟಿ.ರವಿ, 'ಅತಿಥಿ ದೇವೋಭವ ಎಂಬುದು ನಮ್ಮ ಸಂಸ್ಕೃತಿ. ಅದಕ್ಕೆ ಪಕ್ಷಕ್ಕೆ ಬಂದವರಿಗೆ ಸ್ಥಾನ ನೀಡುವುದರಲ್ಲಿ ತಪ್ಪೇನಿಲ್ಲ' ಎಂದು ಮಾತಿಗೆ ಹೇಳುತ್ತಿದ್ದಾರೆ. ಬಂದವರು ಅತಿಥಿಗಳಲ್ಲ, ಅಧಿಕಾರ ಬಯಸಿದ ದೆವ್ವಗಳು ಎಂಬುದನ್ನು ಅರಿಯದ ಮೂರ್ಖರೇನೂ ಅವರಲ್ಲ.

ಇನ್ನು ಶಂಕರಲಿಂಗೇಗೌಡರಂತೂ 'ಯಡ್ಡಿ ಮೋಸ ಮಾಡಿದ್ದಾರೆ ಎಂದು ಹೇಳಿ ಕತ್ತಿತೆಗೆದುಕೊಂಡು ಹೋರಾಟ ಮಾಡಲಾಗುತ್ತೇನ್ರೀ?' ಎಂದು ಕೇಳುತ್ತಲೇ ಕತ್ತಿಯಿಂದ ಕಡಿಯುವಷ್ಟು ಸಿಟ್ಟಿದೆ ಎಂಬುದನ್ನು ತೋರಿಸಿದ್ದಾರೆ. ಇನ್ನ ಸದಾನಂದಗೌಡರು ನೀಡುವ ವಿವರಣೆಯ ಶೈಲಿ ಮತ್ತು ನಗುವನ್ನು ನೋಡಿದರೆ ಸಾಕು ಅವರಿಗೆ ಎಷ್ಟರಮಟ್ಟಿಗೆ ಸಿಟ್ಟಿದೆ ಎಂಬುದು ಗೊತ್ತಾಗುತ್ತದೆ.

ಭಿನ್ನಮತೀಯ ಗುಂಪಿಗೆ ನಾಯಕತ್ವ ನೀಡಬೇಕಾಗಿದ್ದ ಅನಂತು, ರಾಜ್ಯಸಭೆಗೆ ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗ ಯಡ್ಡಿ ತಮಗೆ ಮಾಡಿದ ಅವಮಾನದಿಂದ ಇನ್ನೂ ಸುಧಾರಿಸಿಕೊಂಡಂತೆ ಕಾಣುತ್ತಿಲ್ಲ, ಹೀಗಾಗಿ ಮನಸ್ಸಿನಲ್ಲಿಯೇ ಮಸಲತ್ತು ನಡೆಸುತ್ತಾ ದಿಲ್ಲಿಯಲ್ಲಿ ಕುಳಿತಿದ್ದಾರೆ. ಆದರೆ ಅವರಂತೆ 'ನರಿ ಬುದ್ಧಿ'ಯಿಂದ ಕಾರ್ಯತಂತ್ರ ರೂಪಿಸಲು ಬಾರದ ಕೆಲ ಬಿಸಿರಕ್ತದ ಶಾಸಕರು ಇಲ್ಲಿ 'ಕೊತಕೊತಾ' ಎಂದು ಕುದಿಯುತ್ತಿದ್ದಾರೆ.

ರೆಡ್ಡಿಗಳ ಹಣದ ಮೆರೆದಾಟ, ಶೋಭಕ್ಕಳ ಮಿಂಚಿನ ಓಡಾಟ, ಯಡ್ಡಿಯ ಡಿಕ್ಟೇಟರ್ ಆಡಳಿತ ಬಿಜೆಪಿ ಭಿನ್ನಮತೀಯರ ನಿದ್ರೆ ಗೆಡಿಸಿದೆ. ಯಾರೊಬ್ಬ ಸಚಿವರನ್ನೂ ಕೇಳದೆ, ಪಕ್ಷದ ಅಭಿಪ್ರಾಯ ಪಡೆಯದೆ ಯಡ್ಡಿಯೇ ಡೀಲ್ ಮಾಡಿಕೊಂಡು ಅಧಿಕಾರಿಗಳ ಹಿಂಡು, ಹಿಂಡನ್ನೇ ವರ್ಗಾಯಿಸುತ್ತಿರುವುದನ್ನು ನೋಡಿದರೂ ಸುಮ್ಮನಿರಬೇಕಾದ ಸ್ಥಿತಿ ಈಗ ಭಿನ್ನಮತೀಯರದ್ದು.

ಈ ರೀತಿ ರಾಜ್ಯದ ಮುಖ್ಯಮಂತ್ರಿಯೋರ್ವ ಎಲ್ಲರನ್ನೂ ನಿರ್ಲಕ್ಷಿಸಿ, ಅಧಿಕಾರ ನಡೆಸುವುದನ್ನು ನೋಡಿಕೊಂಡು ಬಿಜೆಪಿಯ ಹೈಕಮಾಂಡ್ ಸುಮ್ಮನಿರುತ್ತದೆ ಎಂದೇನೂ ಅಲ್ಲ. ಹಿಂದೆ ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿದ್ದ ಉಮಾಭಾರತಿ ವಿರುದ್ಧ ದನಿ ಎತ್ತಿದ್ದ ಭಿನ್ನಮತೀಯರನ್ನು ಪಕ್ಷದ ಹೈಕಮಾಂಡೇ ಬೆಳೆಸಿತ್ತು, ಕೊನೆಗೆ ಉಮಾಭಾರತಿಯೇ ಅಧಿಕಾರ ಬಿಡುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿತ್ತು.

ರಾಜ್ಯದಲ್ಲಿಯೂ ಯಡ್ಡಿ ಎಗ್ಗಿಲ್ಲದಂತೆ ಮೆರೆಯುವುದು ಪಕ್ಷದ ಹೈಕಮಾಂಡ್‌ಗೇನೂ ಬೇಕಿಲ್ಲ, ಅವರ ಬಗ್ಗೆ ವಿಶೇಷವಾದ ಒಲವೇನೂ ಹೈಕಮಾಂಡಿಗೆ ಇಲ್ಲ, ಆದರೆ ಭಿನ್ನಮತೀಯರ ಭಾವನೆಗೆ ಸ್ಪಂದಿಸಲು ಕಾಲ ಇನ್ನೂ ಕೂಡಿಬಂದಿಲ್ಲ ಅಷ್ಟೇ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಪಕ್ಷ ನಿರೀಕ್ಷಿಸಿದಷ್ಟು ಸಾಧನೆ ಮಾಡಿದರೆ ಯಡ್ಡಿ ಬಚಾವಾಗುತ್ತಾರೆ. ಇಲ್ಲದಿದ್ದರೆ ಯಡ್ಡಿ ಬಲಿ ಗ್ಯಾರಂಟಿ. ಯಡ್ಡಿಯ ಹಿಡಿತದಿಂದ ರಾಜ್ಯ ಬಿಜೆಪಿಯನ್ನು 'ರಕ್ಷಿಸ'ಬೇಕೆಂದಿದ್ದರೆ, ಭಿನ್ನಮತೀಯರೀಗ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಸೋಲುವಂತೆ ಮಾಡಬೇಕಾಗಿದೆ. ತ್ರಿಶಂಕುಸ್ಥಿತಿಯಲ್ಲಿರುವ ಭಿನ್ನಮತೀಯರಿಗೆ 'ವೈಕುಂಠ' ಸೇರಲು ಇರುವುದು ಇದೊಂದೇ ದಾರಿ!

■ ವರದಿಗಾರ


ಹುಚ್ಚು ಮಹಿಳೆ ಮತ್ತು ಬಣ್ಣದ ಲೋಕ



ಬಣ್ಣದ ಲೋಕದ ವ್ಯಾಮೋಹಕ್ಕೆ ಬಿದ್ದ ಸೀರಿಯಲ್ ನಟಿಯೊಬ್ಬಳು ತನ್ನ ಬದುಕನ್ನು ತಾನೇ ಹಾಳು ಮಾಡಿಕೊಂಡು ಜೈಲು ಸೇರಿದ್ದಾಳೆ.

ಮೊನ್ನೆ ಗುರುವಾರ ರಾತ್ರಿ ಬೆಂಗಳೂರಿನ ಶ್ರೀನಗರ ಪೈಪ್‌ಲೈನ್‌ರಸ್ತೆಯಲ್ಲಿನ ಮನೆಯೊಂದರಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ನತದೃಷ್ಟ ಸುರೇಶ್ "ನನ್ನ ಸಾವಿಗೆ ನನ್ನ ಹೆಂಡತಿಯೇ ಕಾರಣ. ಅವಳ ಅನೈತಿಕ ಸಂಬಂಧದಿಂದ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ಅವಳನ್ನು ಮಾತ್ರ ಬಿಡಬೇಡಿ" ಎಂದು ಡೆತ್ ನೋಟ್ ಬರೆದು ಜೀವ ಬಿಟ್ಟಿದ್ದಾನೆ.

ಈತ ಮೈಸೂರು ರಸ್ತೆಯಲ್ಲಿರುವ ರಾಮ್‌ಸನ್ ಟ್ರಾನ್ಸ್‌ಪೋರ್ಟ್‌ನಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದ, ಬರುತ್ತಿದ್ದ ಏಳು ಸಾವಿರ ರೂಪಾಯಿ ಸಂಬಳ ಹೆಂಡತಿ ನಳಿನಿಯ ಆಡಂಬರದ ಜೀವನಕ್ಕೆ ಸಾಲುತ್ತಿರಲಿಲ್ಲ. ಮೊದಮೊದಲು ಸೀರೆ ವ್ಯಾಪಾರ, ಬ್ಯೂಟಿ ಪಾರ್ಲರ್ ಅಂತಾ ಓಡಾಡಿಕೊಂಡಿದ್ದ ನಳಿನಿ ದಿನಕಳೆದಂತೆ ತೀರಾ ಶೋಕಿಗೆ ಬಿದ್ದಳು. ಸೀರಿಯಲ್‌ಗಳಲ್ಲಿ ನಟಿಸಿ ಹಣ ಮಾಡುತ್ತೇನೆ ಎಂದು ಹೇಳಿ ಹೊತ್ತಲ್ಲದ ಹೊತ್ತಿನಲ್ಲಿ ಹೊರಹೋಗಲು ಆರಂಭಿಸಿದಳು. ಪಾಪದ ಪ್ರಾಣಿಯಂತಿದ್ದ ಗಂಡ "ನೀನು ಸರಿರಾತ್ರಿಯಲ್ಲಿ ಯಾವ ಸೀರಿಯಲ್ಲಿನಲ್ಲಿ ನಟಿಸ್ತೀಯ ಹೇಳು" ಎಂದು ಪ್ರಶ್ನಿಸಲು ಪ್ರಾರಂಭಿಸಿದ. ಆದರೂ ಆತನ ಮಾತಿಗೆ ನಳಿನಿ ಕ್ಯಾರೇ ಅನ್ನದಿದ್ದಾಗ "ನಿನ್ನ ಸೀರಿಯಲ್ಲು ಶೂಟಿಂಗ್ ಯಾವ ಜಾಗದಲ್ಲಿ ನಡೆಯುತ್ತೆ ಹೇಳು. ನಾನೇ ನಿನ್ನ ಕರೆದುಕೊಂಡು ಹೋಗಿ ಬಿಟ್ಟು ಮತ್ತೆ ಕರೆದುಕೊಂಡು ಬರುತ್ತೇನೆ" ಎಂದು ಅಂಗಲಾಚಿದ.



ಅಸಲಿಗೆ ಯಾವ ಧಾರಾವಾಹಿಯವರು ತಾನೆ ರಾತ್ರಿ ಹತ್ತು ಗಂಟೆಯಿಂದ ಬೆಳಗ್ಗಿನ ಜಾವದ ಆರರ ತನಕ ಶೂಟಿಂಗ್ ಮಾಡ್ತಾರೆ? ಅದೂಅಲ್ಲದೆ ಈಕೆ ಯಾವ ಸೀರಿಯಲ್ಲುಗಳಲ್ಲೂ ಅಂಥಾ ಹೇಳಿಕೊಳ್ಳುವಂತ ಪಾತ್ರವನ್ನು ಮಾಡುತ್ತಿರಲಿಲ್ಲ. ಗುಪ್ತಗಾಮಿನಿ, ಸುಕನ್ಯಾ ಕುರುಕ್ಷೇತ್ರ ಎಂಬ ಧಾರಾವಾಹಿಗಳಲ್ಲಿ ಸುಮ್ಮನೇ ಹೀಗೆ ಬಂದು ಹಾಗೆ ಹೋಗುವ ಪಾತ್ರಗಳಲ್ಲಿ ನಟಿಸುತ್ತಿದ್ದಳು. ಕಿರುತೆರೆ ಅಸೋಸಿಯೇಷನ್‌ನಲ್ಲಿ ಕೂಡಾ ಈಕೆಯ ಹೆಸರು ನೋಂದಾವಣಿಯಾಗಿಲ್ಲ, ಅಂಥದ್ದರಲ್ಲಿ ಹಗಲೂ ರಾತ್ರಿ ಈಕೆ ನಟಿಸುವ ಜರೂರತ್ತೇ ಇರಲಿಲ್ಲ.

ಆಗ ಬೆಳೆಯುತ್ತಾ ಹೋಗಿದೆ ಗಂಡ ಸುರೇಶನ ಅನುಮಾನದ ಹುತ್ತ.

ತನ್ನ ಪತ್ನಿ ಧಾರಾವಾಹಿಗಳಲ್ಲಿ ನಟಿಸುವುದರ ಬಗ್ಗೆಯಾಗಲಿ, ಬ್ಯೂಟಿ ಪಾರ್ಲರ್ ನಡೆಸುವುದರ ಬಗ್ಗೆಯಾಗಲಿ ಸುರೇಶನ ವಿರೋಧವಿರಲಿಲ್ಲ, ಆದರೆ ಇದ್ದಕ್ಕಿದ್ದಂತೆ ಬದಲಾದ ಅವಳ ವೇಷಭೂಷಣ, ಹಾವ-ಭಾವಗಳು ಆತನನ್ನು ಅನುಮಾನಕ್ಕೆ ಈಡುಮಾಡಿದವು. ಯಾವಾಗ ಆಕೆಯ ಮೊಬೈಲ್‌ಗೆ ಸಿಕ್ಕಾಪಟ್ಟೆ ಫೋನ್‌ಗಳು ಮತ್ತು ಅಶ್ಲೀಲ ಮೆಸೇಜುಗಳು ಬರತೊಡಗಿದವೋ ಆತನ ಅನುಮಾನ ಮತ್ತಷ್ಟು ಇಮ್ಮಡಿಗೊಂಡಿದೆ. ಹೊತ್ತಲ್ಲದ ಹೊತ್ತಲ್ಲಿ ತನ್ನ ಪತ್ನಿ ಕಂಡಕಂಡವರ ಬೈಕುಗಳಲ್ಲಿ ಬಂದಿಳಿಯುವುದು ಆತನ ನೆಮ್ಮದಿ ಕೆಡಿಸಿದೆ.

ಇದಕ್ಕೆ ತನ್ನ ಗಂಡ ಎಷ್ಟೇ ವಿರೋಧ ವ್ಯಕ್ತಪಡಿಸಿದರೂ ನಟಿಯಾಗಲು ಹೊರಟ ನಳಿನಿ ಮಾತ್ರ ಯಾರ ಮಾತನ್ನೂ ಕೇಳುವ ತಾಳ್ಮೆ ಹೊಂದಿರಲಿಲ್ಲ, "ಹೆಚ್ಚು ಮಾತಾಡಿದ್ರೆ ನಿನ್ನ ಮತ್ತು ನಿನ್ನ ತಂಗಿಯರ ಮೇಲೆ ದೌರಿ ಕೇಸು ಹಾಕಿಸಿ ಒಳಕ್ಕೆ ಹಾಕಿಸುತ್ತೀನಿ" ಎಂದು ಹೆದರಿಸಿದ್ದಾಳೆ. ಇಷ್ಟೇ ಆಗಿದ್ದರೆ ಆತ ತನ್ನ ಹೆಂಡತಿಯೊಂದಿಗೆ ರಾಜಿ ಮಾಡಿಕೊಂಡು ಬದುಕುತ್ತಿದ್ದನೋ ಏನೋ? ಆದರೆ ಆಕೆ ಕೆಂಪೇಗೌಡ ಆಸ್ಪತ್ರೆಯಲ್ಲಿ ಲಿಫ್ಟ್ ಆಪರೇಟರ್ ಆಗಿರುವ ತನ್ನ ಸೋದರಮಾವನನ್ನು ಕರೆಸಿ ಗಂಡನ ಮೇಲೆ ಧಮಕಿ ಹಾಕಿಸಿದ್ದಾಳೆ. ಶೋ ಮ್ಯಾನ್‌ನಂತೆ ಬಂದ ಲಿಫ್ಟ್ ಆಪರೇಟರ್ ಮಾವ "ನಿನ್ನನ್ನು ಮೇಲೆತ್ತಿಬಿಡ್ತೀನಿ" ಎಂದು ಅವಾಜ್ ಹಾಕಿದ್ದಾನೆ. ಹೆಂಡತಿಯ ಈ ವರ್ತನೆಯಿಂದ ಭೀತಿಗೊಳಗಾದ ಮತ್ತು ಮಾನ ಮರ್ಯಾದೆಗೆ ಅಂಜಿದ ಗಂಡ ಆತ್ಮಹತ್ಯೆಗೆ ಶರಣಾಗಿದ್ದಾನೆ. ಅವರಿಬ್ಬರ ನಾಲ್ಕು ವರ್ಷದ ಕಂದಮ್ಮ ಮಾತ್ರ ಅತ್ತ ತಂದೆಯನ್ನೂ ಕಳೆದುಕೊಂಡು, ಇತ್ತ ಜೈಲುಪಾಲಾದ ತಾಯಿಯೂ ಇಲ್ಲದೆ ಕಂಗಾಲಾಗಿದೆ.

ಬಣ್ಣದ ಲೋಕದ ಶೋಕಿಗೆ ಬಿದ್ದ ಕೆಲ ಹೆಂಗಸರು ತಮ್ಮ ಬಾಳನ್ನು ತಾವೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ನಳಿನಿ ಪ್ರಕರಣ ಇದಕ್ಕೆ ಮತ್ತೊಂದು ಸೇರ್ಪಡೆಯಷ್ಟೇ. ನಟನೆ, ಪ್ರತಿಭೆಯೆಂಬುದು ಯಾರಪ್ಪನ ಸೊತ್ತೂ ಅಲ್ಲ, ಮಹಿಳೆಯರಿಗೂ ಸ್ವಾತಂತ್ರ್ಯ ಅನ್ನೋದು ಬೇಕು. ಆದರೆ ತೀರಾ ಬಣ್ಣದ ಅಮಲಿಗೆ ಬಿದ್ದು ಮನೆಗೇ ಮಾರಿಯಾಗುವ ನಳಿನಿಯಂಥ ಹೆಂಗಸರಿಂದ ಅದೆಷ್ಟು ಮನೆ, ಮನಗಳು ನರಕವಾಗುತ್ತಿವೆಯೋ? ■

ನೆಲವತ್ತೇಳು ಸಾವಿರ ಮತದಾರರ ವಿಶ್ವಾಸಕ್ಕೆ ಯಾರಾದರೂ ಬೆಲೆ ಕಟ್ಟಲು ಸಾಧ್ಯವೇ?

ತುರುವೇಕೆರೆಯ ಜನ ಬಿಜೆಪಿಯ ಸ್ಥಳೀಕ ಎಂ.ಡಿ. ಲಕ್ಷ್ಮೀನಾರಾಯಣರನ್ನೇ ಸೋಲಿಸಿ ಗೆಲ್ಲಿಸಿದ್ದು ಕಾಂಗ್ರೆಸ್ಸಿನ ಜಗ್ಗೇಶ್‌ರನ್ನು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಕೇವಲ ತುರುವೇಕೆರೆಯೊಂದಕ್ಕೆ ಸರಿಸುಮಾರು ಇನ್ನೂರೈವತ್ತು ಕೋಟಿಯ ಕಾಮಗಾರಿಗಳನ್ನು ತಂದಿದ್ದ ಜೆಡಿಎಸ್‌ನ ಮಾಜಿ ಶಾಸಕ ಎಂ.ಟಿ. ಕೃಷ್ಣಪ್ಪ ಈ ಊರಿಗೆ ಮಾಡಿದ್ದು ಒಂದಾ ಎರಡಾ?


ಲಕ್ಷ್ಮೀನಾರಾಯಣ

ಇಂಥವರನ್ನೆಲ್ಲ ಸೋಲಿಸಿ ಜಗ್ಗೇಶ್ ಎಂಬ ಕಮಂಗಿ ನಟನನ್ನು ಗೆಲ್ಲಿಸಿದ ತಪ್ಪಿಗೆ ತುರುವೇಕೆರೆಯ ಜನಕ್ಕೆ ತಕ್ಕ ಶಾಸ್ತಿಯಾಗಿದೆ. ಬರೋಬ್ಬರಿ ನಲವತ್ತೇಳು ಸಾವಿರದಷ್ಟು ಮತಗಳನ್ನು ಅಂದರೆ ಅಷ್ಟೇ ಸಂಖ್ಯೆಯ ಜನರ ವಿಶ್ವಾಸವನ್ನು ಗಣಿಕಳ್ಳರಿಗೆ ಮಾರಿಕೊಂಡ ಜಗ್ಗೇಶ್‌ಗೆ ಒಳ್ಳೆಯ ರೇಟೆ ಸಿಕ್ಕಿದೆ. ನಡೆದ ಡೀಲು, ಕೈಬದಲಾದ ದುಡ್ಡು, ಒದ್ದಿದ ಆಮಿಷದ ಪಟ್ಟಿಯನ್ನೆ ಕೊಡುವ ತುರುವೇಕೆರೆ ಜನರ ಪ್ರಕಾರ ಜಗ್ಗೇಶ್‌ಗೆ ಐದು ಕೋಟಿಯಷ್ಟು ಹಾರ್ಡ್ ಕ್ಯಾಶ್, ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ಒಂದು ಬಂಗಲೆ, ಮೈಸೂರು ಮಿನರಲ್ಸ್‌ನ ಅಧ್ಯಕ್ಷಗಾದಿ, ಮುಂಬರುವ ಲೋಕಸಭಾ ಚುನಾವಣೆಗೆ ತುಮಕೂರಿನಿಂದ ಬಿಜೆಪಿ ಟಿಕೆಟು ಮತ್ತು ತೆರವಾದ ತುರುವೇಕೆರೆಯ ಉಪಚುನಾವಣೆಗೆ ಅವರ ಪತ್ನಿ ಪರಿಮಳರನ್ನು ಬಿಜೆಪಿಯಿಂದ ನಿಲ್ಲಿಸುವ ಷರತ್ತಿಗೊಳಪಟ್ಟೇ ಜಗ್ಗೇಶ್ ತಮ್ಮ ಎಮ್ಮೆಲ್ಲೆಗಿರಿಯನ್ನು ಗಣಿರೆಡ್ಡಿಗೆ ಮಾರಿದ್ದಾರೆ.

ಸದ್ಯ ತುರುವೇಕೆರೆಯ ಜನ ಜಗ್ಗೇಶ್ ಹೆಸರು ಕೇಳಿದರೇನೇ ಎಕ್ಕಡ ಕೈಗೆತ್ತಿಕೊಳ್ಳುತ್ತಿದ್ದಾರೆ. ಕ್ಯಾಕರಿಸಿ ಉಗಿಯುತ್ತಿದ್ದಾರೆ. ಹೀಗಾಗಿ ಸದ್ಯಕ್ಕೆ ಆತ ತುರುವೇಕೆರೆಗೆ ಕಾಲಿಡುವುದು ಸಾಧ್ಯವಿಲ್ಲವಾದ್ದರಿಂದ ಮುಂಬರುವ ಉಪಚುನಾವಣೆಗೆ ಅವರ ಪತ್ನಿ ಪರಿಮಳರನ್ನು ತುರುವೇಕೆರೆಯಿಂದ ಮತ್ತೆ ಕಣಕ್ಕಿಳಿಸುವ ಧೈರ್ಯ ಮಾಡಲಿಕ್ಕಿಲ್ಲ. ಹಾಗೊಮ್ಮೆ ಲೋಕಸಭಾ ಅಭ್ಯರ್ಥಿಯಾಗಿ ಮತ್ತೆ ತುರುವೇಕೆರೆಗೆ ಕಾಲಿಟ್ಟರೂ ಮೊದಲಿನ ಬೆಲೆ ಸಿಗಲಿಕ್ಕಿಲ್ಲ.


ಕೃಷ್ಣಪ್ಪ

ಅಷ್ಟಕ್ಕೂ ತುರುವೇಕೆರೆ ಜಗ್ಗೇಶ್ ತವರೂರು. ಇದೇ ತಾಲ್ಲೂಕಿನ ಜಡೆಮಾಯಸಂದ್ರ ಅವರ ಹುಟ್ಟೂರು. ನಮ್ಮೂರಿನ ಹುಡುಗ, ಹಿಂದೊಮ್ಮೆ ಸೋತಿದ್ದಾನೆ, ಈ ಒಂದು ಸಲವಾದರೂ ಎಮ್ಮೆಲ್ಲೆಯಾಗಲಿ ಎಂಬ ಭರವಸೆಯಿಟ್ಟೇ ತುರುವೇಕೆರೆಯ ಜನ ಓಟು ಕೊಟ್ಟರು. ಅದೂ ನಲವತ್ತೇಳು ಸಾವಿರದಷ್ಟು ಬೃಹತ್ ಗಾತ್ರದ ಜನ ಬೆಂಬಲವಾಗಿತ್ತು. ಬಿಜೆಪಿಯ ಲಕ್ಷ್ಮೀನಾರಾಯಣರಿಗಿಂತ ಜಗ್ಗೇಶ್‌ಗೆ ಒಂಬತ್ತು ಸಾವಿರದಷ್ಟು ಲೀಡ್ ಗಿಟ್ಟಿತ್ತು. ಅಷ್ಟೆಲ್ಲಾ ಅಭಿವೃದ್ಧಿಯನ್ನು ತಂದ ಎಂ.ಟಿ. ಕೃಷ್ಣಪ್ಪನವರನ್ನು ಜನ ಮೂರನೇ ಸ್ಥಾನಕ್ಕೆ ದಬ್ಬಿ ಗೆಲ್ಲಿಸಿದ ಜಗ್ಗೇಶ್ ಓಟುಕೊಟ್ಟವರಿಗೆ ಸಣ್ಣದೊಂದು ಕೃತಜ್ಞತೆ ಹೇಳುವುದಕ್ಕೂ ಮೊದಲೇ ಬಿಜೆಪಿಗೆ ಬಿಕರಿಗೊಂಡರೆ ಜನ ಎಕ್ಕಡ ಕೈಗೆತ್ತಿಕೊಳ್ಳದೇ ಮತ್ತೇನು?

"ಕ್ಷೇತ್ರದ ಹಿತದೃಷ್ಟಿಯಿಂದಲೇ ನಾನು ಬಿಜೆಪಿಗೆ ಹೋಗುತ್ತಿದ್ದೇನೆ, ನನಗೆ ತುರುವೇಕೆರೆಯ ಅಭಿವೃದ್ಧಿಯೇ ಮುಖ್ಯ" ಎಂದು ತಾನೇ ಜಗ್ಗೇಶ್ ತಮ್ಮ ಪಕ್ಷಾಂತರವನ್ನು ಸಮರ್ಥಿಸಿಕೊಳ್ಳುತ್ತಿರುವುದು? ಗೆದ್ದು ಇನ್ನೂ ಎರಡು ತಿಂಗಳು ಕಳೆದಿಲ್ಲ. ತುರುವೇಕೆರೆಯ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಯಾವ ಕಾಮಗಾರಿಗೆ ಯಾವ ಯೋಜನೆಗೆ ಬಿಜೆಪಿ ಸರ್ಕಾರ ಅಡ್ಡಗಾಲಿಟ್ಟಿತ್ತು? ಇಂಥ ಕಾಮಗಾರಿಗೆ ಇಂಥದೇ ಕೆಲಸಕ್ಕೆ ಇಂತಿಷ್ಟು ರೊಕ್ಕ ಬೇಕೆಂದು ಜಗ್ಗೇಶ್ ಅದ್ಯಾವತ್ತು ಮುಖ್ಯಮಂತ್ರಿಗೆ ಅರ್ಜಿಕೊಟ್ಟರು.

ಬಿಜೆಪಿ ಸರ್ಕಾರ ಎಂದ ಮಾತ್ರಕ್ಕೆ ಅದು ಬೇರೆ ಪಕ್ಷಗಳ ಎಮ್ಮೆಲ್ಲೆಗಳಿರುವ ಕ್ಷೇತ್ರಗಳನ್ನು ಮಲತಾಯಿ ಧೋರಣೆಯಿಂದ ನಡೆಸಿಕೊಂಡರೆ ಜಗ್ಗೇಶ್ ಅದನ್ನು ವಿಧಾನಸಭೆಯಲ್ಲಿ ಪ್ರಶ್ನಿಸಬಹುದಿತ್ತು. ಜನರನ್ನು ಎತ್ತಿಕಟ್ಟಿ ಬೀದಿಗಿಳಿದು ಪ್ರತಿಭಟಿಸಬಹುದಿತ್ತು. ಯಾವುದೇ ಸರ್ಕಾರ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಮಾನದಂಡ ಇಟ್ಟುಕೊಂಡರೆ ಅದು ಸಂವಿಧಾನಕ್ಕೆ ದ್ರೋಹ ಬಗೆದಂತಾಗುತ್ತದೆ. ಅಷ್ಟಕ್ಕೂ ಜಗ್ಗೇಶ್ ವಿರೋಧಿ ಕಾಂಗ್ರೆಸ್‌ನ ಶಾಸಕ. ತುರುವೇಕೆರೆಗೆ ಅನ್ಯಾಯವಾಗಿದ್ದರೆ ಇಡೀ ಪಕ್ಷವೇ ಅವರ ಬೆನ್ನಿಗೆ ನಿಲ್ಲುತ್ತಿತ್ತು. ಬಿಜೆಪಿಗದು ದೊಡ್ಡ ಮುಖಭಂಗವಾಗುತ್ತಿತ್ತು.

ಇಂಥದ್ಯಾವುದೂ ನಡೆದೇ ಇಲ್ಲ ಎಂದ ಮೇಲೆ ತಾನು ತುರುವೇಕೆರೆಯ ಅಭಿವೃದ್ಧಿಯ ದೃಷ್ಟಿಯಿಂದ ಬಿಜೆಪಿ ಸೇರಿದ್ದೇನೆ ಎಂಬ ಜಗ್ಗೇಶ್ ಡೈಲಾಗಿಗೆ ಯಾವ ಬೆಲೆಯುಂಟು? ಹೋಗಲಿ ತುರುವೇಕೆರೆಯ ಅಭಿವೃದ್ಧಿ ಕುರಿತಂತೆ ಜಗ್ಗೇಶ್‌ಗಿರುವ ತಿಳಿವಳಿಕೆಯಾದರೂ ಎಂಥದ್ದು? ಈ ಬಗ್ಗೆ ಜಗ್ಗೇಶ್ ಯಾವತ್ತಾದರೂ ಸರ್ಕಾರಕ್ಕೆ ಮನವಿಕೊಟ್ಟು ಅದನ್ನು ಜಾರಿಗೆ ಒತ್ತಾಯಿಸಿ ಪ್ರತಿಭಟಿಸಿದ್ದರೆ ಆ ಮಾತು ಬೇರೆ. ಗೆದ್ದ ನಂತರ ಕಾಟಾಚಾರಕ್ಕೂ ತುರುವೇಕೆರೆಗೆ ಕಾಲಿಟ್ಟಿಲ್ಲ. ಹಿಂದೆ ಎಂ.ಟಿ. ಕೃಷ್ಣಪ್ಪ ಶಾಸಕರಾಗಿದ್ದಾಗ ಗಲ್ಲಿಗಲ್ಲಿಗಳಲ್ಲೂ ಬೇರುಬಿಟ್ಟಿದ್ದ ಇಸ್ಪೀಟು ಕ್ಲಬ್‌ಗಳಿಗೊಂದು ಗತಿ ಕಾಣಿಸಿದ್ದರು. ಆದರೆ ಜಗ್ಗೇಶ್ ಗೆದ್ದ ಒಂದೇ ಒಂದು ತಿಂಗಳಿಗೆ ಮುಚ್ಚಿದ ಇಸ್ಪೀಟು ಕ್ಲಬ್‌ಗಳೆಲ್ಲ ಒಂದೊಂದಾಗಿ ಮರುಹುಟ್ಟು ಪಡಕೊಂಡವು.

ಯಾವ ಪೊಲೀಸ್ ಇನ್ಸ್‌ಪೆಕ್ಟರ್ ಅಬ್ದುಲ್ ಖಾದರ್ ಅಲ್ಲಿನ ಎಲ್ಲಾ ಇಸ್ಪೀಟ್ ಕ್ಲಬ್‌ಗಳನ್ನು ಮುಚ್ಚಿಸಿದ್ದರೋ ಜಗ್ಗೇಶ್ ಗೆದ್ದು ಮೊದಲು ಮಾಡಿದ ಪುಣ್ಯ ಕಾರ್ಯವೇನು ಗೊತ್ತೆ? ಇಸ್ಪೀಟು ದೊರೆಗಳು ಕೊಡುತ್ತಿದ್ದ ಒಂದು ಲಕ್ಷ ರೂಪಾಯಿಯ ಮಂತ್ಲಿಗೆ ಕೈ ಚಾಚಿ ನಿಷ್ಠೂರಿ ಇನ್ಸ್‌ಪೆಕ್ಟರ್ ಖಾದರ್‌ರನ್ನು ಎತ್ತಂಗಡಿ ಮಾಡಿಸಿದ್ದು!

ಒಬ್ಬ ಎಮ್ಮೆಲ್ಲೆ ತಾನೇ ನಿಂತು ಆ ಊರಿನ ಗಲ್ಲಿಗಲ್ಲಿಯ ಇಸ್ಪೀಟು ಅಡ್ಡೆಗಳಿಗೆ ಮರುಜನ್ಮ ಕೊಡುತ್ತಾನೆಂದರೆ, ತಾನೊಬ್ಬ ಜನಪ್ರಿಯ ನಟ, ಗೌರವಾನ್ವಿತ ಶಾಸಕ ಎಂಬುದನ್ನೂ ಮರೆತು ಅದೂ ಒಂದು ಲಕ್ಷದ ಮಂತ್ಲಿಗೆ ಜೊಲ್ಲು ಸುರಿಸುತ್ತಾನೆಂದರೆ ಇನ್ನು ಜಗ್ಗೇಶ್ ತನ್ನನ್ನು ತಾನೇ ಗಣಿ ಕಳ್ಳರಿಗೆ ಮಾರಿಕೊಂಡಿದ್ದು ಯಾವ ಮಹಾ? ಇದು ಜಗ್ಗೇಶ್ ದುರಾಶೆ ಮತ್ತು ದುರ್ಬುದ್ಧಿಯಲ್ಲದೇ ಮತ್ತೇನಲ್ಲ. ಗೆಲ್ಲುವುದಕ್ಕೆಂದೇ ಎರಡೂವರೆ ಕೋಟಿ ಖರ್ಚಾಗಿದೆ. ಅದನ್ನು ದುಡಿದುಕೊಳ್ಳಬೇಕೆಂದರೆ ಒಂದೋ ಕಾಂಗ್ರೆಸ್ ಸರ್ಕಾರವಿರಬೇಕು ಅಥವಾ ಎಮ್ಮೆಲ್ಲೆಗಿರಿಯನ್ನೇ ಬಿಜೆಪಿಗೆ ಮಾರಿಕೊಳ್ಳಬೇಕು. ಒಂದು ಬೃಹತ್ ಮೊತ್ತದ ದುಡ್ಡು, ಡಾಲರ್ಸ್ ಕಾಲನಿಯ ಸೈಟು, ಮೈಸೂರು ಮಿನರಲ್ಸ್‌ನ ಚೇರ್ಮನ್‌ಗಿರಿ ಮತ್ತು ತುಮಕೂರಿಗೆ ಎಂ.ಪಿ. ಟಿಕೆಟು ಸಿಕ್ಕರೆ ಇಷ್ಟೆಲ್ಲಕ್ಕೂ ಕಾರಣರಾದ ತುರುವೇಕೆರೆಯ ಜನ ಯಾವ ಲೆಕ್ಕ?

ಇದು ಜಗ್ಗೇಶ್ ಲೆಕ್ಕಾಚಾರ. ಸಾರಿಗೆ ಮಂತ್ರಿ ಅಶೋಕ್ ಡೀಲು ಕುದುರಿಸಿದ್ದಾರೆ. ಗಣಿರೆಡ್ಡಿಗಳು ಅದನ್ನು ಆಖೈರುಗೊಳಿಸಿದ್ದಾರೆ. ಜಗ್ಗೇಶ್ ಸಪತ್ನಿ ಸಮೇತರಾಗಿ ಮುಖ್ಯಮಂತ್ರಿ ಯಡ್ಡಿಯ ಮುಂದೆ ತಮ್ಮನ್ನು ಬಿಜೆಪಿಗೆ ಅರ್ಪಿಸಿಕೊಂಡಿದ್ದಾರೆ. ಹಾಗಂತ ತುರುವೇಕೆರೆಯ ಜನರೇನೂ ಜಗ್ಗೇಶ್ ಎಣಿಸಿದಷ್ಟು ಮುಠ್ಠಾಳರಲ್ಲ. ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿಯಾಗಿ ಹೊಮ್ಮಿದ್ದು ಚೌಧರಿ ರಂಗಪ್ಪ, ಮಾಜಿ ಶಾಸಕ ಹೆಚ್.ಬಿ. ನಂಜೇಗೌಡರೂ ಕಾಂಗ್ರೆಸ್ ಟಿಕೆಟ್ಟಿನ ಪ್ರಬಲ ಸ್ಪರ್ಧಿಯಾಗಿದ್ದರು. ಇನ್ನೇನು ತನಗೆ ಕಾಂಗ್ರೆಸ್ ಟಿಕೆಟ್ ಗ್ಯಾರಂಟಿಯಿಲ್ಲ ಎಂಬುದು ನಿಕ್ಕಿಯಾಗಿದ್ದೇ ಜಗ್ಗೇಶ್ ತಮ್ಮ ಪಟಾಲಮ್ಮನ್ನು ಛೂಬಿಟ್ಟು ಧೋಂಬಿ ನಡೆಸಿದ್ದು, ಬೆಂಗಳೂರಿನ ಶ್ರೀರಾಂಪುರದಿಂದ ಪುಂಡರನ್ನು ಲಾರಿಗಳಲ್ಲಿ ಕರೆಸಿ ಬಸ್ಸುಗಳಿಗೆ ಬೆಂಕಿಯಿಟ್ಟಿದ್ದು, ನೆರೆದ ಜನರೆದುರು ಜಗ್ಗೇಶ್ ಗೋಡೆಗೆ ತಲೆಚಚ್ಚಿಕೊಂಡು ಎದೆಬಡಿದುಕೊಂಡದ್ದು ಇತ್ಯಾದಿಗಳನ್ನೆಲ್ಲ ಕಣ್ಣಾರೆ ಕಂಡಿದ್ದ ತುರುವೇಕೆರೆಯ ಜನ ಬಿಜೆಪಿಗೆ ಹಾರಿದ್ದು ಗೊತ್ತಾಗಿದ್ದೇ ಬೀದಿಗಿಳಿದಿದ್ದಾರೆ. ನೀನೇನಪ್ಪಾ ದೊಡ್ಡಮನುಷ್ಯಾ? ಎಂದು ಹುಡುಕಾಡಿದ ಸಂಗಲಾಪುರ ಗ್ರಾಮಸ್ಥರು ಜಗ್ಗೇಶ್ ಶವಯಾತ್ರೆ ಮಾಡಿ ತಿಥಿ ಮಾಡಿದರೆ, ಮುತ್ತುಗದ ಹಳ್ಳಿಯಲ್ಲಿ ಭೂತ ಸುಟ್ಟಿದ್ದಾರೆ. ಇದೇ ಜುಲೈ 14ರ ಬುಧವಾರ ಬಿಜೆಪಿಯೇತರ ಎಲ್ಲಾ ಸಂಘಟನೆಗಳೂ ಸೇರಿ ಜಗ್ಗೇಶ್ ದ್ರೋಹದ ವಿರುದ್ಧ ತುರುವೇಕೆರೆ ಬಂದ್‌ಗೆ ಕರೆಕೊಟ್ಟಿದ್ದಾರೆ. ಅವತ್ತು ದೊಡ್ಡ ಮಟ್ಟದ ಜಗ್ಗೇಶ್ ಶವಯಾತ್ರೆಯಿದೆ. ಪ್ರತಿಭಟನಾ ಸಭೆಯನ್ನುದ್ದೇಶಿಸಿ ಕಾಂಗ್ರೆಸ್ ನಾಯಕ ಡಿಕೆಶಿಯೆ ಮಾತನಾಡುತ್ತಾರೆ. ಜೊತೆಗೆ ಕ್ಯಾಕರಿಸಿ ಉಗಿಯುವ ಕಾರ್ಯಕ್ರಮ ಬೇರೆ...

ತನ್ನ ಹುಟ್ಟೂರಿನ ಜನರಿಂದ ಶವಯಾತ್ರೆಯ ಸನ್ಮಾನ ಪಡೆದವನಿಗೆ ಇನ್ನಾವ ಬಿರುದು, ಬಾವಲಿ, ಸ್ಥಾನಮಾನ ಸಿಕ್ಕಿ ಏನು ಫಲ?

ಜನತೆ ಕೊಟ್ಟ ಎಮ್ಮೆಲ್ಲೆಗಿರಿಯನ್ನೂ ವಿಶ್ವಾಸವನ್ನೂ ಗಣಿರೊಕ್ಕಕ್ಕೆ ಮಾರಿಕೊಂಡವನು ಯಾವ ಮುಖಹೊತ್ತು ತನ್ನನ್ನು ಲೋಕಸಭೆಗೆ ಗೆಲ್ಲಿಸಿ ಎನ್ನುತ್ತಾನೆ? ಹಾಗೊಮ್ಮೆ ಜನ ಲೋಕಸಭೆಗೆ ಗೆಲ್ಲಿಸಿದರೆ ಅದನ್ನೂ ಮಾರಿಕೊಳ್ಳಲಾರ ಎಂಬುದಕ್ಕೆ ಏನು ಗ್ಯಾರಂಟಿ?

ಕಮಂಗಿ ಜಗ್ಗೇಶ್‌ನಿಗೆ ಕಾಸು ಇದ್ದೋನೆ ಬಾಸು, ಓಟು ಕೊಟ್ಟವನು ಮಾತ್ರ ಮಿಸ್ಟರ್ ಬಕ್ರ!

ಒಬ್ಬ ಜಗ್ಗೇಶ್ ಮಾತ್ರವಲ್ಲ ಮತದಾರರಿಗೆ ದ್ರೋಹ ಬಗೆದು ಬಿಜೆಪಿಗೆ ಬಿಕರಿಗೊಂಡ ಎಲ್ಲಾ ಎಮ್ಮೆಲ್ಲೆಗಳದೂ ಇದೇ ಕತೆ. ■

ತುರುವೇಕೆರೆಯ ದೌರ್ಭಾಗ್ಯ ಹೀಗೂ ಉಂಟೆ?

ತುರುವೇಕೆರೆಯ ಜನ ಈಪಾಟಿ ಸಿಟ್ಟಿಗೇಳ[ಲು] ಕೇವಲ ಜಗ್ಗೇಶ್ ದೋಖಾ ಕೊಟ್ಟಿದ್ದೊಂದ[ೇ] ಕಾರಣವಲ್ಲ.

ಜಗ್ಗೇಶನನ್ನು ನಂಬಿ ಅಲ್ಲಿನ ಜ[ನ] ಸೋಲಿಸಿದ್ದಾದರೂ ಎಂಥವರನ್ನ? ಬಿಜೆ[ಪಿ] ಅಭ್ಯರ್ಥಿಯಾಗಿದ್ದ ಎಂ.ಡಿ. ಲಕ್ಷ್ಮೀನಾರಾಯಣ ಮ[ತ್ತು] ಜೆಡಿಎಸ್‌ನಿಂದ ಕಣಕ್ಕಿಳಿದಿದ್ದ ಎಂ.ಟಿ. ಕೃಷ್ಣ[ಪ್ಪ] ಇಬ್ಬರೂ ಮಾಜಿ ಶಾಸಕರು. ಹಿಂದೆ ಎಸ್.ಎ[ಂ.] ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗಲೇ ವಿರೋ[ಧಿ] ಬಿಜೆಪಿಯಿಂದ ಗೆದ್ದಿದ್ದ ಲಕ್ಷ್ಮಿನಾರಾಯಣ ಕೇವ[ಲ] ಆರೇ ತಿಂಗಳಲ್ಲಿ ಇಡೀ ತುರುವೇಕೆರೆಗೆ ಕುಡಿಯು[ವ] ನೀರು ತಂದರು. ಅದರ ಶಂಕುಸ್ಥಾಪನೆಗೆಂದ[ು] ರಾಜ್ಯಪಾಲೆ ರಮಾದೇವಿಯವರನ್ನೇ ತುರುವೇಕೆರೆ[ಗೆ] ಕರೆಸಿದ್ದರು. ಆಗ ಕೇಂದ್ರ ಮಂತ್ರಿಯಾಗಿ[ದ್ದ] ಅನಂತ್‌ಕುಮಾರ್ ಹಿಡಿದು ಕೋಟಿಗಟ್ಟಲೆ ಫಂಡು ತಂದರು. ಮಿನಿ ವಿಧಾನಸೌಧ, ರಸ್ತೆ ಇತ್ಯಾ[ದಿ] 60 ಕೋಟಿಯ ಅಭಿವೃದ್ಧಿಯನ್ನು ತುರುವೇಕೆರೆ[ಗೆ] ತಂದ ಲಕ್ಷ್ಮಿನಾರಾಯಣ ಹೇಳಿಕೇಳಿ ಆಡಳಿತ ಪಕ್ಷದ ಶಾಸಕರಾಗಿರಲಿಲ್ಲ. ಅಭಿವೃದ್ಧಿಯ ದೃಷ್ಟಿಯಿಂದ ಪಕ್ಷ ತೊರೆದು ಕಾಂಗ್ರೆಸ್ಸಿಗೆ ಹಾರಲಿಲ್ಲ.

ಆನಂತರ ಶಾಸಕರಾದ ಎಂ.ಟಿ. ಕೃಷ್ಣಪ್ಪ ಏ[ತ] ನೀರಾವರಿಯನ್ನೇ ತಂದರು. ಕೋರ್ಟ್ ಕಟ್ಟಡ ಬಂತು. ಸ್ಟೇಡಿಯಂ, ಇಡೀ ತುರುವೇಕೆರೆಗೆ ಒಳಚರಂಡಿ ವ್ಯವಸ್ಥೆ, ಶಿಂಷಾನದಿಗೆ 1 ಕೋಟಿಯ ಸೇತುವೆ, ಹೊಸ ಬಸ್‌ಸ್ಟ್ಯಾಂಡ್, ಹೊಸ ಪ್ರವಾ[ಸಿ] ಮಂದಿರ, ಪಾಲಿಟೆಕ್ನಿಕ್-ಹೀಗೆ ಇನ್ನೂರೈವತ್ತು ಕೋಟಿಗೂ ದೊಡ್ಡ ಮೊತ್ತದ ಅಭಿವೃದ್ಧಿಯನ್ನು ತುರುವೇಕೆರೆಗೆ ತಂದರು.

ಇಪ್ಪತ್ತು ತಿಂಗಳು ಮಾತ್ರ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದು, ಬಿಟ್ಟರೆ ವಿಕ್ರಂತ[?] ಕಾಂಗ್ರೆಸ್ಸಿನ ಧರಂಸಿಂಗ್ ಆಳ್ವಿಕೆಯಿತ್ತು. ಇವರ್‍ಯಾರಿಗೂ ಅಡ್ಡಬಾರದ ಪಕ್ಷಭೇದ ಜಗ್ಗೇಶ್‌ಗೆ ಮಾತ್ರ ಹೇಗೆ ತೊಡಕಾಗಲು ಸಾಧ್ಯ?

ಕುಣಿಲಾರದವಳಿಗೆ ನೆಲ ಡೊಂಕು ಜಗ್ಗೇಶ್‌ಗೆ ದುಡ್ಡಿನ ಮಂಕು-ಇಷ್ಟೆಲ್ಲಾ ಮಾಡಿದವರನ್ನು ಸೋಲಿಸಿ ಏನೂ ಮಾಡದ ಜಗ್ಗೇಶನನ್ನು ಗೆಲ್ಲಿಸಿದ ಜನಕ್ಕೆ ಹೊಟ್ಟೆ ಉರಿಯದೇ ಇನ್ನೇನಾಗುತ್ತೆ?

ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ

ಅಧಿಕಾರದ ಅಮಲಿಗೆ ಬಿದ್ದು ಬಿಜೆಪಿಗೆ ಹಾರಿದ ಜಗ್ಗೇಶ್, ಆನಂದ್ ಅಸ್ನೋಟಿಕರ್, ಬಾಲಚಂದ್ರ ಜಾರಕಿಹೊಳಿ, ಶಿವನಗೌಡ ಇತ್ಯಾದಿಗಳೆಲ್ಲ ಸದ್ಯ ಯಡಿಯೂರಪ್ಪನವರ ಅಪ್ಪುಗೆ, ಸ್ವಾಗತ, ಗೌರವಗಳಿಂದ ಪುಳಕಿತರಾಗಿ ರೋಮಾಂಚನಗೊಂಡಿರಬಹುದು. ಆದರೆ ಚೆಡ್ಡಿಗಳ ಈ 'ಕೃತಕ' ಪ್ರೀತಿ, ಗೌರವ ಬಹಳ ದಿನ ಉಳಿಯುವುದಿಲ್ಲ. ಒಮ್ಮೆ ಮರುಚುನಾವಣೆಯಲ್ಲಿ ಇವರು ಆರಿಸಿಬಂದು ಹಂಡ್ರೆಡ್ ಪರ್ಸೆಂಟ್ ಕಾಟನ್ ಚೆಡ್ಡಿ ಧರಿಸುತ್ತಿದ್ದಂತೆ ಕಥೆ ಮುಗಿಯಿತು. ಬಾಯಲ್ಲಿ ಬೆಣ್ಣೆ ಮಾತಾಡುತ್ತಿದ್ದ ಚೆಡ್ಡಿಗಳು ಬಗಲಲ್ಲಿ ದೊಣ್ಣೆ ಹಿಡಿದಿದ್ದರೆಂದು ಪಕ್ಷಾಂತರಿ ಪಕ್ಷಿಗಳಿಗೆ ಅರಿವಾಗುತ್ತದೆ.

ಈ ಹಿಂಟ್ ಅನ್ನು ಮುಖ್ಯಮಂತ್ರಿ ಯಡಿಯೂರಪ್ಪ ಈಗಾಗಲೇ ನೀಡಿದ್ದಾರೆ ಕೂಡ. ಒಮ್ಮೆ ಪಕ್ಷಾಂತರಿಗಳು ನಮ್ಮ ಪಕ್ಷದ ಟಿಕೆಟ್‌ನಿಂದ ಗೆದ್ದು ಇಕ್ಕಳಕ್ಕೆ ಸಿಲುಕಲಿ, ಅವರ ಜಾಗ ಎಲ್ಲೆಂದು ತೋರಿಸುತ್ತೇವೆ. ಅಲ್ಲಿಯತನಕ ಸ್ವಲ್ಪ ಸಮಾಧಾನದಿಂದಿದ್ದು ಸಹಕರಿಸಿ ಎಂದು ಪಕ್ಷದ ಎಲ್ಲಾ ಅಸಂತುಷ್ಟ ಶಾಸಕರಿಗೆ ಯಡಿಯೂರಪ್ಪ ವಿನಂತಿಸುತ್ತಿದ್ದಾರಂತೆ. ಪಕ್ಷಾಂತರಿಗಳಿಗೆಂದೇ ನಡೆಯಲಿರುವ ಉಪಚುನಾವಣೆಯ ನಂತರ ಬಿಜೆಪಿ ಸಚಿವ ಸಂಪುಟ ಪುನರ್ರಚನೆಯಾಗುವುದು ನಿಶ್ಚಿತ ಮತ್ತು ಈ ಮೊದಲು ವಿಶ್ವಾಸಮತಕ್ಕೆ ಬೆಂಬಲ ಸೂಚಿಸಿ ಮಂತ್ರಿಗಳಾದ ಐವರು ಶಾಸಕರು ಮತ್ತು ಇತ್ತೀಚೆಗೆ ಬಿಜೆಪಿ ಸೇರಿದ ಜಗ್ಗೇಶ್ ಅಂಡ್ ಅದರ್ಸ್ ತಿಪ್ಪೆಗುಂಡಿಗೆ ಸೇರುವುದು ಖಚಿತ.

ಇನ್ನೇನು? ಮತದಾರರ ನೈಜ ಪ್ರೀತಿ, ಗೌರವ ತಿರಸ್ಕರಿಸಿ ಚೆಡ್ಡಿಗಳ ಆರ್ಟಿಫಿಷಿಯಲ್ ಪ್ರೀತಿ ಗೌರವ ಹಣದ ಥೈಲಿಗೆ ಬಾಯಿಬಿಟ್ಟವರಿಗೆ ಇದೇ ತಕ್ಕ ಶಾಸ್ತಿ

ಓಟು ಕೊಟ್ಟವನೇ ಬಕ್ರ

■ ರಾ. ಸೋಮನಾಥ್

ತಾನೊಬ್ಬ ಜನಪ್ರಿಯ ನಟ, ಗೌರವಾನ್ವಿತ ಶಾಸಕ ಎಂಬುದನ್ನೂ ಮರೆತು ಅದೂ ಒಂದು ಲಕ್ಷದ ಮಂತ್ಲಿಗೆ ಜೊಲ್ಲು ಸುರಿಸುತ್ತಾನೆಂದರೆ ಇನ್ನು ಜಗ್ಗೇಶ್ ತನ್ನನ್ನು ತಾನೇ ಗಣಿ ಕಳ್ಳರಿಗೆ ಮಾರಿಕೊಂಡಿದ್ದು ಯಾವ ಮಹಾ? ಇದು ಜಗ್ಗೇಶ್ ದುರಾಶೆ ಮತ್ತು ದುರ್ಬುದ್ಧಿಯಲ್ಲದೇ ಮತ್ತೇನಲ್ಲ, ಕಮಂಗಿ ಜಗ್ಗೇಶ್‌ನಿಗೆ ಕಾಸು ಇದ್ದೋನೆ ಬಾಸು, ಓಟು ಕೊಟ್ಟವನು ಮಾತ್ರ ಮಿಸ್ಟರ್ ಬಕ್ರ!



ಕಾಸು ಇದ್ದೋನೆ ಬಾಸು

ನವರಸ ನಾಯಕನ ಹತ್ತನೇ ಅವತಾರ



ಸ್ವಯಂಘೋಷಿತ ನವರಸ ನಾಯಕ ಜಗ್ಗೇಶ್ ಈಗ ರಾಜಕೀಯದಲ್ಲಿ ತನ್ನ ಹತ್ತನೇ ಅವತಾರವನ್ನು ಪ್ರದರ್ಶಿಸಿದ್ದಾರೆ. ಜಗ್ಗೇಶ್ ಪಕ್ಷಾಂತರ ಕಾಂಗ್ರೆ ನಾಯಕರಿಗೆ ಮಾತ್ರವಲ್ಲ, ಸ್ವತಃ ಬಿಜೆಪಿ ನಾಯಕರಿಗೂ ಅಚ್ಚರಿ ತಂದುಕೊಟ್ಟಿದೆ. ಯಾಕೆಂದರೆ ಬಿಜೆಪಿಯ ಪಕ್ಷಾಂತರಿಗಳ ಸೂತ್ರಧಾರ ರೆಡ್ಡಿ ಬ್ರದರ್ಸ್ ಲಿಸ್ಟಿನಲ್ಲಿ ಜಗ್ಗೇಶ್ ಹೆಸರು ಇರಲೇ ಇಲ್ಲ. ಬದಲಾಗಿ ಜಗ್ಗೇಶರಿಗೆ ಖಾಕಿ ಚೆಡ್ಡಿ ತೊಡಿಸುವಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದವರು ಅವರ ಸ್ವಜಾತಿ ಬಂಧು ಸಚಿವ ಅಶೋಕ್.

ಜಗ್ಗೇಶ್ ಪಕ್ಷಾಂತರದಿಂದ ರಟ್ಟಾಗಿರುವ ಗುಟ್ಟೆಂದರೆ ಬಿಜೆಪಿಯಲ್ಲಿ ವಿರೋಧ ಪಕ್ಷಗಳನ್ನು ಒಡೆಯುವ ತಂತ್ರದಲ್ಲಿ ಒಟ್ಟು ಮೂರು ಗುಂಪುಗಳು ಕಾರ್ಯಾಚರಣೆ ನಡೆಸುತ್ತಿವೆ. ಮೊದಲನೆಯದು ಕುರುಬ ನಾಯಕರಾದ ಈಶ್ವರಪ್ಪ ತಂಡ. ಎರಡನೆಯದು ಒಕ್ಕಲಿಗ ಯುವ ನೇತಾರ ಅಶೋಕ್ ಟೀಂ. ಹಾಗೂ ಕೊನೆಯದಾಗಿ ಹಿಂದುಳಿದ ವರ್ಗಗಳ ನಾಯಕರಾಗಿರುವ ಶ್ರೀರಾಮುಲು ಗ್ಯಾಂಗ್.

ಸಿದ್ದರಾಮಯ್ಯನವರ ಅನುಯಾಯಿಗಳಾದ ಕಡೂರಿನ ಶಾಸಕ ಕೃಷ್ಣಮೂರ್ತಿ ಮತ್ತು ಪಿರಿಯಾಪಟ್ಟಣದ ವೆಂಕಟೇಶ್ ಮೊದಲಾದವರನ್ನು ಬಿಜೆಪಿಗೆ ಸಿದ್ದು ನೇತೃತ್ವದಲ್ಲಿ ಕರೆತರುವುದು ಈಶ್ವರಪ್ಪನವರ ಗೇಂ ಪ್ಲಾನ್ ಆಗಿತ್ತು. ಸಿದ್ದು ಮತ್ತು ಅವರ ತಂಡ ಬಂದಿದ್ದೇ ಆದಲ್ಲಿ ಯಡ್ಡಿ ಸರ್ಕಾರವನ್ನು ಅಪಾಯದಿಂದ ಪಾರು ಮಾಡಿದ ಕೀರ್ತಿಯ ಜೊತೆಗೆ ಪಕ್ಷದಲ್ಲಿ ಕುರುಬರ ಸಂಖ್ಯೆಯನ್ನು ಹೆಚ್ಚಿಸಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವುದು, ಆ ಮುಖಾಂತರ ಪಕ್ಷದ ಮೇಲೆ ಹತೋಟಿ ಸಾಧಿಸುವುದು ಈಶ್ವರಪ್ಪನ ಚಿಂತನೆಯಾಗಿತ್ತು. ಈ ಕಾರಣಕ್ಕಾಗಿಯೇ ವಿರೋಧ ಪಕ್ಷವನ್ನು ಒಡೆಯಲು ನಾವು ಸಿದ್ಧ ಎಂದು ಈಶ್ವರಪ್ಪ ಆಗಾಗ್ಗೆ ಪುಂಗಿ ಊದುತ್ತಿದ್ದರು.

ಈಶ್ವರಪ್ಪನ ಈ ಪುಂಗಿ ಸದ್ದಿಗೆ ಎಚ್ಚೆತ್ತ ರೆಡ್ಡಿ ಬ್ರದರ್ಸ್ ಒಂದು ವೇಳೆ ಸಿದ್ದರಾಮಯ್ಯ ಪಕ್ಷಕ್ಕೆ ಬಂದರೆ ಹಿಂದುಳಿದ ವರ್ಗಕ್ಕೆ ಸೇರಿದ ತಮ್ಮನ್ನು ಯಾರೂ ಕ್ಯಾರೇ ಅನ್ನೋದಿಲ್ಲ ಎಂದು ತೀರ್ಮಾನಿಸಿದರು. ಹಾಗಾಗಿಯೇ ರಾತ್ರೋರಾತ್ರಿ ಮೂವರು ಶಾಸಕರನ್ನು ಬಿಜೆಪಿಗೆ ಪಕ್ಷಾಂತರ ಮಾಡಿಸಿ ಯಡಿಯೂರಪ್ಪನ ಪಾಲಿನ ಆಪತ್ಬಾಂಧವ ಎಂದೆನಿಸಿಕೊಂಡರು.

ಬಿಜೆಪಿಯಲ್ಲಿ ಹೀಗೆ ಹಿಂದುಳಿದ ಜನಾಂಗದ ನಾಯಕರ ನಡುವೆ ಒಂದು ರೀತಿಯ ಅಂತಃಕಲಹ ನಡೆಯುತ್ತಿದೆ. ಆದರೆ ಯಡಿಯೂರಪ್ಪನ ನಂತರ ಮುಖ್ಯಮಂತ್ರಿ ಗದ್ದುಗೆಯಲ್ಲಿ ಯಾರು ಕುಳಿತುಕೊಳ್ಳಬೇಕೆಂಬ ಬಗ್ಗೆ ಈ ನಾಯಕರುಗಳಿಗೆ ಆಸಕ್ತಿಯೇ ವಿನಃ ಯಡ್ಡಿಯ ಕೈ ಬಲಪಡಿಸುವುದಲ್ಲ.

ಇವರಿಬ್ಬರ ಕಾರ್ಯಾಚರಣೆಯ ನಡುವೆಯೇ ಒಕ್ಕಲಿಗ ನಾಯಕರಾದ ಅಶೋಕ್ ಕೂಡಾ ಪಕ್ಷದಲ್ಲಿ ತಮ್ಮ ಬಲವನ್ನು ವೃದ್ಧಿಸಿಕೊಳ್ಳಲು ಹಲವಾರು ಸ್ಕೀಂಗಳನ್ನು ಹಾಕುತ್ತಿದ್ದರು. ಆತನ ಗಾಡ್‌ಫಾದರ್ ಅನಂತ್‌ಕುಮಾರರ ಸೂಚನೆ ಮೇರೆಗೆ ಅಶೋಕ್ ಈ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಯಾಕೆಂದರೆ ರಾಜಕೀಯವಾಗಿ ಒಕ್ಕಲಿಗರು ಮತ್ತು ಬ್ರಾಹ್ಮಣರು ಒಟ್ಟು ಸೇರಿದರೆ ಮುಂದೊಂದು ದಿನ ಅಧಿಕಾರದ ಗದ್ದುಗೆ ಏರಲು ಸುಲಭವಾಗಬಹುದು ಎಂಬುದು ಅಶೋಕ್ ಹಿಂದಿರುವ ಸೂತ್ರಧಾರ ಅನಂತ್‌ಕುಮಾರರ ಲೆಕ್ಕಾಚಾರ. ಹೀಗಾಗಿ ಇಲ್ಲಿ ಅಶೋಕ್ ಬೀಸಿದ ಬಲೆಗೆ ಮೊದಲು ಸಿಕ್ಕಿದ ಮಿಕ ಜಗ್ಗೇಶ್.

ಇದಕ್ಕೆ ತಕ್ಕಂತೆ ಜಗ್ಗೇಶ್ ಕೂಡ ಕಾಂಗ್ರೆಸ್ ನಾಯಕರ ವಿರುದ್ಧ ಕೆಂಡಕಾರುತ್ತಿದ್ದರು. ಮೊದಲನೆ ಅಸೆಂಬ್ಲಿ ಸೆಷನ್ ಆರಂಭವಾದಾಗ ವಿಧಾನಸಭೆಯ ಮೊಗಸಾಲೆಯಲ್ಲಿ ಓಡಾಡುತ್ತಿದ್ದ ಜಗ್ಗೇಶ್ ತನ್ನ 'ಸಂಸ್ಕೃತ ಭಾಷೆ'ಯಲ್ಲಿ ಕಾಂಗ್ರೆ ನಾಯಕರನ್ನು ರಾಜಾರೋಷವಾಗಿ ಹೀಯಾಳಿಸುತ್ತಿದ್ದರು. "ನನಗೆ ಇಲ್ಲಿಯ ಯಾವ ನಾಯಕನೂ ಟಿಕೆಟ್ ಕೊಡಬೇಕೆಂದು ಶಿಫಾರಸ್ಸು ಮಾಡಿಲ್ಲ. ನನ್ನ ಪತ್ನಿಯ ಮಾವ ತಮಿಳುನಾಡಿನಲ್ಲಿ ದೊಡ್ಡ ಕವಿ, ಮೇಧಾವಿ ಮತ್ತು ರಾಜಕೀಯ ಚಿಂತಕ. ಅವರು ಮುಖ್ಯಮಂತ್ರಿ ಕರುಣಾನಿಧಿ ಅವರಿಗೆ ನನ್ನ ಬಗ್ಗೆ ಶಿಫಾರಸ್ಸು ಮಾಡಿ, ಕರುಣಾನಿಧಿ ಮೇಡಂ ಗಾಂಧಿಗೆ ಫೋನು ಮಾಡಿ ನನಗೆ ಟಿಕೆಟ್ ಕೊಡಿಸಿದ್ದರು" ಎಂದೆಲ್ಲಾ ಹೇಳಿಕೊಂಡಿದ್ದರು.

ಅದೆಷ್ಟು ಸುಳ್ಳೋ, ನಿಜವ್ರೋ, ಆದರೆ ಜಗ್ಗೇಶ್ ಬಿಜೆಪಿ ಹಾರಲು ಸಿದ್ಧರಾಗುತ್ತಿದ್ದಂತೆ ಅವರಿಗೊಂದು ಶಾಕ್ ಕಾದಿತ್ತು. ತನಗಿಂತ ಮೊದಲು ಪಕ್ಷಾಂತರ ಮಾಡಿದ ಮೂವರು ಸಚಿವ ಪದವಿಗಳನ್ನು ಪಡೆದುದನ್ನು ಕಂಡು ಜಗ್ಗೇಶ್ ದಂಗಾದರು. ಇನ್ನು ಮಂತ್ರಿಯಾಗುವ ಅವಕಾಶವಂತೂ ಇಲ್ಲವೇ ಇಲ್ಲ ಎಂದು ಗೊತ್ತಾದ ತಕ್ಷಣ ಜಗ್ಗೇಶ್‌ಗೆ ಏನು ಮಾಡಬೇಕೆಂದು ತೋಚಲೇ ಇಲ್ಲ. ಅಷ್ಟೇ ಅಲ್ಲದೆ, ತನಗೆ ಬೇಕಾದಷ್ಟು ಶಾಸಕರು ದೊರೆತ ನಂತರ ಬಿಜೆಪಿಯ ನಾಯಕರು ಕೂಡಾ ವಲಸಿಗರ ಬಗ್ಗೆ ಅಷ್ಟೊಂದು ಆಸಕ್ತಿ ತೋರಿಸದೇ ನಿರ್ಲಕ್ಷ್ಯ ಪ್ರದರ್ಶಿಸಿದರು. ಆದರೂ ಜಗ್ಗೇಶ್ ಸಚಿವ ಅಶೋಕ್ ಮುಖಾಂತರ ಬಿಜೆಪಿ ಸೇರುವಂತಹ ಅನಿವಾರ್ಯ ವಾತಾವರಣ ಸೃಷ್ಟಿಯಾಯಿತು.

ಜಗ್ಗೇಶ್ ಕಾಂಗ್ರೆಗೆ ಟಾಟಾ ಹೇಳಲಿದ್ದಾರೆ ಎಂದು ಗೊತ್ತಾದಾಗ ಅವರ ಮನೆ ಮುಂದೆ ಹಲವರು ಧರಣಿ ಪ್ರತಿಭಟನೆ ನಡೆಸಿದರು. ಜಗ್ಗೇಶ್ ಎಲ್ಲಿದ್ದರೂ ಅವರನ್ನು ಎತ್ತಾಕಿಕೊಂಡು ಬನ್ನಿ ಎಂದು ಡಿ.ಕೆ.ಶಿವಕುಮಾರ್ ತಮ್ಮ ಅನುಯಾಯಿಗಳಿಗೆ ಫತ್ವಾ ಹೊರಡಿಸಿದ್ದರು. ಅದರೆ ಜಗ್ಗೇಶ್ ಅಷ್ಟೊತ್ತಿಗೆ ಕಾಂಗ್ರೆಸ್‌ಗೆ 'ಕೈ' ಕೊಟ್ಟಿದ್ದರು.

ಕಾಂಗ್ರೆಸ್‌ನವರು ಜಗ್ಗೇಶ್‌ಗಾಗಿ ಹುಡುಕಾಟ ನಡೆಸುತ್ತಿದ್ದಾಗ ಅವರು ತಮ್ಮ ತಂಗಿ ಮನೆಯಲ್ಲಿ ಪೊಲೀಸರ ಸರ್ಪಗಾವಲಿನಲ್ಲಿ ರಕ್ಷಣೆ ಪಡೆದು ಆರಾಮವಾಗಿ ಬಿರಿಯಾನಿ ಊಟ ಮಾಡುತ್ತಿದ್ದ ಸುದ್ದಿಯೂ ಕೇಳಿಬಂತು. ಈ ಡ್ರಾಮಾದ ಕ್ಲೈಮ್ಯಾಕ್ಸ್ ಎಂಬಂತೆ ಕೊನೆಗೆ ಜಗ್ಗೇಶ್ ಮಂತ್ರಾಲಯಕ್ಕೆ ಹೋಗಿ ರಾಯರ ಅನುಗ್ರಹ ಪಡೆದು ಮರುದಿನ ರಾಮನ ಹಿಂಬಾಲಕರಾದ ಮಂಗಗಳ ಪಕ್ಷಕ್ಕೆ ಸೇರ್ಪಡೆಗೊಂಡರು.

ಆದರೆ ಜಗ್ಗೇಶ್‌ರ ಆಗಮನಕ್ಕೆ ಬಿಜೆಪಿ ನಾಯಕರು ತೀರಾ ಸಾಧಾರಣವಾಗಿ ಪ್ರತಿಕ್ರಿಯಿಸಿದರು. ಉದಾಹರಣೆಗೆ ಇತರೆ ಶಾಸಕರನ್ನು ಪಕ್ಷದ ಅಧ್ಯಕ್ಷ ಸದಾನಂದ ಗೌಡರು ಶಾಲು ಹೊದಿಸಿ ಸಿಹಿ ತಿನಿಸಿ ಅಧಿಕೃತವಾಗಿ ಸ್ವಾಗತಿಸಿದರೆ ಜಗ್ಗೇಶ್ ಪಾಲಿಗೆ ಅಂತಹ ಸ್ವಾಗತ ಸಿಗಲೇ ಇಲ್ಲ. ಮಂತ್ರಾಲಯದಿಂದ ಬಂದ ನಂತರ ಸಂಪುಟ ವಿಸ್ತರಣೆಯ ಮೊದಲು ಅಶೋಕ್ ವಿಧಾನಸಭೆಗೆ ಜಗ್ಗೇಶರನ್ನು ಕರೆತಂದು ಯಡ್ಯೂರಪ್ಪನವರಿಗೆ ಹಸ್ತಲಾಘವ ಮಾಡಿಸಿ ಪಕ್ಷಕ್ಕೆ ಸೇರಿಸಿಕೊಂಡರು. ಒಂದು ರೀತಿಯಲ್ಲಿ ಇದು ಲೇಟ್ ಕಮರ್ ಜಗ್ಗೇಶ್‌ಗೆ ಸಿಕ್ಕಿದ ನೀರಸ ಸ್ವಾಗತ ಎನ್ನಬೇಕು.

ಜಗ್ಗೇಶ್ ಈಗ ತಾನು ಲೋಕಸಭಾ ಚುನಾವಣೆಗೆ ನಿಲ್ಲುತ್ತೇನೆಂದು ಹೇಳುತ್ತಿದ್ದಾರೆ. ಆದರೆ ಅವರಿಗೆ ಬಿಜೆಪಿ ಟಿಕೆಟ್ ನೀಡಿದ್ದೇ ಆದರೆ ತುಮಕೂರು ಕ್ಷೇತ್ರದಿಂದ ಜಗ್ಗೇಶ್ ಆಯ್ಕೆಯಾಗಲು ಸಾಧ್ಯವೇ? ಯಾಕೆಂದರೆ ತುಮಕೂರು ಕ್ಷೇತ್ರವನ್ನು ಕಳೆದ ಇಪ್ಪತ್ತೈದು ವರ್ಷಗಳಿಂದ ಲಿಂಗಾಯತರೇ ಪ್ರತಿನಿಧಿಸುತ್ತಾ ಬಂದಿದ್ದಾರೆ. ಉದಾಹರಣೆಗೆ: ಬಿಜೆಪಿಯ ಮಲ್ಲಿಕಾರ್ಜುನ್ ಮತ್ತು ಕಾಂಗ್ರೆಸ ಬಸವರಾಜ್ ಇಲ್ಲಿಂದ ಸಂಸದರಾಗಿದ್ದಾರೆ. ಮಧ್ಯದಲ್ಲೊಮ್ಮೆ ಸಿದ್ದರಾಜು ಬಂದು ಹೋಗಿದ್ದು ಬಿಟ್ಟರೆ ಉಳಿದಂತೆ ಈ ಕ್ಷೇತ್ರದಲ್ಲಿ ಎಲ್ಲವೂ ಲಿಂಗಮಯ. ಲಿಂಗಾಯತ ರಾಜಕೀಯ ನಾಯಕರು, ಲಿಂಗಾಯತ ಧಾರ್ಮಿಕ ನಾಯಕರು, ಲಿಂಗಾಯತ ಮಠಾಧೀಶರುಗಳೇ ತುಮಕೂರನ್ನು ಆಳುತ್ತಿರುವ ಪರಿಸ್ಥಿತಿಯಲ್ಲಿ ಒಕ್ಕಲಿಗ ಸಮುದಾಯದ ಜಗ್ಗೇಶ್ ಲೋಕಸಭೆಗೆ ಆಯ್ಕೆಯಾಗುತ್ತಾರೆಯೇ?

■ ಸದಾಶಿವ ಶೆಣೈ

ಜಾರಕಿಹೊಳಿಯ ಕ್ಷೇತ್ರ ಕಾಳಜಿಯೆಂದರೆ....?

ಅರಬಾವಿ ಕ್ಷೇತ್ರದ ಒಳಿತಿಗೆಂದೇ ನಾನು ಬಿಜೆಪಿ ಸೇರುತ್ತಿದ್ದೇನೆ ಎಂಬುದು ತಾನೇ ಬಾಲಚಂದ್ರ ಜಾರಕಿಹೋಳಿಯ ಕಳ್ಳನೆಪ?

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಷ್ಟೂ ದಿನ ಸಮಾಜ ಕಲ್ಯಾಣ ಮಂತ್ರಿಯಾಗಿದ್ದ ಬಾಲಚಂದ್ರ ಜಾರಕಿಹೋಳಿ ಮನಸ್ಸು ಮಾಡಿದ್ದರೆ ಕೇವಲ ಅರಬಾವಿಯೇ ಏಕೆ ಇಡೀ ಗೋಕಾಕ್ ತಾಲ್ಲೂಕನ್ನೇ ಉದ್ಧಾರ ಮಾಡಬಹುದಿತ್ತು. ಅಣ್ಣ ಸತೀಶ್ ಜಾರಕಿಹೋಳಿಯ ವಿರುದ್ಧ ಜಿದ್ದಿಗೆ ಬಿದ್ದ ಕುಮಾರಸ್ವಾಮಿ ಬಾಲಚಂದ್ರ ಹೇಳಿದ್ದಕ್ಕೆಲ್ಲ ತಲೆ ಅಲ್ಲಾಡಿಸುತ್ತಿದ್ದರು. ಆದರೆ ಬಾಲಚಂದ್ರರ ಆಸಕ್ತಿ ಮತ್ತು ಕಾಳಜಿ ವಿಪರೀತವಾಗಿದ್ದದ್ದು ಸುಶೀಲಾ ಶರ್ಮಾ ಎಂಬ ದುಷ್ಟ ಹೆಂಗಸು ಮತ್ತು ಆಕೆಯ ಮಗಳು ಸುನೀತಾ ಶರ್ಮಾ ಎಂಬ ಸುಂದರಿಯ ಬಗ್ಗೆಯೇ.

ಇದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಎಂ.ಜಿ. ರಸ್ತೆಗೆ ಹೊಂದಿಕೊಂಡಂತಿರುವ ಲ್ಯಾವೆಲ್ಲಿ ರಸ್ತೆಯ ರಾಮಾ ಹೋಟೆಲ್ ಪಕ್ಕದಲ್ಲೇ ಗೋಲ್ಡನ್ ಆರ್ಕಿಡ್ ಎಂಬ ಐಷಾರಾಮಿ ಅಪಾರ್ಟ್‌ಮೆಂಟಿದೆ. ಸಮಾಜ ಕಲ್ಯಾಣ ಮಂತ್ರಿಯಾಗಿದ್ದಷ್ಟೂ ಕಾಲ ಕನಿಷ್ಠ ವಾರಕ್ಕೊಮ್ಮೆ ಯಾದರೂ ಗೋಲ್ಡನ್ ಆರ್ಕಿಡ್‌ನ ಸುಶೀಲಾ ಶರ್ಮಾಳ ಫ್ಲ್ಯಾಟಿಗೆ ಬಾಲಚಂದ್ರ ಜಾರಕಿಹೋಳಿ ಬಂದುಹೋಗುತ್ತಿದ್ದ ಬಗ್ಗೆ ದಾಖಲೆಗಳಿವೆ.

ಇದೇ ಸುಶೀಲಾ ಶರ್ಮಾ ಎಂಬಾಕೆಯೇ ನಿಂತು ಬಾಲಚಂದ್ರರಿಗೆ ಡಾಲರ್ಸ್ ಕಾಲನಿಯ ಸುಧೀರ್ ವೋರಾ ಎಂಬಾತನ 50x80 ಬಂಗಲೆಯನ್ನು ಖರೀದಿಸಿಕೊಡುತ್ತಾಳೆ. ಬಾಲಚಂದ್ರರ ಹೆಸರಲ್ಲೇ ಆಕೆ ಖರೀದಿಸಿದ 2006ರ ಮಾರ್ಚ್ 21ರ ದಿನಾಂಕದ ದಾಖಲಾತಿಗಳು, ಆತನ ಮತ್ತೊಬ್ಬ ಮಂತ್ರಿಯಾಗಿದ್ದ ಡಿ.ಟಿ. ಜಯಕುಮಾರ್ ಬಾಡಿಗೆಗಿದ್ದ ಆ ಬಂಗಲೆಯ ಸೇಲ್ ಡೀಡ್‌ಗೆ ಆಕೆಯೇ ಸಾಕ್ಷಿದಾರಳಾಗಿ ಸಹಿ ಹಾಕಿದ್ದೂ, ದಾಖಲೆಯಲ್ಲಿದೆ.



ಓರ್ವ ಸಮಾಜ ಕಲ್ಯಾಣ ಮಂತ್ರಿಯಾಗಿ ಬಾಲಚಂದ್ರ 2007ರ ಜನವರಿ 10ರಂದು ಬೆಂಗಳೂರಿನ ವೆಸ್ಟೆಂಡ್ ಹೋಟೆಲಿನಲ್ಲಿ ಸುಶೀಲಾಶರ್ಮಾಳ ಮಗಳು ಸುನೀತಾ ಜೊತೆ ಸಂಜೆತನಕ ಯಾವ ಗಹನ ವಿಷಯದ ಬಗ್ಗೆ ಚರ್ಚಿಸುತ್ತಿದ್ದರೋ? ಅಥವಾ ಅರಬಾವಿಯ ಅಭಿವೃದ್ಧಿಯ ಬಗ್ಗೆ ಸಿಕ್ಕಾಪಟ್ಟೆ ತಲೆಕೆಟ್ಟು ವೆಸ್ಟೆಂಡ್ ಹೋಟೆಲಿನಲ್ಲಿ ವಿಚಾರ ಮಂಥನ ನಡೆಸಿರಬಹುದೆ?

ಕಳೆದ ಬಾರಿಯ ಎಮ್ಮೆಲ್ಲೇಗಿರಿ, ಅಚಾನಕ್ಕಾಗಿ ಸಿಕ್ಕ ಮಂತ್ರಿಗಿರಿಯಿಂದ ಅರಬಾವಿ ಅಭಿವೃದ್ಧಿಯಾಯಿತೋ ಇಲ್ಲವೋ; ಆದರೆ ಈ ಅಮ್ಮ ಮತ್ತು ಮಗಳು ಕುಬೇರರಾಗಿದ್ದಾರೆ. ಚಿಕ್ಕಬಳ್ಳಾಪುರದ ಸಮೀಪದ ಬಳಜಿಗ ಪಡೆ ಗ್ರಾಮದ ಸ.ಸಂ. ಒಂದರಿಂದ ಒಂಭತ್ತರ ತನಕದ ಸರಿಸುಮಾರು 84 ಎಕರೆ ಕೃಷಿ ಭೂಮಿಯನ್ನು ಸುಶೀಲಾ ಶರ್ಮಾ 2005ರ ಸೆಪ್ಟೆಂಬರ್ 14ರಂದು ಖರೀದಿಸುತ್ತಾಳೆ. ಆಕೆಗೆಂದೇ ಬಾಲಚಂದ್ರ ತಮ್ಮ ಕಾರು ಕೊಡುತ್ತಾರೆ. ಮೂಳಗಾಳದಲ್ಲಿ ಒಂದು ಮನೆ, ಜಯಮಹಲ್‌ನಲ್ಲಿ ಮತ್ತೊಂದು ಬಂಗಲೆ ಹೀಗೆ ಕೋಟಿಗಟ್ಟಲೇ ಆಸ್ತಿವಂತರಾದ ಸುಶೀಲಾ ಮತ್ತು ಸುನೀತಾ ಶರ್ಮಾ ಮಂತ್ರಿವರ್ಯರನ್ನು ಒಬೇರಾಯ್ ಹೋಟೆಲಿಗೂ ಕರೆಸಿಕೊಳ್ಳುತ್ತಾರೆ. ಪದೇಪದೇ ಮುಂಬಯಿಗೂ ಹೋಗಿಬರುತ್ತಾರೆ.

ಇದರರ್ಥ ಬಾಲಚಂದ್ರ ಮಂತ್ರಿಯಾಗಿದ್ದಷ್ಟೂ ಕಾಲ ಹೆಚ್ಚು ಸಮಯ ಕಳೆದಿದ್ದು ಮತ್ತು ಹೆಚ್ಚು ಉದ್ಧಾರ ಮಾಡಿದ್ದು ಈ ತಾಯಿಮಗಳನ್ನೆ. ಅಷ್ಟಕ್ಕೂ ಈ ಸುಶೀಲಾಶರ್ಮಾ ಮತ್ತು ಮಗಳು ಸುನೀತಾ ಶರ್ಮಾ ಯಾರು ಅಂತ ಕೆದಕಿದರೆ ಅದೊಂದು ವಿಚಿತ್ರ ಕತೆ. ಮೂಲತಃ ಮುಂಬಯಿಯ ಸುಶೀಲಾ ಶರ್ಮಳ ವಿರುದ್ಧ ಮುಂಬಯಿ, ದೆಹಲಿ, ಪುಣೆಯ ಪೊಲೀಸ್ ಠಾಣೆಗಳಲ್ಲಿ ಬೇಕಾಬಿಟ್ಟಿ ಕೇಸುಗಳಿವೆ. ಬಹುಪಾಲು ಚೀಟಿಂಗ್ ಕೇಸುಗಳೆ. ಪೊಲೀಸ್ ಕಾಟದಿಂದ ಇಸವಿ 2000ರ ಹೊತ್ತಿಗೆ ಬೆಂಗಳೂರಿಗೆ ವಲಸೆ ಬಂದ ಸುಶೀಲಾ ಶರ್ಮಾ ಇಲ್ಲೂ ಇದೇ ದಂಧೆ ಮುಂದುವರಿಸುತ್ತಾಳೆ. ಕಾಶ್ಮೀರದ ಲ್ಯಾಂಡ್ ಡೀಲರ್ ಒಬ್ಬನಿಗೆ ತನ್ನ ಚಿಕ್ಕಬಳ್ಳಾಪುರದ ಜಮೀನು ತೋರಿಸಿ ಒಂದೂವರೆ ಕೋಟಿ, ಜಯಮಹಲ್‌ನ ಬಂಗಲೆ ಖರೀದಿಯ ನೆಪದಲ್ಲಿ ಎನ್ನಾರೈ ಒಬ್ಬಳಿಗೆ ಆರು ಕೋಟಿ, ತನ್ನ ಖಾಸಾ ಅಣ್ಣ ರಾಜ್‌ಕುಮಾರ್‌ಗೆ ಐವತ್ತು ಲಕ್ಷ –ಹೀಗೆ ಕಬ್ಬನ್ ಪಾರ್ಕ್, ಹೈಗ್ರೌಂಡ್ಸ್, ಅಲಸೂರು ಗೇಟ್ ಪೊಲೀಸ್ ಠಾಣೆಗಳಲ್ಲಿ ಈಕೆಯ ವಿರುದ್ಧ ವಂಚನೆ ಕೇಸುಗಳು ದಾಖಲಾಗಿವೆ.





ತೀರ ಇತ್ತೀಚೆಗೆ ಯಾರೋ ರಿಯಲ್ ಎಸ್ಟೇಟ್ ದಂಧೆಯ ಯುವಕನೊಬ್ಬ ತನ್ನ ಮಗಳನ್ನು ಮದುವೆಯಾಗಿದ್ದಾನೆಂದು ಟೀವಿ 9 ವರದಿಗಾರರನ್ನು ದಾರಿ ತಪ್ಪಿಸಿ ಸುದ್ದಿಯಾದ ತಾಯಿ ಮಗಳಿಗೂ ಮಂತ್ರಿ ಬಾಲಚಂದ್ರ ಜಾರಕಿಹೋಳಿಗೂ ಇರುವ ಸಂಬಂಧದ ಬಗ್ಗೆ ಬುಟ್ಟಿಗೆ ಬಿದ್ದಿದ್ದ ಆ ಹುಡುಗನೇ ಟೀವಿ ನೈನ್‌ನ ನೇರ ಪ್ರಸಾರದಲ್ಲಿ ಆರೋಪಿಸಿಬಿಟ್ಟ!


ಈಗ ಬಾಲಚಂದ್ರ ಜಾರಕಿಹೋಳಿ ಅರಬಾವಿಯ ಅಭಿವೃದ್ಧಿಗೆಂದೇ ಬಿಜೆಪಿ ಸೇರುತ್ತಿದ್ದೇನೆಂದು ಗಿಣಿಪಾಠ ಒಪ್ಪಿಸುತ್ತಾರೆ. ಗಣಿ ರೆಡ್ಡಿಗಳ ಕೃಪೆಯಿಂದ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆ ಖಾತೆಯ ಮಂತ್ರಿಗಿರಿಯೂ ದಕ್ಕಿದೆ. ಇವರ ಜೊತೆಗೇ ದೇವದುರ್ಗದ ಶಿವನಗೌಡ ನಾಯಕನೂ ಜೆಡಿಎಸ್ ತೊರೆದು ಗ್ರಂಥಾಲಯ ಮಂತ್ರಿಯಾಗಿದ್ದಾರೆ. ಈತ ಜಾರಕಿಹೋಳಿಯ ರಕ್ತಸಂಬಂಧಿ. ಒಟ್ಟೊಟ್ಟಿಗೇ ಬಿಜೆಪಿ ಬುಟ್ಟಿಗೆ ಬಿದ್ದಿದ್ದಾರೆ. ತಂತಮ್ಮ ಕ್ಷೇತ್ರದ ಅಭಿವೃದ್ಧಿಗೋಸ್ಕರ ಎನ್ನುತ್ತಿದ್ದಾರೆ. ಕ್ಷೇತ್ರ ಅಭಿವೃದ್ಧಿಯಾಗದೇ ಹೋದರೂ ಅವರ ಅಭಿವೃದ್ಧಿಯಾಗುವ ಬಗ್ಗೆ ಯಾರಿಗೂ ಗುಮಾನಿಯಿಲ್ಲ.

ಪ್ರಶ್ನೆಯೆಂದರೆ ಇವತ್ತು ಅರಬಾವಿಯ ಅಭಿವೃದ್ಧಿಯ ಬಗ್ಗೆ ಮಾತಾಡುವ ಬಾಲಚಂದ್ರ ಜಾರಕಿಹೋಳಿ ಬೆಂಗಳೂರಿನ ಈ ತಾಯಿ ಮಗಳಿಗಾಗಿ ವ್ಯಯಿಸಿದ ಸಮಯದ ಒಂದು ಪರ್ಸೆಂಟನ್ನಾದರೂ ತಮ್ಮ ಕ್ಷೇತ್ರಕ್ಕೆ ಮುಡಿಪಿಟ್ಟಿದ್ದರೆ? ತಮ್ಮದೇ ಆಳ್ವಿಕೆಯ ಘಟಪ್ರಭಾ ಸಕ್ಕರೆ ಕಾರ್ಖಾನೆ ದಿವಾಳಿಯೆದ್ದಿದೆ. ಅದರ 42 ಕೋಟಿ ಸಾಲ ತೀರಿಸಲಾಗದೇ ಬಾಲಚಂದ್ರ ಒಡಹುಟ್ಟಿದ ಅಣ್ಣ ಸತೀಶ್ ಜಾರಕಿಹೋಳಿಯ ವಿರುದ್ಧ ಕಿಡಿಕಾರುತ್ತಾರೆ. ಘಟಪ್ರಭಾ ಸಕ್ಕರೆ ಕಾರ್ಖಾನೆ ದಿವಾಳಿಯಾಗುವುದಕ್ಕೂ ಏನೂ ಇಲ್ಲದ ಸುಶೀಲಾ ಶರ್ಮಾ ಎಂಬಾಕೆ ಏಕಾಏಕಿ ಐವತ್ತು ಕೋಟಿಯ ಒಡತಿಯಾಗುವುದಕ್ಕೂ ಸಂಬಂಧವಿದೆಯೇ?

ಘಟಪ್ರಭಾ ಸಕ್ಕರೆ ಕಾರ್ಖಾನೆಯ ಬಡರೈತರ ಸೊತ್ತನ್ನೆಲ್ಲ ಬೆಂಗಳೂರಿನ ದುಷ್ಟ ಹೆಂಗಸರ ಮಡಿಲಿಗೆ ಸುರಿದ ಮಂತ್ರಿ ಬಾಲಚಂದ್ರರ ಬಣ್ಣ ಬಯಲಾಗುವ ಕಾಲ ದೂರವಿಲ್ಲ. ■

ಹಾವೇರಿ ಲೋಕಾಯುಕ್ತ ರೇಡ್

ಉದಾಸಿ ಅಂಗಳದ ಬದ್ಮಾಶ್ ಬಳ್ಳಾರಿ ಟ್ರ್ಯಾಪ್!





ಹಾವೇರಿ ಜಿಲ್ಲೆಯ ಚೆಡ್ಡಿ ಚತುರರ ಆರಾಧ್ಯ ದೈವ ಮಂತ್ರಿ ಉದಾಸಿಯ ಅಂಗಳದಿಂದ ರಣ ಹಸಿವಿನ ಬಕಾಸುರನೊಬ್ಬ ಎದ್ದು ನಡೆದಿದ್ದಾನೆ. ನಾಮಕಾವಸ್ತೆ ಲೋಕೋಪಯೋಗಿ ಇಂಜಿನಿಯರ್ ಚೇರ್ ಮೇಲೆ ಕುಳಿತು ಲಲ್ಲೆ ಹೊಡೆಯುತ್ತಿದ್ದ ಭ್ರಷ್ಟ ಬೀಜಾಸುರ ಸಿ.ಆರ್. ಬಳ್ಳಾರಿ ತನ್ನ ಅಧಿಕಾರದ ಅವಧಿಯುದ್ದಕ್ಕೂ ಉದಾಸಿ ಮನೆಯ ಕಸಬರಿಗೆಯಾಗಿದ್ದವನು. ಮೊನ್ನೆಯ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ದೇವೇಗೌಡರ ಹೊರೆಹೊತ್ತ ಮಹಿಳೆಯ ಸೆರಗು ಹಿಡಿಯಲು ಹೋಗಿದ್ದಕ್ಕೆ ಉದಾಸಿಯೊಂದಿಗಿದ್ದ ಇವನ ಬಹುದಿನದ ನಂಟು ಮುರಿದುಬಿದ್ದಿತ್ತು. ಉದಾಸಿಯೊಂದಿಗಿನ ಜಗಳದ ಮುಂದುವರಿದ ಭಾಗವಾಗಿ ಈಗ ಈತ ಜನರ ಮುಂದೆ ಬೆತ್ತಲಾಗಿ ನಿಂತು ಬೆಲೆ ತೆರಬೇಕಾಗಿ ಬಂದಿದೆ.

ಮೇಲುನೋಟಕ್ಕೆ ಲೋಕೋಪಯೋಗಿ ಇಂಜಿನಿಯರ್‌ಗೆ ಇರಬೇಕಾದ ಎಲ್ಲ ಲಕ್ಷಣಗಳೂ ಇವನಲ್ಲಿದ್ದರೂ ಅಂತರಾಳದಲ್ಲಿ ಈತ ಸತ್ತ ಹೆಣದ ರಕ್ತ ಹೀರುವ ರಣಹದ್ದುಗಳ ಜಾಯಮಾನಕ್ಕೆ ಸೇರಿದವನು. ಹಾಗೆ ನೋಡಿದರೆ ಹಾವೇರಿಯಲ್ಲಿ ಸಿ.ಆರ್.ಬಳ್ಳಾರಿ ನಡೆಸಿದ ಎಲ್ಲ ಭಾನಗಡಿಗಳಿಗೆ ಬ್ರಹ್ಮಾಂಡ ಭ್ರಷ್ಟ ಉದಾಸಿಯ ಕೃಪಾಕಟಾಕ್ಷವಿತ್ತೆನ್ನುವುದು ಸುಳ್ಳೇನಲ್ಲ. ಆದರೆ, ಯಾವಾಗ ಸಿ.ಆರ್. ಬಳ್ಳಾರಿ ಅಸೆಂಬ್ಲಿ ಚುನಾವಣೆಯಲ್ಲಿ ಜೆಡಿಎಸ್ ಕ್ಯಾಂಡಿಡೇಟ್ ಆಗಲು ಓಡಾಡಿದನೋ ಅವತ್ತೇ ಉದಾಸಿ ಗ್ಯಾಂಗ್ ಆತನಿಗೆ ಚಟ್ಟ ಕಟ್ಟಲು ತೀರ್ಮಾನಿಸಲಾಗಿತ್ತು. ಕೊನೆಗೆ ಜೆಡಿಎಸ್ ಟಿಕೆಟ್ ಕೈ ತಪ್ಪಿ ಅದು ತನ್ನ ಸಂಬಂಧಿಕ ಬ್ಯಾಡಗಿಯ ಪಾಲಾಗಿದ್ದರಿಂದ ಅತ್ತ ಜೆಡಿಎಸ್‌ನಲ್ಲೂ ಒಳ್ಳೆಯ ಸ್ಥಾನ ಸಿಗಲಿಲ್ಲ, ಇತ್ತ ಉದಾಸಿಯೊಂದಿಗೂ ವಿಶ್ವಾಸ ಕಾಪಾಡಿಕೊಳ್ಳಲಿಲ್ಲ ಎಂಬಂತ ತ್ರಿಶಂಕು ಸ್ಥಿತಿಗೆ ಬಳ್ಳಾರಿ ತಲುಪಿದ್ದ. ಇದೆಲ್ಲದರ ಪರಿಣಾಮವಾಗಿಯೇ ಆತನ ಏಳು ಸುತ್ತಿನಕೋಟೆಯಂತಿರುವ ಬಳ್ಳಾರಿಯ ಐಷಾರಾಮಿ ಬಂಗಲೆಗೆ ಮೊನ್ನೆ ಲೋಕಾಯುಕ್ತರು ಕಾಲಿಟ್ಟದ್ದಾರೆ. ಇದೆಲ್ಲ ಉದಾಸಿಯ ಮಾಸ್ಟರ್ ಪ್ಲಾನ್ ಎಂಬುದರಲ್ಲಿ ಅನುಮಾನವೇ ಬೇಡ.

ಬಳ್ಳಾರಿಯ ತಾರಾತಿಗಡಿಗಳು

ಹೆಸರಿಗೆ ಇಂಜಿನಿಯರ್ ಎಂಬ ನೇಮ್‌ಪ್ಲೇಟ್ ತಗಲು ಹಾಕಿಕೊಂಡಿರುವ ಬಳ್ಳಾರಿಯ ತಾರಾತಿಗಡಿಗಳು ಒಂದೆರಡಲ್ಲ, ಕಳೆದ ಸ್ಥಳೀಯ ಸಂಸ್ಥೆ ಚುನಾವಣೆಯ ಸಮಯದಲ್ಲಿ ಎಲ್ಲ ಪೊಲಿಟಿಕಲ್ ಪಾರ್ಟಿಗಳಿಗೆ ಪಾರ್ಟಿ ಫಂಡ್ ಅಂತ 18 ಲಕ್ಷಗಳನ್ನು ಕೊಟ್ಟಿದ್ದ ಎಂದರೆ ಈತ ಎಂಜಿನಿಯರ್ ಆಗಿ ಅದೆಷ್ಟು ಹಡಬಿ ದುಡ್ಡನ್ನು ಗಳಿಸಿದ್ದಾನೆ ಎಂಬುದು ಅರ್ಥವಾಗುತ್ತದೆ. ಈ ಪಾರ್ಟಿ ಫಂಡ್ ಕೊಟ್ಟ ವಿಚಾರವನ್ನು ತಾನೇ ಖುದ್ದಾಗಿ ಮಹಾದೇವ್ ಬಣಕಾರ್ ಜನ್ಮದಿನದ ಕಾರ್ಯಕ್ರಮದಲ್ಲಿ ವೇದಿಕೆ ಮೇಲೆ ನಿಂತು ಘೋಷಿಸಿಕೊಂಡಿದ್ದ. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಕಾಮಗಾರಿಗಳಲ್ಲಿ ಇವನ ಗಿಂಬಳದ ಪರ್ಸೆಂಟೇಜ್ ಸಾಮಾನ್ಯವಾಗಿ ಈ ಹುದ್ದೆಯಲ್ಲಿರುವ ಎಂಜಿನಿಯರ್‌ಗಳ ಪರ್ಸೆಂಟೇಜ್‌ಗಿಂತ ಕೊಂಚ ಜಾಸ್ತಿಯೇ ಇರುತ್ತದೆ. ನಗರ ಸೌಂದರ್ಯದ ಹೆಸರಿನಲ್ಲಿ ಹಾವೇರಿ ತುಂಬಾ ಸ್ಟ್ರೀಟ್ ಲೈಟ್ ಹಾಕುವ ಪ್ರಾಜೆಕ್ಟ್‌ನಲ್ಲಂತೂ ಇವನು ಮೇಯ್ದ ಪರಿ ಸ್ವತಃ ಉದಾಸಿಗೆ ನಾಚಿಕೆ ತರಿಸಿತ್ತು. ಚಿಕ್ಕಪುಟ್ಟ ಕಂಟ್ರಾಕ್ಟರ್‌ಗಳು ಸರಿಯಾಗಿ ಕಮೀಷನ್ ಕೊಡದಿದ್ದರೆ ಅವರ ಬಿಲ್ಲಿಗೆ ಸಹಿ ಮಾಡುವಾಗ ಇವನ ಬಾಯಿಂದ ಬರುವ ಬಯ್ಗುಳಗಳನ್ನು ನೋಡಿದರೆ ಇವನೊಬ್ಬ ಇಂಜಿನಿಯರ್‌ನೇ ಎಂಬ ಅನುಮಾನ ಬಾರದಿರದು.



ಬಳ್ಳಾರಿ ರಕ್ತ ನಾಳಗಳಲ್ಲಿ ಕೇವಲ ಮೇಯುವ ಗುಣ ಮಾತ್ರವಲ್ಲ, ಜಾತಿವಾದದ ಕಹಿಯೂ ಹೇಳತೀರದಷ್ಟು ಹರಿದಾಡುತ್ತಿದೆ. ಪಂಚಮಸಾಲಿ ಪೀಠ ಸ್ಥಾಪನೆಯಲ್ಲೂ ಇವನ ಕಪ್ಪು ಹಣ ಭಾರಿ ಕೆಲಸ ಮಾಡಿದೆ.

ಹಿಂದೊಮ್ಮೆ ಹಾವೇರಿಯಲ್ಲಿನ ಕೋರ್ಟ್ ಕಟ್ಟಡಕ್ಕೆ ಆಡಳಿತಾತ್ಮಕ ಅನುಮತಿ ಇಲ್ಲದಿರುವಾಗಲೂ ಕಮೀಷನ್ ದುರಾಸೆಗೆ ಬಿದ್ದು ಟೆಂಡರ್ ಕರೆದು ರಾದ್ಧಾಂತ ಮಾಡಿಕೊಂಡಿದ್ದ. ತನ್ನ ಮೇಯುವ ತೀಟೆ ತೀರಿಸಿಕೊಳ್ಳುವುದಕ್ಕಾಗಿ ಆಗ ಅಮಾಯಕ ನೌಕರನೊಬ್ಬನ ಕೆಲಸಕ್ಕೆ ಕುತ್ತು ತಂದಿಟ್ಟಿದ್ದ. ಇವನ ಎಲ್ಲ ರೀತಿಯ ಮಜಲುಗಳ ಅರಿವಿದ್ದರೂ ಕೆಲವು ಪತ್ರಕರ್ತರು ಇವನಿಂದ ಭಕ್ಷೀಸು ಪಡೆದು ಅವುಗಳನ್ನು ಮುಚ್ಚಿ ಹಾಕುತ್ತಲೇ ಬಂದಿದ್ದರು. ಜೊತೆಗೆ ಉದಾಸಿಯ ಬೆಂಬಲ ಬೇರೆ. ಇದರಿಂದಾಗಿಯೇ ಆತ ಮಾಡಬಾರದಷ್ಟು ಆಸ್ತಿ ಪಾಸ್ತಿಗಳನ್ನು ಮಾಡಿಕೊಂಡು ಕೊಬ್ಬಿಬಿಟ್ಟ. ಈಗ ಉದಾಸಿ ತಿರುಗಿಬಿದ್ದಿದ್ದರಿಂದ ಲೋಕಾಯುಕ್ತರ ಬಲೆಗೆ ಬಿದ್ದು ಜನರೆದುರು ಬೆತ್ತಲಾಗಿ ನಿಂತಿದ್ದಾನೆ.

ಹಾವೇರಿ ಜಿಲ್ಲೆಯಲ್ಲಿ ನಡೆದ ಎಲ್ಲಾ ಕಾಮಗಾರಿಗಳ ಬಗ್ಗೆ ನಿಷ್ಪಕ್ಷಪಾತಿ ತನಿಖೆಯೇನಾದರೂ ನಡೆದರೆ ಈತ ತನ್ನ ಜೀವಮಾನವಿಡೀ ಜೈಲಿನಲ್ಲೇ ಕಳೆಯಬೇಕಾಗುತ್ತದೆ. ಅವನ ಆಸ್ತಿ ಪಾಸ್ತಿಯನ್ನು ನೋಡಿದರೇನೇ ಅರ್ಥವಾಗುತ್ತದೆ ಅದೆಷ್ಟು ಸಾರ್ವಜನಿಕ ಹಣವನ್ನು ಮೇಯ್ದಿದ್ದಾನೆ ಎಂಬುದು. ಹುಬ್ಬಳ್ಳಿಯ ರೇಣುಕಾ ನಗರದಲ್ಲಿ ಸುಮಾರು ಹನ್ನೊಂದು ಲಕ್ಷ ಬೆಲೆಬಾಳುವ ದೊಡ್ಡದಾದ ಮನೆ, ಹಾನಗಲ್ ತಾಲ್ಲೂಕಿನ ಹಂದಿಹಾಳ ಗ್ರಾಮದಲ್ಲಿರುವ ಹದಿನಾಲ್ಕು ಎಕರೆ ಜಮೀನು, ಬ್ಯಾಡಗಿ ತಾಲ್ಲೂಕಿನ ಛತ್ರ ಗ್ರಾಮದಲ್ಲಿ ಹೆಂಡತಿ ಶೈಲಾ ಹೆಸರಿನಲ್ಲಿರುವ ಸುಮಾರು ಹನ್ನೆರಡು ಲಕ್ಷ ಮೌಲ್ಯದ ಕ್ರಶಿಂಗ್ ಮಶೀನ್, ರಾಣೇಬೆನ್ನೂರು ನಗರದಲ್ಲಿ ಸುಮಾರು 70 ಸಾವಿರ ಮೌಲ್ಯದ ಒಂದು ಎಕರೆ ಜಮೀನು, ಬೆಂಗಳೂರಿನ ಮನೆಯಲ್ಲಿರುವ 28 ಲಕ್ಷ ಮೌಲ್ಯದ ಸಾಮಾನುಗಳು, ಅಲ್ಲದೇ ನಗದು ಹಣ – ಇವಿಷ್ಟು ಲೋಕಾಯುಕ್ತರಿಗೆ ಸಿಕ್ಕಿರುವ ದಾಖಲೆಗಳು. ಅವರಿಗೆ ಸಿಗದಿರುವ ಆಸ್ತಿಪಾಸ್ತಿಗಳೂ ಇವೆ. ಉದಾಹರಣೆಗೆ, ಹಾವೇರಿ ಹತ್ತಿರ ನೆಲೋಗಲ್, ಹೋಂಬರಡಿ, ಕುಳೇನೂರು ಗ್ರಾಮಗಳಲ್ಲಿ ಕಲ್ಲು ಒಡೆಯುವ ಕ್ರಷಿಂಗ್ ದಂಧೆ ಇವನ ನೆರಳಿನಲ್ಲೇ ಹೆಮ್ಮರವಾಗಿ ಬೆಳೆದುನಿಂತಿದೆ. ಜಿಲ್ಲೆಯ ಎಲ್ಲಾ ಸರ್ಕಾರಿ ಕಾಮಗಾರಿಗಳಿಗೆ ಇಟ್ಟಿಗೆಗಳನ್ನು ಹೊರತುಪಡಿಸಿ ಉಳಿದೆಲ್ಲ ಕಚ್ಚಾ ಸಾಮಗ್ರಿಗಳನ್ನು (ಕಲ್ಲು, ಸಿಮೆಂಟ್, ಕಬ್ಬಿಣ ಇತ್ಯಾದಿ) ಬೇರೆಯವರ ಹೆಸರಿನಲ್ಲಿ ಈತನೇ ಸಪ್ಲೈ ಮಾಡುತ್ತಾನೆ. ಅಲ್ಲದೇ, ಹಿರೇಕೇರೂರು-ಹಾವೇರಿ ರಾಜ್ಯ ಹೆದ್ದಾರಿಗೆ ಬಿಡುಗಡೆಯಾಗಿದ್ದ 1.65 ಕೋಟಿ ಮೌಲ್ಯದ ಕಾಮಗಾರಿಯನ್ನು ತನ್ನ ತಮ್ಮ ಷಣ್ಮುಖನೊಂದಿಗೆ ಸೇರಿ ತಿಪ್ಪೆಸಾರಿಸಿದ್ದಾನೆ. ಇಷ್ಟೆಲ್ಲಾ ಆಸ್ತಿಪಾಸ್ತಿಯನ್ನು ಈತ ತನ್ನ ಸಂಬಳದಲ್ಲಂತೂ ಸಂಪಾದಿಸಿಲ್ಲವೆಂಬುದು ಮೇಲ್ನೋಟಕ್ಕೇ ಅರ್ಥವಾಗುತ್ತದೆ. ತನ್ನ ಅಕ್ರಮ ದಂಧೆಗಳಿಗೆ ಪ್ರೊಟೆಕ್ಷನ್‌ಗಾಗಿ ವಿವಿಧ ಸಂಘ ಸಂಸ್ಥೆಗಳಿಗೆ ಡೊನೇಷನ್ ಕೊಡುವುದು, ಪತ್ರಕರ್ತರಿಗೆ ಮೇಯಿಸುವುದು ಹಾಗೂ ತಾನು ಕುಮಾರಸ್ವಾಮಿಯ ಫ್ಯಾಮಿಲಿಗೆ ಕ್ಲೋಸ್ ಎಂದು ಹೇಳಿಕೊಂಡು ತಿರುಗಾಡುವುದು – ಎಲ್ಲವನ್ನೂ ಮಾಡುತ್ತಾನೆ.



ಒಟ್ಟಿನಲ್ಲಿ ಈಗ ಬಳ್ಳಾರಿಯ ಕಪ್ಪು ಹಣದಲ್ಲಿ ತೇಲಾಡುತ್ತಿದ್ದ ಚೆಡ್ಡಿಗಳಿಗೆ, ಭ್ರಷ್ಟ ಮಠಾಧಿಪತಿಗಳಿಗೆ ಸಿ.ಆರ್.ಬಳ್ಳಾರಿ ಮನೆ ಮೇಲಿನ ಲೋಕಾಯುಕ್ತರ ರೇಡ್ ಶಾಕ್ ನೀಡಿದೆಯಾದರೂ ಉದಾಸಿ ಒಳಗೊಳಗೇ ಮುಸಿಮುಸಿ ನಗುತ್ತಿರುವುದಂತೂ ಸತ್ಯ.

■ಕುರುಳಿಕುಪ್ಪಿ ವಿನಯ್

ಬಳ್ಳಾರಿ ಬ್ರದರ್ ಬ್ಲಾಕ್ ಲಿಸ್ಟ್ ಕಂಟ್ರಾಕ್ಟರ್!

ಪಿಡಬ್ಲ್ಯೂಡಿ ಇಂಜಿನಿಯರ್ ಸಿ.ಆರ್.ಬಳ್ಳಾರಿ ಘನಘೋರ ಭ್ರಷ್ಟನೆಂದು ಹಾವೇರಿಯ ಜಿಲ್ಲೆಯ ಜನರಿಗೆ ಗೊತ್ತಾಗುತ್ತಿದ್ದಂತೆ ಅಚ್ಚರಿ ಪಟ್ಟಿದ್ದರು. ಆದರೆ, ಇನ್ನೂ ಅಸಹ್ಯ ಪಟ್ಟುಕೊಳ್ಳುವಂತಹ ಇನ್ನೊಂದು ವಿಚಾರ ಏನೆಂದರೆ ಬಳ್ಳಾರಿಯ ಖಾಸಾ ತಮ್ಮ ಷಣ್ಮುಖ ಬಳ್ಳಾರಿ ಬ್ಲಾಕ್ ಲಿಸ್ಟ್ ಕಂಟ್ರಾಕ್ಟರ್ ಎಂಬ ಹೆಸರು ಗಳಿಸಿಕೊಂಡಿದ್ದಾನೆ. ಸಿ.ಆರ್.ಬಳ್ಳಾರಿ ಕಳೆದ ಎಂಟು ವರ್ಷಗಳಲ್ಲಿ ಲೋಕೋಪಯೋಗಿ ಎಂಜಿನಿಯರ್ ಆಗಿ ಮೇಯ್ದದ್ದಕ್ಕಿಂತ ದುಪ್ಪಟ್ಟು ಹಡಬಿ ದುಡ್ಡನ್ನು ಅವನ ತಮ್ಮ ಷಣ್ಮುಖ ಬಳ್ಳಾರಿ ಮೇಯ್ದು ನೀರು ಕುಡಿದಿದ್ದಾನೆ. ಈತ ನಡೆಸಿರುವ ಕಾಮಗಾರಿಗಳನ್ನು ನೋಡಿದರೇನೇ ಇದು ಅರ್ಥವಾಗಿ ಹೋಗುತ್ತದೆ. ಈ ಅಣ್ಣ-ತಮ್ಮರ ತಿನ್ನಾಟಕ್ಕೆ ಸಿ.ಎಂ.ಉದಾಸಿಯೇ ಗಾಡ್ ಫಾದರ್ ಆಗಿದ್ದರಿಂದ ಈ ಅಪರಾಧದಲ್ಲಿ ಉದಾಸಿಯ ಪಾಲೂ ಇದೆ. ಈಗ ತನ್ನ ವಿರುದ್ಧ ನಿಂತಿದ್ದಕ್ಕಾಗಿ ಉದಾಸಿ ಬಳ್ಳಾರಿಯನ್ನು ಬೆತ್ತಲೆ ಮಾಡಿರಬಹುದು. ಆದರೆ, ಈತನಕ ಇದೇ ಬಳ್ಳಾರಿ ಕೊಟ್ಟಿದ್ದ ಎಂಜಲನ್ನು ಇದೇ ಉದಾಸಿ ಅಮೃತವೆಂಬಂತೆ ಕುಡಿದಿದ್ದ ಎಂಬುದನ್ನು ಯಾರೂ ಮರೆಯಬಾರದು. ಬಳ್ಳಾರಿ ಬ್ರದರ್ಸ್‌ಗಳ ಭ್ರಷ್ಟಾಚಾರಗಳನ್ನು ತನಿಖೆಗೊಳಪಡಿಸಿದರೆ ಎಲ್ಲೆಲ್ಲೂ ಉದಾಸಿಯ ನೆರಳು ಕಾಣುವುದು ಖಚಿತ.

ರಾಜಶ್ರೀ ಸಿಮೆಂಟ್ ನೀರಿನಿಂದ ಸತ್ಯನಾಶವಾಗಿರುವ ರೈತರು



ಮಲಿನ ನೀರಿನಿಂದ ಹಾಳಾಗಿರುವ ಜಮೀನು

ಸಿಮೆಂಟ್ ನಗರಿ ಎಂದೇ ಖ್ಯಾತಿ ಗಳಿಸಿರುವ ಕಲಬುರ್ಗಿ ಜಿಲ್ಲೆಯ ಸೇಡಂ ಹಲವಾರು ಸಮಸ್ಯೆಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಒಂದೇ ಸಮ ಒದ್ದಾಡುತ್ತಿದೆ. ಇಡೀ ರಾಜ್ಯದ ಜನತೆಗೆ ಸಿಮೆಂಟ್ ನೀಡಿ, ಬರೀ ಧೂಳನ್ನು ಮಾತ್ರ ತಾನು ಪಡೆಯಿತು ಎಂಬಂತಾಗಿದೆ ಈ ನಗರದ ಕತೆ. ಬಿರ್ಲಾ ಗುಂಪಿನ ರಾಜಶ್ರೀ ಸಿಮೆಂಟ್ ಉದ್ದಿಮೆ ಹಂಗನಹಳ್ಳಿಯಲ್ಲಿ ಸ್ಥಾಪನೆಯಾಗಿ ನಕಾಶದಲ್ಲಿ ಗುರುತಿಸಿಕೊಂಡಿತೇನೋ ಖರೆ. ಆದರೆ ಇಲ್ಲಿನ ಜನರು ಆ ಸಿಮೆಂಟ್ ತಯಾರಿಕೆಯ ಸಂದರ್ಭದಲ್ಲಿ ಉಂಟಾಗುವ ಧೂಳಿನಿಂದ ಒಂದೇ ಸಮ ನರಳುತ್ತಿದ್ದಾರೆ. ಕಾರ್ಖಾನೆಯ ಮಲಿನ ನೀರು ಹಾದುಹೋಗಲು ಪರ್ಯಾಯ ವ್ಯವಸ್ಥೆ ಇಲ್ಲದ್ದರಿಂದ ಆ ನೀರೆಲ್ಲ ಫಲವತ್ತಾದ ಭೂಮಿಯ ಮೇಲೆ ಹರಿದುಹೋಗುತ್ತಿದೆ. ಇದರಿಂದಾಗಿ ಸರ್ವೇ ನಂ 267, 263, 262, 257, 256, 170, 11, 12 ಒಟ್ಟು 22 ಎಕರೆ ಭೂಮಿ ಹದಗೆಟ್ಟು ಹೋಗಿದೆ.




ಶರಣ ಪ್ರಕಾಶ ಪಾಟೀಲ ಎಂ.ಎಲ್.ಎ. ಸೇಡಂ

ಇಲ್ಲಿ ಯಾವುದೇ ಬೆಳೆ ಬಿತ್ತಿದರೂ ಬೆಳೆಯದ ಕರ್ರು ಸ್ಥಿತಿ ತಲುಪಿದೆ. ಈ ಬಗ್ಗೆ ಕಳೆದೊಂದು ವರ್ಷದಿಂದ ಒಂದೇ ಸಮ ರೈತರೆಲ್ಲ ತಮ್ಮ ಶಂಖ – ಜಾಗಟೆಗಳಿಂದ ಹೊಯ್ಕೊಳ್ಳುತ್ತಿದ್ದರೂ ಬದ್ಮಾಷ ಅಧಿಕಾರಿಗಳು, ದಪ್ಪ ಚರ್ಮದ ಪುಢಾರಿಗಳು ಕಿವಿಯ ಮೇಲೆ ಹಾಕಿಕೊಳ್ಳುವುದಿರಲಿ, ಕುಂಡೆಯ ಕೆಳಗೂ ಹಾಕಿಕೊಳ್ಳುತ್ತಿಲ್ಲ. ಆದಾಗ್ಯೂ 2007, ನವೆಂಬರ 10 ರಂದು ಅಂದಿನ ಜಿಲ್ಲಾಧಿಕಾರಿ ಪಂಕಜಕುಮಾರ ಪಾಂಡೆಯ ನೇತೃತ್ವದಲ್ಲಿ ಸಭೆಯೊಂದು ಕರೆಯಲಾಗಿತ್ತು. ಅಲ್ಲಿ ಜಂಟಿ ಕೃಷಿ ನಿರ್ದೇಶಕರು, ಸೇಡಂನ ಸಹಾಯಕ ಆಯುಕ್ತರು ಮತ್ತು ಪರಿಸರ ಇಲಾಖೆಯ ಮುಖ್ಯಸ್ಥರೊಬ್ಬರಿಂದ ಒಡಗೂಡಿದ ಸಮಿತಿ ರಚಿಸಿ ವರದಿ ನೀಡಲು ಆದೇಶಿಸಲಾಗಿತ್ತು.

ಅದರಂತೆ ಸಮರ್ಪಕವಾಗಿ ಪರಿಶೀಲಿಸಿದ ಸಂಬಂಧಿಸಿದ ಸಮಿತಿ ಕೂಡ ತನ್ನ ವರದಿಯನ್ನೇನೋ ನೀಡಿತು. ಆ ವರದಿಯಲ್ಲಿ ಸ್ಪಷ್ಟವಾಗಿ ಕಾರ್ಖಾನೆಯ ಮಲಿನ ನೀರಿನಿಂದ ರೈತರ ಜಮೀನುಗಳು ಹಾಳಾಗಿರುವುದು ಸತ್ಯ; ಇದರಿಂದಾಗಿ ಅವು ಬಿತ್ತನೆಗೆ ಯೋಗ್ಯವಾಗಿಲ್ಲ; ಆದ್ದರಿಂದ ರೈತರಿಗೆ ಪರಿಹಾರ ನೀಡುವುದು ಸೂಕ್ತ ಎಂದು ಹೇಳಲಾಗಿತ್ತು.

ಆದರೆ ಅದ್ಯಾಕೋ ಜಿಲ್ಲಾಧಿಕಾರಿಗಳು ಈ ವರದಿಯನ್ನು ತನ್ನ ಅಂದಿನ ಕೆಳಗೆ ಹಾಕಿಕೊಂಡು ಕುಳಿತುಕೊಂಡನು. ಜಿಲ್ಲಾಧಿಕಾರಿಯ ಈ ಅವಿವೇಕತನವನ್ನು ರೈತರು ಪ್ರತಿಭಟಿಸಿದ್ದರಿಂದ ಅನಿವಾರ್ಯವಾಗಿ ಇದೇ ಜಿಲ್ಲಾಧಿಕಾರಿ ಮಗದೊಂದು ಸಮಿತಿ ರಚಿಸಿ ತಿಪ್ಪೆಸಾರಿಸುವ ಕೆಲಸ ಮಾಡಿದ. ಕಾರ್ಖಾನೆಯ ಮಾಲೀಕರು ನೀಡಿರುವ ಆಮಿಷಕ್ಕೋ ಅಥವಾ ಅವರ ಪ್ರಬಲ ರಾಜಕೀಯ ಶಕ್ತಿಗೊ ಹೆದರಿ ಜಿಲ್ಲಾಧಿಕಾರಿ ನಿಜಕ್ಕೂ ದ್ರೋಹ ಮಾಡಿದ್ದಾರೆ.




ಸಿಮೆಂಟ್ ಕಾರ್ಖಾನೆಯಿಂದ ಮಲಿನ ನೀರು

ಇದೆಲ್ಲವನ್ನೂ ನೋಡುತ್ತ, ಕೇಳುತ್ತ ಕುಳಿತಿರುವ ಇಲ್ಲಿನ ಶಾಸಕ ಶರಣಪ್ರಕಾಶ ಪಾಟೀಲ ಮಾತ್ರ ತನ್ನ ಟುಟಿಪಿಟಿಕ್ ಎನ್ನದೇ ದಿವ್ಯ ಮೌನ ವಹಿಸಿದ್ದಾರೆ. ಇದರ ಗುಟ್ಟೇನಿರಬಹುದು?! ಎಂದು ಜನ ಮಾತಾಡತೊಡಗಿದ್ದಾರೆ. ಕುದುರೆಗಿಂತ ಕುದುರೆಯ ಲದ್ದಿಯೆ ಬಿರುಸು ಎಂಬಂತೆ ವರ್ತಿಸುತ್ತಿರುವ ಜಿಲ್ಲಾಧಿಕಾರಿಯ ವಿರುದ್ಧ ಜನರ ಪ್ರತಿನಿಧಿಯಾಗಿರುವ ಶರಣಪ್ರಕಾಶ ಪಾಟೀಲ ತಮ್ಮ ಜನ ಶಕ್ತಿ ಬಳಸಿಕೊಂಡು ತಮ್ಮ ತಾಲೂಕಿನ ಹಿತಾಸಕ್ತಿ ಕಾಯುವರೆ? ಕಾದು ನೋಡಬೇಕು.

■ವಿಶ್ವಾರಾಧ್ಯ ಸತ್ಯಂಪೇಟೆ

ದೊಡ್ಡನಗೌಡನ ಕಮೀಷನ್ನಿಗೆ ಅನ್ನದಾತ ಬಲಿ!



ದೊಡ್ಡನಗೌಡ ಪಾಟೀಲ್

ಚೆಡ್ಡಿ ಶಾಸಕ ದೊಡ್ಡನಗೌಡ ಪಾಟೀಲ್ ಈಗ ಹುನಗುಂದವನ್ನು ಹರಾಜು ಹಾಕಿ ಪಕ್ಕದ ಕೊಪ್ಪಳಕ್ಕೆ ಹಾರುವ ತಯಾರಿಯಲ್ಲಿದ್ದಂತೆ ಕಾಣುತ್ತದೆ. ಈತ ತನ್ನನ್ನು ಗೆಲ್ಲಿಸಿದ ಜನರಿಗೆ ನೀರು ಕುಡಿಸಿ ಜಿಂದಾಲ್ ಕಂಪೆನಿಗೆ ಮಣೆ ಹಾಕುತ್ತಿರುವುದನ್ನು ನೋಡಿದರೆ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ.

ಅಸಲಿಗೆ ಈತ ಹುನಗುಂದದವನೇ ಅಲ್ಲ. ಮೂಲತಃ ಇಳಕಲ್ ಪಕ್ಕದ ಕುಷ್ಟಗಿ ತಾಲ್ಲೂಕಿನವನಾದ ಈತ ಗ್ರಾನೈಟ್ ಉದ್ದಿಮೆ ಮಾಡುತ್ತಾ ಕಂಡಕಂಡವರ ಕ್ವಾರಿಗಳನ್ನು ಕದ್ದು ಗೆಬರುತ್ತಾ ಕೋಟಿ ಕೋಟಿ ದುಡ್ಡು ಮಾಡಿದವನು. ಇದೀಗ ಅದೂ ಸಾಲದೆಂಬಂತೆ ಹುನಗುಂದದ ಜನರಿಗೆ ಕುಡಿಯಲು ಹಾಗೂ ರೈತರ ಜಮೀನಿಗೆ ನೀರು ಇಲ್ಲದಿದ್ದರೂ ಪರವಾಗಿಲ್ಲ, ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿರುವ ಜಿಂದಾಲ್ ಉಕ್ಕಿನ ಕಾರ್ಖಾನೆಗೆ ನೀರು ಕೊಟ್ಟೇ ತೀರುತ್ತೇನೆಂಬ ಹಠಕ್ಕೆ ಬಿದ್ದಿದ್ದಾನೆ. ಯಾಕೆಂದರೆ ಇದರಿಂದ ದೊಡ್ಡನಗೌಡನ ತಿಜೋರಿ ತುಂಬುವಷ್ಟು ಕಮೀಷನ್ ಸಿಗುತ್ತದೆ.

ಹೌದು, ಆಲಮಟ್ಟಿ ಮತ್ತು ನಾರಾಯಣಪುರ ಹಿನ್ನೀರಿನಲ್ಲಿರುವ ಸುಮಾರು ಮೂವತ್ಮೂರು ಹಳ್ಳಿಗಳಿಗೆ ಕುಡಿಯುವ ನೀರೇ ಸಿಗದಿರುವ ಪರಿಸ್ಥಿತಿಯಿರುವಾಗ; ಆ ಹಳ್ಳಿಗಳ ರೈತರಿಗೆ ವ್ಯವಸಾಯಕ್ಕೆ ನೀರೇ ದೊರೆಯದಿರುವ ಪರಿಸ್ಥಿತಿಯಿರುವಾಗ ಅವರಿಗೆ ಸಲ್ಲಬೇಕಾದ 2.60 ಟಿಎಂಸಿ ನೀರನ್ನು ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿರುವ ಜಿಂದಾಲ್ ಫ್ಯಾಕ್ಟರಿಗೆ ಸರಬರಾಜು ಮಾಡುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆ. ಈ ಫ್ಯಾಕ್ಟರಿಗೂ ಹುನಗುಂದಕ್ಕೂ ನಡುವೆ ಎರಡು ನೂರು ಕಿ.ಮೀ. ಅಂತರವಿದ್ದರೂ ಅದೇ ನೀರು ಬೇಕೆಂದು ದೊಡ್ಡನಗೌಡ ಮತ್ತು ಜಿಂದಾಲ್ ಇಬ್ಬರೂ ಹಾತೊರೆಯುತ್ತಿದ್ದಾರೆ. ಇದಕ್ಕಾಗಿ 400 ಕೋಟಿ ರೂ.ಗಳ ಯೋಜನೆಯನ್ನು ಸಿದ್ಧಪಡಿಸಿಕೊಂಡಿದ್ದಾರೆ.

ಜಿಂದಾಲ್ ಮಡಿಲಿನಲ್ಲಿ ದೊಡ್ಡನಗೌಡ!

ತನ್ನ ಉಕ್ಕು ಉತ್ಪಾದನೆಯನ್ನು ಹತ್ತು ದಶಲಕ್ಷ ಟನ್‌ಗೆ ಹೆಚ್ಚಿಸುವುದಕ್ಕಾಗಿ ಕೃಷ್ಣಾ ಜಲ ನಿಗಮದಿಂದ ಐದು ಟಿಎಂಸಿ ನೀರು ಬೇಕೆಂದು ಜಿಂದಾಲ್ ಕಂಪೆನಿ 2005ರ ಅಕ್ಟೋಬರ್‌ನಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಆಗ ಧರ್ಮ್‌ಸಿಂಗ್ ಮುಖ್ಯಮಂತ್ರಿಯಾಗಿದ್ದರು. ನಂತರ ನವೆಂಬರ್ 2007ರಲ್ಲಿ ಈ ಪ್ರಸ್ತಾವನೆಗೆ ಅನುಮತಿ ದೊರಕಿತು.




ಆಗ ಕೋ-ಜಾ ಸರ್ಕಾರ ಅಧಿಕಾರದಲ್ಲಿತ್ತು. ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಜಿಂದಾಲ್ ಬಳಸಿಕೊಂಡಿದ್ದು ಹುನಗುಂದದ ಶಾಸಕನಾಗಿದ್ದ ಇದೇ ದೊಡ್ಡನಗೌಡ ಪಾಟೀಲ್‌ನನ್ನು.

ತಮ್ಮ ನೀರನ್ನು ಅದ್ಯಾವುದೋ ಕಂಪೆನಿಗೆ ಮಾರಾಟ ಮಾಡುತ್ತಿದ್ದಾರೆಂಬ ಸುದ್ದಿ ಇಡೀ ಹುನಗುಂದದಾದ್ಯಂತ ಹಬ್ಬಿ ಜನ ಪ್ರತಿಭಟನೆಗೆ ಇಳಿದರು. ಹುನಗುಂದದಿಂದ ತೋರಣಗಲ್‌ವರೆಗೆ ನೀರು ಸರಬರಾಜಿಗಾಗಿ ಪೈಪುಗಳು ಬಿದ್ದಾಗಲೂ ಜನ ಪ್ರತಿಭಟಿಸಿದರು. ಆದರೆ ದುರಂತ ಎಂದರೆ, ದೊಡ್ಡನಗೌಡ ಮಾತ್ರ ಈ ಯೋಜನೆಯ ಬಗ್ಗೆ ತನಗೇನೂ ಗೊತ್ತೇ ಇಲ್ಲವೆಂಬಂತೆ ಮಾತನಾಡುತ್ತಿದ್ದಾನೆ. ಈ ಯೋಜನೆಗೆ ಪರವಾನಗಿ ಕೊಡಿಸಿದ್ದೇ ಈತ. ಆದರೆ ಜನರೆದುರು ತಾನು ತಿಂದ ಕಮೀಷನ್ನಿನ ವಿಚಾರ ಗೊತ್ತಾಗಬಾರದೆಂದು ಈ ನಾಟಕವಾಡಲಾರಂಭಿಸಿದ್ದಾನೆ.

ಅನ್ನದಾತ ಬಲಿ!

ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯದ ಒಟ್ಟು ನೀರಿನ ಸಾಮರ್ಥ್ಯ 160.64 ಟಿಎಂಸಿ. ಒಳ ಹರಿವು ಜಾಸ್ತಿಯಾದಾಗ ಇನ್ನೂ 13 ಟಿಎಂಸಿ ಹೆಚ್ಚಾಗಿ ಒಟ್ಟು 173 ಟಿಎಂಸಿಯಷ್ಟು ನೀರು ಸಂಗ್ರಹವಾಗುತ್ತದೆ. ಇದರಲ್ಲಿ ತುಂಬಿರುವ ಹೂಳನ್ನು ಮತ್ತಿತರ ಅಂಶಗಳನ್ನು ಗಮನಿಸಿದರೆ ನೀರಿನ ಸಂಗ್ರಹ ಸಾಮರ್ಥ್ಯ ಕೇವಲ 150 ಟಿಎಂಸಿ ಎಂಬುದು ತಜ್ಞರ ಅಭಿಮತ. ಇದರಲ್ಲಿ ಹುನಗುಂದ ತಾಲ್ಲೂಕಿನ ರಾಮುತಾಳ-ಮರೋಳ [illegible] ಟಿಎಂಸಿ ನೀರು ಬೇಕೇ ಬೇಕು. ಈ ಕೆಲಸ ಕೂಡ ಸರ್ಕಾರದ ದಿವ್ಯ ನಿರ್ಲಕ್ಷ್ಯದ ಫಲವಾಗಿ ನೆನೆಗುದಿಗೆ ಬಿದ್ದಿದೆ. ಹುನಗುಂದ-ಇಳಕಲ್‌ಗೆ ಕುಡಿಯುವುದಕ್ಕಾಗಿಯೇ ಎರಡೂವರೆ ಟಿಎಂಸಿ ನೀರು ಬೇಕು. ಇನ್ನಿತರ ಕೃಷಿ ಚಟುವಟಿಕೆಗಳನ್ನು ಲೆಕ್ಕ ಹಾಕಿದರೆ ನಾರಾಯಣಪುರ ಜಲಾಶಯದಲ್ಲಿ ಈಗಿರುವ ನೀರು ಸಾಕಾಗದೆ ಇನ್ನೂ 29 ಟಿಎಂಸಿ ನೀರು ಕಡಿಮೆಯಾಗುತ್ತದೆ. ಅಂತಹದ್ದರಲ್ಲಿ ಜಿಂದಾಲ್ ಕಂಪೆನಿಯೊಂದಕ್ಕೇ ಎರಡೂವರೆ ಟಿಎಂಸಿ ನೀರು ಕೊಡಲು ಸರ್ಕಾರ ಮುಂದಾಗಿದೆಯೆಂದರೆ ಏನರ್ಥ? ಒಟ್ಟಿನಲ್ಲಿ ಜಿಂದಾಲ್ ಬಿಸಾಡುವ ಎಂಜಲು ಕಾಸಿನ ಕಮೀಷನ್‌ಗಾಗಿ ದೊಡ್ಡನಗೌಡ ರೈತರನ್ನು ಬಲಿ ಕೊಡಲು ಹೊರಟಿರುವುದು ಮೇಲ್ನೋಟಕ್ಕೇ ಕಾಣುತ್ತದೆ.

ದೊಡ್ಡನಗೌಡ ಮೊದಮೊದಲು ಈ ಯೋಜನೆಯ ಬಗ್ಗೆ ತನಗೆ ಏನೂ ಗೊತ್ತೇ ಇಲ್ಲ ಎಂದು ಹಾರಿಕೊಳ್ಳಲು ಪ್ರಯತ್ನಿಸಿದ. ಆದರೆ ಕೆಲವೇ ದಿನಗಳಲ್ಲಿ ಈತನ ಹಿಂಬಾಲಕರೆಲ್ಲರೂ ಜಿಂದಾಲ್ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕ ಕೆ.ವಿ.ಶೇಖರ್‌ನೊಂದಿಗೆ ಸೇರಿ ಬಾಗಲಕೋಟೆಯ ಪತ್ರಿಕಾಗೋಷ್ಠಿ ನಡೆಸಿ ಯೋಜನೆಯನ್ನು ಬೆಂಬಲಿಸಿದಾಗ ತಾನೂ ಬಾಯ್ಮುಚ್ಚಿ



ಕುಳಿತ.

ಜಿಂದಾಲ್ ಕಂಪೆನಿಗೆ ಇನ್ನೂರು ಕಿ.ಮೀ. ದೂರದಲ್ಲಿರುವ ಹುನಗುಂದದ ನೀರೇ ಯಾಕೆ ಬೇಕು ಎಂಬ ಪ್ರಶ್ನೆ ಕೆಲವರನ್ನು ಕಾಡುತ್ತಿದೆ. ಏಕೆಂದರೆ ಕಂಪೆನಿಯ ಪಕ್ಕದಲ್ಲಿಯೇ ತುಂಗಭದ್ರಾ ಜಲಾಶಯದ ನೀರನ್ನು ಬಳಸಿಕೊಳ್ಳಬಹುದು. ಅದೂಅಲ್ಲದೆ, ಆಣೆಕಟ್ಟಿನ ಹೊರಭಾಗದಲ್ಲಿ ನೀರು ಸಂಗ್ರಹಣಾ ವ್ಯವಸ್ಥೆ ಮಾಡಿಕೊಂಡು ಜಿಂದಾಲ್ ಕಂಪೆನಿಯು ನೀರು ಬಳಸಿಕೊಳ್ಳಬಹುದೆಂದು ಕರ್ನಾಟಕ ನೀರು ಹಂಚಿಕೆ ನ್ಯಾಯಾಧೀಕರಣ ಸಲಹೆ ಮಾಡಿದೆ. ಆದರೂ ದೊಡ್ಡನಗೌಡ ಜಿಂದಾಲ್‌ನನ್ನು ಹುನಗುಂದಕ್ಕೆ ಎಳೆತರುತ್ತಿದ್ದಾನೆ.

ಎಲ್ಲ ಪಕ್ಷಗಳೂ ಬಾಯ್ಮುಚ್ಚಿ ಕುಳಿತಿವೆ!

ಮೊದಮೊದಲು ದೊಡ್ಡನಗೌಡ ಮತ್ತು ಜಿಂದಾಲ್ ವಿರುದ್ಧ ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್ ಒಂದಿಷ್ಟು ಬೊಬ್ಬೆ ಹಾಕಿ ರೈತರ ಕಣ್ಣಿನಲ್ಲಿ ಹೀರೋ ಆಗಲು ಪ್ರಯತ್ನಿಸಿದ. ಆದರೆ ಅವನ ಕೈ ಕೂಡ ಬೆಚ್ಚಗಾದ ಮೇಲೆ ಈಗ ಬಾಯ್ಮುಚ್ಚಿ ಕುಳಿತಿದ್ದಾನೆ. ಇನ್ನು ಜೆಡಿಎಸ್ ಈ ವಿಚಾರವನ್ನು ಚುನಾವಣೆಯ ಸಂದರ್ಭದಲ್ಲಿ ಮಾತ್ರ ಬಳಸಿಕೊಂಡು ರೈತರ ಓಟು ಕೀಳಲು ಪ್ರಯತ್ನಿಸಿತು. ಈಗ ಚುನಾವಣೆ ಮುಗಿದಿರುವುದರಿಂದ ಅವರೂ ತುಟಿ ಪಿಟಕ್ಕೆನ್ನುತ್ತಿಲ್ಲ. ಜೆಡಿಯುನ ನಾಗರಾಜ್ ಹೊಂಗಲ್ ಎಂಬ ಮಾಜಿ ಪತ್ರಕರ್ತ ಕೂಡ ಜಿಂದಾಲ್‌ಗೆ ಜಿಂದಾಬಾದ್ ಎಂದು ಕೂಗುತ್ತಿದ್ದಾನೆ.


ರೈತರ ನೀರನ್ನು ಕಸಿಯುವ ಈ ಯೋಜನೆಗೆ ಜಿಲ್ಲಾ ಪಂಚಾಯತಿಯಲ್ಲಿ ಕಾಂಗ್ರೆಸ್‌ನ ಏಕೈಕ ಸದಸ್ಯ ಸುಭಾಷ್ ತಾಳಿಕೋಟೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಬಿಜೆಪಿಯ ಸದಸ್ಯರೆಲ್ಲರೂ ಜಿಂದಾಲ್ ಪರವಾಗಿ ನಿಂತಿದ್ದನ್ನು ನೋಡಿದರೆ ಯೋಜನೆಯನ್ನು ಜಾರಿಗೊಳಿಸಲು ಅವರೆಷ್ಟು ಉತ್ಸುಕರಾಗಿದ್ದಾರೆ ಎಂಬುದು ಅರ್ಥವಾಗುತ್ತದೆ.

ಎಲ್ಲ ರಾಜಕೀಯ ಪಕ್ಷಗಳಿಗೆ ರೈತರ ನೆನಪಾಗುವುದು ಕೇವಲ ಚುನಾವಣೆಯ ಸಂದರ್ಭದಲ್ಲಿ ಎಂದು ಅರಿತ ಕೆಲವು ರೈತರು ಈಗ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಆದರೆ ಅಲ್ಲೂ ಜಿಂದಾಲ್ ದುಡ್ಡು ಕೆಲಸ ಮಾಡುವುದರಿಂದ ರೈತರಿಗೆ ನ್ಯಾಯ ಸಿಗುವುದು ಕಷ್ಟವಾಗಿದೆ

ಮೇಘರಾಜ್

ಚಿಂಚನಸೂರ ಬಾಬಣ್ಣನೊಂದಿಗೆ ಯಡ್ಡಿಯದು ಎಂಥ ಸಖ್ಯ?

ಕಲಬುರ್ಗಿ ಜಿಲ್ಲೆಯ ಬಾಬುರಾವ್ ಚಿಂಚನಸೂರ ಎಂಬ ರಾಜಕೀಯ ಪುಢಾರಿಯ ಹೆಸರು ಕೇಳುತ್ತಲೆ ಬಿಳಿಜುಬ್ಬದವರಷ್ಟೆ ಅಲ್ಲದೆ ಬಹುತೇಕ ಜನರ ಬಾಯಲ್ಲೂ ನೀರೂರ ತೊಡಗುತ್ತದೆ. ದಿ. ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ ಮುಂತಾದವರೆಲ್ಲ ಚಿಂಚನಸೂರ ಬಾಬಣ್ಣನನ್ನು ನೆನೆಯದ ದಿನಗಳೇ ಇರಲಿಲ್ಲವೆಂದರೆ ತಪ್ಪಾಗಲಾರದು. ಹಾಗೆಯೇ ಇತ್ತೀಚಿನ ದಿನಗಳಲ್ಲಿ ಖರ್ಗೆ, ಧರ್ಮಸಿಂಗ್, ಸಿದ್ರಾಮಯ್ಯ, ಎಸ್.ಎಂ.ಕೃಷ್ಣ ಮುಂತಾದವರಿಗೆಲ್ಲ ಬಾಬುರಾವ್ ಉರ್ಫ್ ಬಾಬಣ್ಣ ನೆನಪಾಗುತ್ತಲೇ ಕುಂತಲ್ಲಿಯೆ ಮುಲುಗಾಡತೊಡಗುತ್ತಾರೆ.



ಒಟ್ಟಿನಲ್ಲಿ ಬಾಬುರಾವ್ ಚಿಂಚನಸೂರ ಗುಲಬರ್ಗಾ ಜಿಲ್ಲೆಯಲ್ಲಿ ಎಂದಿಗೂ ಚಾಲ್ತಿಯಲ್ಲಿರುವ ಹೆಸರು. ರಾಜಕೀಯ ಕಾರ್ಯಕ್ರಮಗಳಾಗಲಿ, ಸನ್ಮಾನ ಸಭೆಗಳಾಗಲಿ, ಅವುಗಳಲ್ಲಿ ಚಿಂಚನಸೂರನ ಚುಂಚು ತೂರಿದೆಯೆಂದರೆ ಅಲ್ಲಿ ಬೆಳ್ಳಿಯ ಗದೆ, ಬೆಳ್ಳಿಯ ಖಡ್ಗ, ಬೆಳ್ಳಿಯ ಕಿರೀಟಗಳು ಆರ್ಭಟಿಸುತ್ತಿರುತ್ತವೆ. ಹೊಗಳಿಕೆಗೂ ಮಿತಿ ಮೀರಿ ಇದೆ ಎಂಬುದನ್ನು ಅರಿಯದ ಚಿಂಚನಸೂರ ಯಾರನ್ನಾದರೂ ಹೊಗಳ ತೊಡಗಿದರೆಂದರೆ ಹೊಗಳಿಸಿಕೊಳ್ಳುವವರೇ ನಾಚಿಕೊಳ್ಳಬೇಕು. ಅಂಥ ಸಭೆಯ ಪ್ರೇಕ್ಷಕರೂ ಹೈರಾಣಾಗುವವರೇ ಚಿಂಚನ ಸೂರನ ಅಬ್ಬರ ಮುಂದುವರೆದಿರುತ್ತದೆ.

ಇಂಥ ಕುಖ್ಯಾತಿಯ ಚಿಂಚನಸೂರ ಬಾಬುರಾವ್ ಚಿತ್ತಾಪುರ ಮತಕ್ಷೇತ್ರದಿಂದ ಮೂರುಬಾರಿ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದ. 1999ರಲ್ಲಿ ಎಸ್.ಎಂ.ಕೃಷ್ಣ ಸರಕಾರದಲ್ಲಿ ಏಳು ಖಾತೆಗಳನ್ನು ಹೊಡಕೊಳ್ಳುವ ಮೂಲಕ ಸಪ್ತಖಾತೆಗಳ ಸರದಾರ ಎಂಬು ಬಿರುದನ್ನೂ ಪಡೆದಿದ್ದ. ತನ್ನ ಮತಕ್ಷೇತ್ರದ ಉದ್ದಕ್ಕೂ ಯಾರದೇ ಮನೆಯಲ್ಲಿ ತೊಟ್ಟಿಲು ಕಾರ್ಯಕ್ರಮ, ಲಗ್ನ ಕಾರ್ಯಕ್ರಮ ಜರುಗಿತೆಂದರೆ ಎಲ್ಲಿಂದಾದರೂ ಹಾಜರಾಗುವ ಚಿಂಚನಸೂರ ಬಂಗಾರದ ಉಂಗುರಗಳನ್ನು ಧಾರಾಳವಾಗಿ ಕಾಣಿಕೆಯಾಗಿ ನೀಡುತ್ತಾನೆ. ಹೀಗಾಗಿ ಕ್ಷೇತ್ರದ ಉದ್ದಕ್ಕೂ ಈತನ ಚಿನ್ನದ ಉಂಗುರದ ಕಾಣಿಕೆ ಸ್ವೀಕರಿಸದವರೇ ಅಪರೂಪ ಎಂದರೆ ತಪ್ಪಾಗಲಿಕ್ಕಿಲ್ಲ.


ಚುನಾವಣೆಗಳು ಹತ್ತಿರ ಬರುತ್ತವೆಂದರೆ ಬಾಬುರಾವ್‌ನನ್ನು ಸುತ್ತುವರೆದಿರುವ ಪಕ್ಷದ ಕಾರ್ಯಕರ್ತರಿಗೆ ಎಲ್ಲಿಲ್ಲದ ಹುರುಪು. ಏಕೆಂದರೆ ಪಕ್ಷದ ಪ್ರಚಾರಕ್ಕೆ ಬೆಂಗಳೂರಿನಿಂದ ಸುಮಾರು ಜನ ಹುಡುಗಿಯರನ್ನು ಕರೆಯಿಸಿ ಪ್ರಚಾರದ ಕಾವು ಏರುವಂತೆ ನೋಡಿಕೊಳ್ಳುತ್ತಾನೆ. ಧಾರಾಳವಾಗಿ ಹಣವನ್ನು ಚೆಲ್ಲಿ ಆ ಹುಡುಗರನ್ನೆಲ್ಲ ಬೆಸ್ತು ಬೀಳಿಸಿ ಚುನಾವಣೆಯಲ್ಲಿ ಗೆದ್ದು ಬರುವುದೇ ಈ ಚಿಂಚನಸೂರನ ಹಿಕಮತ್ತು.



ಯಾವಾಗ ತಾನು ಸದಾ ಗೆದ್ದು ಬರುತ್ತಿದ್ದ ಚಿತ್ತಾಪುರ ಮತಕ್ಷೇತ್ರ ಮೀಸಲು ಕ್ಷೇತ್ರವಾಗಿದೆ ಮತ್ತು ಮಲ್ಲಿಕಾರ್ಜುನ ಖರ್ಗೆ ಗೆಲ್ಲುತ್ತಾ ಬಂದಿರುವ ಗುರುಮಿಠಕಲ್ ಸಾಮಾನ್ಯ ಕ್ಷೇತ್ರವಾಗಿದೆ ಎಂದು ಖಾತ್ರಿಯಾಯಿತೋ ಆಗ ಚಿಂಚನಸೂರ ಒಂದು ತಂತ್ರ ಹೊಸೆದ. ಹೇಗಾದರೂ ಮಾಡಿ ಗುರುಮಿಠಕಲ್ಲಿನಿಂದ ಮಲ್ಲಿಕಾರ್ಜುನ ಖರ್ಗೆಯನ್ನು ಚಿತ್ತಾಪುರಕ್ಕೆ ಬರುವಂತೆ ಮಾಡುವುದು ಮತ್ತು ತಾನು ಗುರುಮಿಠಕಲ್ಲಿನಿಂದ ಸ್ಪರ್ಧಿಸುವುದು ಇವನ ಪ್ಲಾನ್ ಆಗಿತ್ತು. ಆ ನಿಟ್ಟಿನಲ್ಲಿ ಪತ್ರಿಕೆಗಳ ಮೂಲಕ ತನ್ನ ಮೂಲ ಮತಕ್ಷೇತ್ರದಿಂದ ಚುನಾವಣೆಗೆ ನಿಲ್ಲಲು ಖರ್ಗೆಯವರನ್ನು ಆಹ್ವಾನಿಸಿದ್ದೇ ಆಹ್ವಾನಿಸಿದ್ದು. ಇದು ಸಾಲದೆಂಬಂತೆ ಚಿತ್ತಾಪುರದಲ್ಲಿ ಒಂದು ವೇಳೆ ಖರ್ಗೆ ಬಂದು ನಿಂತುದೇ ಆದರೆ ಅತ್ಯಧಿಕ ಮತಗಳ ಅಂತರದಲ್ಲಿ ಗೆಲ್ಲಿಸುವ ಜವಾಬ್ದಾರಿಯೂ ತನ್ನದೆಂದು ಯಾವುದೇ ನಾಚಿಕೆ ಇಲ್ಲದೆ ಬೊಗಳುತ್ತಿದ್ದ. ಕೊನೆಗೂ ಖರ್ಗೆಯನ್ನು ಬುಟ್ಟಿಗೆ ಹಾಕಿಕೊಂಡು ಗುರುಮಿಠಕಲ್ ಕ್ಷೇತ್ರದಿಂದ ಈಗ ಗೆದ್ದು ಬಂದಿದ್ದಾನೆ.

ಇಂಥ ಕುಖ್ಯಾತಿ ಹೊಂದಿರುವ ಕಾಂಗ್ರೆಸ್‌ನ ಚಿಂಚನಸೂರ ಬಾಬುರಾವ್ ಬಿಜೆಪಿಯ ಯಡ್ಡಿ ಕಲಬುರ್ಗಿಗೆ ಬಂದಾಗ ಆತನ ಹಿಂದೆ ಮುಂದೆ ಚೆಡ್ಡಿ ಶಾಸಕನಂತೆ ಓಡಾಡಿದ್ದೇ ಓಡಾಡಿದ್ದು. ಇದು ಸಾಲದೆಂಬಂತೆ ಹೈಕೋರ್ಟ್ ಸಂಚಾರಿ ಪೀಠದ ಉದ್ಘಾಟನೆಯ ಸಮಾರಂಭದಲ್ಲಿ ಪ್ರೋಟೋಕಾಲನ್ನು ಬದಿಗೊತ್ತಿ ವೇದಿಕೆಯ ಮೇಲೆ ಚಿಂಚನಸೂರ ಆಸೀನರಾಗಿದ್ದು ಎಲ್ಲರಿಗೂ ಅಚ್ಚರಿ ಮೂಡಿಸಿತು. ಈ ಅಚಾತುರ್ಯ ಹಾಗೂ ಚಿಂಚನಸೂರನ ಧೂರ್ತತನ ಗೊತ್ತಾಗಿ ಅದ್ಯಾರೋ ಮುಖ್ಯಸ್ಥರು ಆತನನ್ನು ಸೂಕ್ಷ್ಮವಾಗಿ ವೇದಿಕೆಯಿಂದ ಕೆಳಗಿಳಿಸಿದರು.

[illegible] ಗಳನ್ನು ಅವಸರವಸರವಾಗಿ ಮುಗಿಸಿ ಈ ಬಾಬುರಾವ್ ಚಿಂಚನಸೂರನ [illegible]



ರೈತರ ಆತ್ಮಹತ್ಯೆಯ ಹಿಂದಿರುವ ಸತ್ಯಗಳು

ವಿಶೇಷ ಲೇಖನ

■ ಡಾ.ರಂಗನಾಥ್, ಕಂಟನಕುಂಟೇ

ಮನುಷ್ಯ ತಿಂದು ಜೀವ ಉಳಿಸಿಕೊಳ್ಳಲು ಬೇಕಾದ ಅಕ್ಕಿ, ಬೇಳೆ, ಎಣ್ಣೆ ಇತರೆ ಆಹಾರ ಧಾನ್ಯಗಳು ಬಡವರ ಕೈಗೆ ಸಿಗಲಾರದಷ್ಟು ತುಟ್ಟಿಯಾಗಿವೆ. ಹೆಚ್ಚಳವಾಗದ ತಮ್ಮ ದುಡಿಮೆಯಲ್ಲಿ ಏರಿಕೆಯಾಗಿರುವ ವಸ್ತುಗಳಿಗೆ ದುಬಾರಿ ಬೆಲೆಯನ್ನು ಕೊಟ್ಟು ಜೀವನ ಸಾಗಿಸಲಾರದ ಆತಂಕದ ಸ್ಥಿತಿ ಸಾಮಾನ್ಯ ಜನರದ್ದಾಗಿದೆ. ಒಂದೆಡೆ ಜೀವ ಉಳಿಸಿಕೊಳ್ಳಲು ಬೇಕಾದ ಅನ್ನದ ಬೆಲೆ ದುಬಾರಿಯಾಗಿ ಜನರು ಕಂಗಾಲಾಗಿದ್ದಾರೆ. ಅದೇ ವೇಳೆಯಲ್ಲಿ ಈ ಆಹಾರವನ್ನು ಬೆಳೆಯುವ ರೈತ ಶ್ರೀಮಂತನಾಗಿದ್ದಾನೆಯೇ? ಈಗಿನ ದುಬಾರಿ ಬೆಲೆಗಳಲ್ಲಿ ನಮ್ಮ ರಾಜ್ಯದ, ದೇಶದ ರೈತ ಶ್ರೀಮಂತನಾಗಲೇಬೇಕಿತ್ತು. ಆದರೆ ಇಂದು ರೈತ ಆತ್ಮಹತ್ಯೆಯ ಹಾದಿ ಹಿಡಿದಿದ್ದಾನೆ. ಇದಕ್ಕೆ ಕಾರಣರಾರು?

ಕಳೆದ ಹತ್ತು ವರ್ಷಗಳಿಂದ ಇಡೀ ದೇಶದಲ್ಲಿ ಲಕ್ಷಾಂತರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾಕೆ? ನಮ್ಮ ರಾಜ್ಯದಲ್ಲಿ ಕಳೆದ ಒಂದೇ ತಿಂಗಳಿನಲ್ಲಿ ನಲವತ್ತಕ್ಕೂ ಹೆಚ್ಚು ರೈತರು ಯಾಕೆ ಆತ್ಮಹತ್ಯೆ ಮಾಡಿಕೊಂಡರು? ಅದರಲ್ಲಿಯೂ ಏಳು ಜನ ರೈತರು ರಸಗೊಬ್ಬರಕ್ಕಾಗಿ ಅಂಗಡಿಗಳ ಮುಂದೆ ಸಾಲುಸಾಲಾಗಿ ಕಾದೂಕಾದೂ ಸುಸ್ತಾಗಿ ನೇಣಿಗೆ, ವಿಷಕ್ಕೆ ಬಲಿಯಾದರು ಯಾಕೆ? ಈ ಪ್ರಶ್ನೆಗಳನ್ನು ರೈತ ಬೆಳೆದ ಅನ್ನ ತಿನ್ನುವ ಎಲ್ಲ ಮನುಷ್ಯರು ಇಂದು ಕೇಳಿಕೊಳ್ಳಲೇಬೇಕಿದೆ. ಇಲ್ಲವಾದರೆ ಅನ್ನ ಬೆಳೆವ ರೈತನ ಸರ್ವನಾಶ ಒಂದೆಡೆಯಾಗುತ್ತದೆ. ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ದುಬಾರಿ ಬೆಲೆಕೊಟ್ಟು ಆಹಾರ ಧಾನ್ಯಗಳನ್ನು ಖರೀದಿಸಲಾಗದೆ ಸಾವಿರಾರು ಜನರು ಹಸಿವಿನಿಂದ ಬಳಲಿ ಸಾಯಬೇಕಾಗುತ್ತದೆ. ಈಗಾಗಲೇ ಆಫ್ರಿಕಾ ಖಂಡದ ಸೊಮಾಲಿಯಾ ಮತ್ತು ಇಥಿಯೋಪಿಯಾ ದೇಶಗಳ ಜನ ಹಸಿವಿನಿಂದ ಸಾಯಲಾರಂಭಿಸಿದ್ದಾರೆ. ಆದ್ದರಿಂದ ಇದು ಕೇವಲ ಊಹೆಯ, ಆತಂಕದ ಮಾತಲ್ಲ.

ಇಂತಹ ಆತಂಕದಿಂದಾಗಿಯೇ ಕಳೆದ ವಾರ ರೈತರ ಆತ್ಮಹತ್ಯೆಗಳ ನೈಜ ಕಾರಣಗಳನ್ನು ಅರಿಯಲು ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗಳಿಗೆ ಖುದ್ದು ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದೆವು. ಕರ್ನಾಟಕ ಜನಪರ ವೇದಿಕೆಯ ಮತ್ತು ಇತರೆ ಸಂಘಟನೆಗಳ ಸದಸ್ಯರು ಹಾಗೂ ರೈತಪರ ಕಾಳಜಿಯುಳ್ಳ ಕೆಲವರು ಈ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದೆವು. ಸುಮಾರು ಒಂಭತ್ತು ತಂಡಗಳು ಕಳೆದ ಒಂದು ತಿಂಗಳಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗಳಿಗೆ ಭೇಟಿ ನೀಡಿದ್ದವು. ಅದರಲ್ಲಿ ನಮ್ಮ ತಂಡ ದಾವಣಗೆರೆ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗಳಿಗೆ ಭೇಟಿ ನೀಡಿತ್ತು. ನಾವು ಭೇಟಿ ಮಾಡಿದ ಅಷ್ಟೂ ಮನೆಗಳಲ್ಲಿ ರಸಗೊಬ್ಬರದ ಸಮಸ್ಯೆಯ ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳಿಂದಾಗಿಯೇ ಆತ್ಮಹತ್ಯೆಗಳು ಸಂಭವಿಸಿದ್ದು ಕಂಡಿತು. ಅಲ್ಲಿ ನಾವು ಕಂಡ ನೇರ ಚಿತ್ರಣವನ್ನು ನಿಮ್ಮ ಮುಂದಿಡುತ್ತೇನೆ.

'ಅಮ್ಮ ಜೋಕಾಲಿ ಜೋಕಾಲಿ'

ಚನ್ನಗಿರಿ ತಾಲ್ಲೂಕಿನ ಚಿಕ್ಕ ಹಳ್ಳಿ ಗರಗ. ಈ ಹಳ್ಳಿಯ ಪಾರ್ವತಮ್ಮ ಆತ್ಮಹತ್ಯೆ ಮಾಡಿಕೊಂಡ ರೈತ ಮಹಿಳೆ. ರೈತಕೂಲಿ ಕೆಲಸ ಮಾಡುತ್ತಿದ್ದ ಇವರ ಗಂಡನ ಹೆಸರು ಮೂರ್ತಿ. ಇವರು ಬೋವಿ ಜಾತಿಗೆ ಸೇರಿದವರು. ನಾಲ್ವರು ಗಂಡು ಮಕ್ಕಳಿದ್ದಾರೆ. ಕೊನೆಯವನಾದ ತಿಮ್ಮೇಶನಿಗೆ ಈಗ 15 ವರ್ಷ ವಯಸ್ಸು. ಬುದ್ಧಿಮಾಂದ್ಯ. ಅಂದು ಪಾರ್ವತಮ್ಮ ತನ್ನ ಮನೆಯಲ್ಲಿ ಮಧ್ಯಾಹ್ನ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಾಗ ತಿಮ್ಮೇಶಿ ಮನೆಯಲ್ಲಿದ್ದ. ತನ್ನ ತಾಯಿ ನೇಣು ಹಾಕಿಕೊಂಡು ನೇತಾಡುತ್ತಿದ್ದರೆ ಹೊರಗಿನಿಂದ ಬಂದ ಅಣ್ಣನಿಗೆ "ಅಮ್ಮ ಜೋಕಾಲಿ ಜೋಕಾಲಿ...." ಎಂದು ತೊದಲಿದ ತಿಮ್ಮೇಶಿ. ಇದನ್ನು ಕೇಳಿದ ಯಾರಿಗೇ ಆಗಲಿ ಕಣ್ಣೀರು ಬಾರದೇ ಇರದು.

ಪಾರ್ವತಮ್ಮ ಮತ್ತು ಮೂರ್ತಿಯವರಿಗೆ ಸ್ವಂತ ಜಮೀನು ಇಲ್ಲ. ಆದರೆ ಕಳೆದ ಇಪ್ಪತ್ತೈದಕ್ಕೂ ಹೆಚ್ಚು ವರ್ಷಗಳಿಂದ ಬಗರ್‌ಹುಕುಂ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದರು. ಇದಿಷ್ಟರಿಂದ ಜೀವನ ಸಾಗಿಸಲು ಸಾಧ್ಯವಾಗದೆ ಮೂರ್ತಿ ಮತ್ತು ಮಕ್ಕಳು ಗಾರೆ ಕೆಲಸ ಮಾಡುತ್ತಿದ್ದರು. ಹಾಗಾಗಿ ಕೃಷಿಯ ಕೆಲಸದ ಹೊಣೆ ಪಾರ್ವತಮ್ಮನ ಮೇಲಿತ್ತು. ಇರುವ ಭೂಮಿಯಲ್ಲಿಯೇ ಒಂದಿಷ್ಟು ಬಿತ್ತನೆ ಮಾಡಲು ಗೊಬ್ಬರಕ್ಕಾಗಿ ಆಕೆಯೇ ಗೊಬ್ಬರದಂಗಡಿಗೆ ಅಲೆದಲೆದು ದಣಿದಿದ್ದಳು. ಅಂಗಡಿಯೆದುರು ಗೊಬ್ಬರಕ್ಕಾಗಿ ಕಾಯುತ್ತಿದ್ದಾಗ ಉಂಟಾದ ನೂಕುನುಗ್ಗಲಿನಲ್ಲಿ ತನ್ನ ಬಳಿಯಿದ್ದ ಹಣವನ್ನು ಕಳೆದುಕೊಂಡು ನೊಂದಿದ್ದಳು. ಅಂದು ಮನೆಗೆ ಮರಳಿದ ಪಾರ್ವತಮ್ಮಳಿಗೆ ಮುಂದಿನ ದಾರಿ ಕಾಣದೆ ಆತ್ಮಹತ್ಯೆ ಮಾಡಿಕೊಂಡಳು. ಆದರೆ ತಿಳಿಗೇಡಿಗಳಾದ ಸ್ಥಳೀಯ ಚೆಡ್ಡಿ ಶಾಸಕ ವಡ್ನಾಳ್ ವಿರೂಪಾಕ್ಷಪ್ಪ ಮತ್ತು ಪೊಲೀಸರು "ಆಕೆ ಹೃದಯಾಘಾತದಿಂದ, ಶ್ವಾಸಕೋಶ ಸಂಬಂಧಿ ರೋಗಗಳಿಂದ ಸತ್ತಿದ್ದಾಳೆ" ಎಂದು ಪ್ರಚಾರ ಮಾಡುತ್ತಿದ್ದಾರೆ. ರಸಗೊಬ್ಬರಕ್ಕಾಗಿ ಪಾರ್ವತಮ್ಮ ಸತ್ತರು ಎಂದು ಒಪ್ಪಲೂ ಸಿದ್ಧರಿಲ್ಲದ ರಾಕ್ಷಸರಿವರು.

ಇನ್ನೊಂದು ಮುಖ್ಯ ವಿಷಯ ಯಾವುದೆಂದರೆ ಇವತ್ತಿಗೂ ನಮ್ಮ ದೇಶದಲ್ಲಿ ಕೃಷಿಯನ್ನು ಅವಲಂಬಿಸಿರುವ ಮಹಿಳೆಯರ ಆತ್ಮಹತ್ಯೆಗಳನ್ನು ರೈತರ ಸಾವು ಎಂದು ಸರಕಾರಗಳು ಪರಿಗಣಿಸದೇ ಇರುವುದು. ಅಂತಹವರ ಪಟ್ಟಿಗೆ ಪಾರ್ವತಮ್ಮ ಸೇರುತ್ತಾರೆ.

ಮಲೆಬೆನ್ನೂರು ಸಮೀಪದ ಕೊಮ್ಮಾರನಹಳ್ಳಿಯ ಅಜ್ಜಪ್ಪ ಹಿರೇಬಿದರಿ ಎಂಬ ರೈತ ಜೂನ್ ಹದಿನೆಂಟರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡರು. ಅವರು ತಮ್ಮ ಜೀವವನ್ನೇ ತೆಗೆದುಕೊಳ್ಳುತ್ತಿದ್ದಾಗ ಮಲೇಬೆನ್ನೂರಿನಲ್ಲಿ ರಸಗೊಬ್ಬರಕ್ಕಾಗಿ ಇತರೆ ರೈತರು ಪ್ರತಿಭಟನೆ ನಡೆಸುತ್ತಿದ್ದರು.

ಅಜ್ಜಪ್ಪನವರ ಪತ್ನಿ ಜಾನಮ್ಮನವರಿಗೆ ಈಗ 40 ವರ್ಷ ಇರಬಹುದು. ಕುರುಬ ಜಾತಿಗೆ ಸೇರಿದ ಇವರಿಗೆ ಒಂದು ಹೆಣ್ಣು ಎರಡು ಗಂಡು ಮಕ್ಕಳು. ನಾಲ್ಕು ತಿಂಗಳ ಹಿಂದೆ ಮೊದಲ ಬಾಣಂತನಕ್ಕೆಂದು ಮಗಳು ತವರಿಗೆ ಬಂದಿದ್ದಳು. ಇನ್ನು ಜಾನಮ್ಮಳ ಎರಡನೆಯ ಮಗ ಮಂಜುನಾಥ ದಾವಣಗೆರೆಯಲ್ಲಿ ಐಟಿಐ ತರಬೇತಿ ಪಡೆಯುತ್ತಿದ್ದ. ಆದರೆ ಎರಡನೆಯ ವರ್ಷದ ಕೋರ್ಸಿನ ಐದು ಸಾವಿರ ರೂಪಾಯಿ ಶುಲ್ಕವನ್ನು ಭರಿಸಲಾಗದೆ ಓದನ್ನು ಮೊಟಕುಗೊಳಿಸಿ ಕೂಲಿ ಮಾಡಿಕೊಂಡು ಮನೆಯಲ್ಲಿದ್ದಾನೆ. ಮೀಸಲಾತಿಯನ್ನು ವಿರೋಧಿಸುವ ಮೇಲ್ಜಾತಿ ಜನ ಹೇಗೆ ಬಡ ಕುಟುಂಬದ ಅಸಹಾಯಕ ಯುವಕರು ತಮಗೆ ಲಭ್ಯವಿರುವ ಅಲ್ಪಸ್ವಲ್ಪ ಶಿಕ್ಷಣದಿಂದಲೂ ವಂಚಿತರಾಗುತ್ತಿದ್ದಾರೆ ಎಂಬುದನ್ನು ಮಂಜುನಾಥನನ್ನು ನೋಡಿಯಾದರೂ ಅರ್ಥ ಮಾಡಿಕೊಳ್ಳಬೇಕು.

ಅಜ್ಜಪ್ಪ ಬೇರೆಯವರ ಭೂಮಿಯನ್ನು ಪಾಲಿಗೆ (ಕೋರಿಗೆ) ಪಡೆದು ವ್ಯವಸಾಯ ಮಾಡುತ್ತಿದ್ದರು. ಇವರ ಹೆಸರಿನಲ್ಲಿ ಯಾವುದೇ ಜಮೀನಿನ ಪಹಣಿ ಇರಲಿಲ್ಲ. ಅಂದ ಮಾತ್ರಕ್ಕೆ ಇವರು ರೈತರೇ ಅಲ್ಲವೇ? ಹೌದು, ಮಲೆಬೆನ್ನೂರಿನ ಕಿಡಿಗೇಡಿ ರಾಜಕಾರಣಿಗಳ ಮತ್ತು ಅಧಿಕಾರಿಗಳ ಪ್ರಕಾರ ಅಲ್ಲ. ಅಜ್ಜಪ್ಪನವರ ಬಳಿ ಪಹಣಿ ಇಲ್ಲದ ಕಾರಣ ರಸಗೊಬ್ಬರ ವಿತರಿಸುತ್ತಿದ್ದ ಅಧಿಕಾರಿಗಳು ಆತನಿಗೆ ರಸಗೊಬ್ಬರವನ್ನು ನೀಡಲು ನಿರಾಕರಿಸಿದ್ದರು. ಇದರಿಂದ ಬೇಸತ್ತ ಅಜ್ಜಪ್ಪ ಆತ್ಮಹತ್ಯೆಯಂತಹ ತೀರ್ಮಾನ ತೆಗೆದುಕೊಂಡರು.


ಇದು ಗೊತ್ತಿದ್ದರೂ, ಸ್ಥಳೀಯ ಅಧಿಕಾರಿಗಳು ಮತ್ತು ಬಿಜೆಪಿ ಪಕ್ಷದ ಮಾನವೀಯತೆ ಇಲ್ಲದ ಮುಖಂಡರು ಅಜ್ಜಪ್ಪ ರೈತರೇ ಅಲ್ಲ ಎಂದು ಪ್ರಚಾರ ಮಾಡುತ್ತಿದ್ದಾರೆ. ಮಾತ್ರವಲ್ಲ ಆತ ಮೂರ್ಛೆ ರೋಗದಿಂದ ಸತ್ತಿದ್ದಾನೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಇದೆಲ್ಲದರ ಹಿಂದೆ ಒಂದು ಷಡ್ಯಂತ್ರವಿದೆ: ಅದೇನೆಂದರೆ ರಸಗೊಬ್ಬರದ ಕೊರತೆಯಿಂದ ಯಾವುದೇ ರೈತ ಆತ್ಮಹತ್ಯೆ ಮಾಡಿಕೊಂಡಿಲ್ಲವೆಂದು ಸಮರ್ಥಿಸಿಕೊಳ್ಳುವುದು! ಇಂತಹ ಮನುಷ್ಯರಿಗೆ ಮಾನಮರ್ಯಾದೆ ಎಂಬುದು ಇರಲು ಸಾಧ್ಯವೇ?

ಇಲ್ಲಿ ಹಲವು ಮುಖ್ಯ ಪ್ರಶ್ನೆಗಳನ್ನು ಎತ್ತಲೇಬೇಕಿದೆ. ಹಕ್ಕುಪತ್ರಗಳಿಲ್ಲದೆ ವ್ಯವಸಾಯ ಮಾಡುವ ವ್ಯಕ್ತಿ ರೈತನೇ ಅಲ್ಲವೇ? ಚುನಾವಣಾ ಆಯೋಗ ನೀಡುವ ಗುರುತಿನ ಚೀಟಿ ಇಲ್ಲದವರು ಈ ದೇಶದ ಪ್ರಜೆಗಳೇ ಅಲ್ಲವೇ? ನ್ಯಾಯಬೆಲೆ ಅಂಗಡಿಯಲ್ಲಿ ನಿಜವಾದ ಬಡವರು ದಿನಸಿ ಕೇಳಿದರೆ ಆತನ ಬಳಿ ಪಡಿತರ ಚೀಟಿ ಇರದಿದ್ದರೆ ಆತ ಮನುಷ್ಯನೇ ಅಲ್ಲವೆ? ಆತನ ಹಸಿವು ನಿಜವಾದ ಹಸಿವಲ್ಲವೇ?

ಹೊನ್ನಾಳಿ ತಾಲ್ಲೂಕು ನ್ಯಾಮತಿ ಬಳಿಯ ಫಲವನಹಳ್ಳಿಯಲ್ಲಿ ರಂಗಪ್ಪ ಎಂಬುವವರು ಜೂನ್ 19ರಂದು ಜೋಳದ ರಕ್ಷಣೆಗಿಡುವ ಹುಳುಮಾತ್ರೆಯನ್ನು ನುಂಗಿ ತಮ್ಮ ಹೊಲದಲ್ಲಿಯೇ ಪ್ರಾಣಬಿಟ್ಟರು.

ಈತನಿಗೂ 45ರ ಆಸುಪಾಸಿನ ವಯಸ್ಸು. ಹೆಂಡತಿ ಮಂಜುಳ, ಮೂರು ಮಕ್ಕಳಿದ್ದಾರೆ. ಬೆಸ್ತರ ಜಾತಿಗೆ ಸೇರಿದ ರಂಗಪ್ಪ ಆತ್ಮಹತ್ಯೆಗೆ ಶರಣಾಗುವ ಮೊದಲು ಒಂದು ವಾರ ಪ್ರತಿ ದಿನವೂ ಗೊಬ್ಬರಕ್ಕಾಗಿ ಅಂಗಡಿಯ ಮುಂದೆ ನಿಂತು ನಿಂತು ದಣಿದಿದ್ದರು. ದಿನವಿಡೀ ಕಾಯ್ದರೂ ಗೊಬ್ಬರ ಸಿಗದೆ ಬೇಸತ್ತು ಸಂಜೆ ಕುಡಿದು ಮನೆಗೆ ಬರುತ್ತಿದ್ದರು. ಸಹಜವಾಗಿಯೇ ಇದು ಮನೆಯಲ್ಲಿ ಜಗಳಕ್ಕೆ ಕಾರಣವಾಗುತ್ತಿತ್ತು. ಅಂದರೆ ಗೊಬ್ಬರ ಸಿಗದಿದ್ದರಿಂದ ಮನೆಯಲ್ಲಿ ಉಂಟಾದ ಕೌಟುಂಬಿಕ ಕಲಹ ಮತ್ತು ಹೆಚ್ಚುತ್ತಿದ್ದ ಸಾಲದ ಹೊರೆ, ಇವೆರಡು ಜೊತೆಗೂಡಿ ರಂಗಪ್ಪನ ಆತ್ಮಹತ್ಯೆಗೆ ಕಾರಣವಾದವು.

ಕೊನೆಯ ಪ್ರಕರಣ ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರದ ರಾಜಣ್ಣ ಎಂಬುವವರದ್ದು. ನಲವತ್ತರ ಆಸುಪಾಸಿನಲ್ಲಿದ್ದರು ರಾಜಣ್ಣನವರ ಪತ್ನಿ ಸುನಂದಮ್ಮ. ಇನ್ನೂ ಹತ್ತು ವರ್ಷಕ್ಕಿಂತ ಚಿಕ್ಕವರಾದ ಮೂವರು ಮಕ್ಕಳು. ಗೊಲ್ಲರ ಜಾತಿಗೆ ಸೇರಿದವರು. ಬಿತ್ತನೆಗೆ ಗೊಬ್ಬರ ದೊರೆಯದೇ ಇದ್ದುದು, ಕೌಟುಂಬಿಕ ಸಮಸ್ಯೆಗಳು, ಸಮಯಕ್ಕೆ ಬಾರದ ಮಳೆ, ಎಲ್ಲವೂ ಸೇರಿ ರಾಜಣ್ಣನವರನ್ನು ಕೊನೆಗಾಣಿಸಿರುವಂತೆ ಕಾಣಿಸುತ್ತದೆ.



ಈ ನಾಲ್ಕೂ ಪ್ರಕರಣಗಳನ್ನು ಗಮನಿಸಿದಾಗ ಇವರೆಲ್ಲರ ಸಾವು ನೇರವಾಗಿ ಅಥವಾ ಪರೋಕ್ಷವಾಗಿ ರಸಗೊಬ್ಬರದ ಕೊರತೆಯೊಂದಿಗೆ ತಳುಕು ಹಾಕಿಕೊಂಡಿರುವುದು ಗೊತ್ತಾಗುತ್ತದೆ. ಸತ್ತ ನಾಲ್ವರೂ ಗೊಬ್ಬರಕ್ಕಾಗಿ ಕಾದೂಕಾದೂ ದಣಿದವರೇ ಆಗಿದ್ದಾರೆ. ಎಲ್ಲರೂ ವಿಷ ಸೇವಿಸಿ ಅಥವಾ ನೇಣುಹಾಕಿಕೊಂಡು ಸತ್ತಿದ್ದಾರೆ.

ಆದರೆ ಹೀಗೆ ಒಂದೇ ಬಾರಿಗೆ ಅಂಗಡಿಗಳಲ್ಲಿ ಗೊಬ್ಬರ ಕಾಣೆಯಾಗಿ ಸಮಸ್ಯೆ ಉದ್ಭವಿಸಿದ್ದು ಯಾಕೆ? ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಸ್ಥಳೀಯ ಗೊಬ್ಬರದ ವ್ಯಾಪಾರಿಯೊಬ್ಬರು ಹೇಳಿದಂತೆ "ಕೆಲವು ದೊಡ್ಡ ಗೊಬ್ಬರದ ವ್ಯಾಪಾರಿಗಳು ಇಡೀ ರೈಲಿನ ನಲ್ವತ್ತು ಬೋಗಿಗಳಷ್ಟು ಗೊಬ್ಬರವನ್ನು ಖರೀದಿ ಮಾಡಿ ದಾಸ್ತಾನು ಮಾಡಿರುವಷ್ಟು ಶಕ್ತರಾಗಿರುವುದು." ಹೀಗೆ ಕಳ್ಳ ದಾಸ್ತಾನು ಮಾಡಿಕೊಳ್ಳುವ ಜನರೇ ಇವತ್ತು ಸರ್ಕಾರವನ್ನು ನಿಯಂತ್ರಿಸುತ್ತಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಬಡ ರೈತರಿಗೆ ಆತ್ಮಹತ್ಯೆಯಲ್ಲದೇ ಬೇರೆ ದಾರಿ ಕಾಣದಂತಾಗುತ್ತದೆ.

ಎರಡನೆಯ ಕಾರಣ ಗೊಬ್ಬರ ತಯಾರಿಸುವ ಕಂಪನಿಗಳಿಗೆ ಸರ್ಕಾರ ನೀಡಬೇಕಿದ್ದ ಸಹಾಯಧನದ ಹಣವನ್ನು ಸಕಾಲಕ್ಕೆ ನೀಡದಿದ್ದದ್ದು. ಆ ಕಾರಣಕ್ಕೇ ಆ ಕಂಪನಿಗಳು ಗೊಬ್ಬರ ಉತ್ಪಾದನೆಯನ್ನು ನಿಲ್ಲಿಸಿದ್ದು, ಮಾರುಕಟ್ಟೆಯಲ್ಲಿ ಅಭಾವ ಉಂಟಾಗಿದ್ದು.

ಈ ಎರಡು ಸಮಸ್ಯೆಗಳಿಗೆ ನಮ್ಮನ್ನು ಆಳುವ ವರ್ಗವೇ ಕಾರಣವಲ್ಲವೇ?

ರಸಗೊಬ್ಬರದ ಕೊರತೆಗೆ ಆತ್ಮಹತ್ಯೆ ಪರಿಹಾರವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಇಂದಿನ ಕೃಷಿ ಬಿಕ್ಕಟ್ಟನ್ನು ಗಮನಿಸಿದರೆ ರೈತರ ಆತಂಕ ಅರ್ಥವಾಗುತ್ತದೆ. ಅಜ್ಜಪ್ಪನ ಉದಾಹರಣೆಯನ್ನು ತೆಗೆದುಕೊಳ್ಳಿ. ಆತನಿಗೆ ಗೊಬ್ಬರ ಸಿಕ್ಕದೆ, ಸರಿಯಾದ ಸಮಯಕ್ಕೆ ಬಿತ್ತನೆಯಾಗದಿದ್ದರೆ ಮುಂದಿನ ವರ್ಷ ತನಗೆದುರಾಗಬಹುದಾದ ಕಷ್ಟದ ಬದುಕು ಆತನನ್ನು ಕಾಡಿಸಿರಬೇಕು. ಇಡೀ ಮನೆಯ ನಿರ್ವಹಣೆಯ ಭಯ-ಆತಂಕಗಳು ಆತ ಮಾನಸಿಕ ಸ್ಥೈರ್ಯ ಕಳೆದುಕೊಳ್ಳುವಂತೆ ಮಾಡಿರಬೇಕು.

ಇಂದು ಕೃಷಿಯನ್ನು ಬಿಟ್ಟು ಬೇರೆ ಕೆಲಸ ಮಾಡಲಾಗದಷ್ಟು ಅಸಹಾಯಕನಾಗಿದ್ದಾನೆ ರೈತ. ಅದರೊಂದಿಗೆ ಇಂದಿನ ಕೃಷಿ ಕ್ಷೇತ್ರದ ಅವ್ಯವಸ್ಥೆ ಆತನಲ್ಲಿ ಹತಾಶೆ ಮೂಡಿಸಿದೆ. ಭವಿಷ್ಯದ ಬಗೆಗಿನ ಯೋಚನೆ, ಕುಟುಂಬದ ದುರ್ಬಲ ಆರ್ಥಿಕತೆ, ಕೃಷಿಯೇತರ ವರಮಾನಗಳಿಲ್ಲದಿರುವುದು, ಬದಲಾಗುತ್ತಿರುವ ಸಮಾಜದ ಜತೆಗೆ ಓಡಲಾಗದ ಸ್ಥಿತಿ, ಗ್ರಾಮೀಣ ಜನರ ಸಾಮೂಹಿಕ ಮತ್ತು ಕೌಟುಂಬಿಕ ಬದುಕಿನ ಅಧಃಪತನಗಳು... ಎಲ್ಲವೂ ಇದರೊಂದಿಗೆ ಸೇರಿಕೊಂಡಿವೆ.

ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ತೊರೆದು 'ಹಸಿರು ಕ್ರಾಂತಿ'ಯ ಹೆಸರಲ್ಲಿ ರಸಗೊಬ್ಬರ, ವಿವಿಧ ಬಗೆಯ ಬೀಜಗಳು, ಕ್ರಿಮಿನಾಶಕಗಳು ಮತ್ತು ಇತರೆ ಕೃಷಿ ಸಲಕರಣೆಗಳ ಮೇಲಿನ ಅವಲಂಬನೆಯಿಂದ ಬಿಡಿಸಿಕೊಳ್ಳಲಾಗದೆ ಮತ್ತು ಅದರ ಪರಿಣಾಮವನ್ನು ಎದುರಿಸಲೂ ಆಗದೆ ಅಡಕತ್ತರಿಯಲ್ಲಿ ಸಿಕ್ಕಿಕೊಂಡಿರುವ ರೈತ ಇಂದು ನರಳುತ್ತಿದ್ದಾನೆ. ಆದರೆ ಅವರ ಅವಲಂಬನೆಯ ಲಾಭವನ್ನು ಇಂದು ದೇಶೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಪಡೆಯುತ್ತಿವೆ. ಹಾಗಾಗಿ ಇಂದಿನ ರೈತರ ಆತ್ಮಹತ್ಯೆಗಳು ಕೇವಲ ಅವರ ವೈಯಕ್ತಿಕ ಆಯ್ಕೆಯ ಹತ್ಯೆಗಳಾಗಿರದೆ ಒಂದು ದೇಶದ ಆಳುವ ಮತ್ತು ಆಡಳಿತ ವರ್ಗಗಳು ನಡೆಸಿದ ಕೊಲೆಗಳೇ ಆಗಿವೆ.


ಈ ಮಧ್ಯೆ ಕೃಷಿಯನ್ನು ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸರಕನ್ನು ಪೂರೈಸುವ ಒಂದು ಕ್ಷೇತ್ರವಾಗಿ ಭಾವಿಸುತ್ತಾ ಬರಲಾಗಿದೆ. ಕೃಷಿ ಅಭಿವೃದ್ಧಿಗೆ ಬೇಕಾದ ಸಮಗ್ರವಾದ ವೈಜ್ಞಾನಿಕ ಯೋಜನೆಗಳನ್ನು ರೂಪಿಸದಂತೆ ಕೈಗಾರಿಕೋದ್ಯಮಿಗಳು ಮತ್ತು ಸರ್ಕಾರ ನೋಡಿಕೊಂಡಿವೆ. ಸಾಮ್ರಾಜ್ಯಶಾಹಿ ಜಾಗತೀಕರಣದ ಪ್ರಯುಕ್ತವಾಗಿ ಜಾರಿಗೆ ಬಂದಿರುವ ಹೊಸ ಆರ್ಥಿಕ ನೀತಿಗಳ ಪರಿಣಾಮವಾಗಿ ಇದ್ದ ಅಲ್ಪಸ್ವಲ್ಪ ಸವಲತ್ತುಗಳು ಕೃಷಿಕನಿಗೆ ಲಭ್ಯವಾಗದೆ ಉತ್ಪಾದನೆಯ ವೆಚ್ಚ ಏರತೊಡಗಿದೆ. ತಾನು ಉತ್ಪಾದಿಸಿದ ವಸ್ತುಗಳಿಗೆ ಸೂಕ್ತ ಬೆಲೆ ಸಿಗದೇ ಇರುವುದು ರೈತರನ್ನು ಬಲಿಯಾಗಿಸುತ್ತಿದೆ.

ಇದೆಲ್ಲದರ ಅರ್ಥ: "ಹಸಿರು ಕ್ರಾಂತಿ"ಯ ಫಲ ಈ ರೈತರ ಸರಣಿ ಆತ್ಮಹತ್ಯೆ.

ಎಲ್ಲಕ್ಕಿಂತ ಮುಖ್ಯವಾಗಿ ಇಷ್ಟೆಲ್ಲ ಸಂಕಷ್ಟದಲ್ಲಿಯೇ ತಾನು ಉತ್ಪಾದಿಸಿದ ವಸ್ತುಗಳಿಗೆ ಸೂಕ್ತ ಬೆಲೆಯನ್ನು ನಿರ್ಧರಿಸುವ ಅಧಿಕಾರ ರೈತನಿಗೆ ಇಲ್ಲದಿರುವುದು. ಜನರಿಗೆ ಅಗತ್ಯವಾಗಿ ಬೇಕಿರುವ ಗೋಧಿ, ಅಕ್ಕಿ, ಹತ್ತಿ, ಆಲೂಗಡ್ಡೆ, ಸಕ್ಕರೆ ಬೆಳೆದ ರೈತ ಸತ್ತಿದ್ದಾನೆ. ಅದನ್ನು ಖರೀದಿಸಿ ಅದಕ್ಕೆ ಬಣ್ಣಬಣ್ಣದ 'ಬ್ರಾಂಡ್‌ನೇಮ್'ಗಳನ್ನು ಅಂಟಿಸಿಕೊಂಡು ಮಾರಾಟ ಮಾಡುತ್ತಿರುವ ಉದ್ಯಮಪತಿ ಶ್ರೀಮಂತನಾಗುತ್ತಿದ್ದಾನೆ. ಒಟ್ಟು ಕೃಷಿಯ ವಾಣಿಜ್ಯೀಕರಣ ರೈತರ ಆತ್ಮಹತ್ಯೆಯ ಹಿಂದಿನ ಪ್ರಧಾನ ಕಾರಣವಾಗಿದೆ.

ಮೇಲೆ ಉಲ್ಲೇಖಿಸಿದ ಪಾರ್ವತಮ್ಮಳ ಸಾವಿನ ಹಿನ್ನೆಲೆಯಲ್ಲಿ ಒಟ್ಟು ರೈತರ ಆತ್ಮಹತ್ಯೆಯ ಮತ್ತು ಅದಕ್ಕೆ ಪ್ರತಿಕ್ರಿಯಿಸುತ್ತಿರುವ ಸಂದರ್ಭವನ್ನು ರೂಪಕದ ಭಾಷೆಯಲ್ಲಿ ಹೇಳುವುದಾದರೆ, ತನ್ನ ತಾಯಿ ತನ್ನ ಕಣ್ಣೆದುರೇ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಅದನ್ನು ಅರ್ಥಮಾಡಿಕೊಳ್ಳಲಾಗದೆ, ಅದನ್ನು ತಡೆಯಲಾಗದೆ ಆಕೆಯನ್ನೇ ನೋಡುತ್ತ ಪಿಳಿಪಿಳಿ ಕಣ್ಣುಬಿಡುತ್ತಿದ್ದ ತಿಮ್ಮೇಶನಂತೆ ನಮ್ಮ ಸಮಾಜ ಕೂಡ ಬುದ್ಧಿಮಾಂದ್ಯವಾಗಿದೆ. ■

ಗುಲಬರ್ಗಾ: ರೈತರ ಸಂವಾದ ಎಂಬ ಯಡ್ಡಿಯ ಪೋ ಪ್ಲಾಪ್



ತನ್ನ ಸಚಿವ ಸಂಪುಟದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳ ಶಾಸಕರಿಗೆ ಸ್ಥಾನ ನೀಡದಿದ್ದರೂ ತಾನು ಉತ್ತರ ಕರ್ನಾಟಕದ ಜನಗಳ ಪರವಾಗಿರುವ ವ್ಯಕ್ತಿ ಎಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಮುಖ್ಯಮಂತ್ರಿ ಯಡ್ಡಿಯ ಸವಾರಿ ಇತ್ತೀಚೆಗೆ ಕಲಬುರ್ಗಿಗೂ ಬಂದುಹೋಯಿತು. ತಾನು ರೈತರ ಪರವಾಗಿರುವ ಮುಖ್ಯಮಂತ್ರಿ, ತಾನೊಬ್ಬ ರೈತನ ಮಗ ಎಂದು ಪೋಜು ಕೊಡಲು ನೋಡಿದ ಯಡ್ಡಿ ಪಿಗ್ಗಿ ಬಿದ್ದ ಘಟನೆಯೊಂದು ಕಲಬುರ್ಗಿಯಲ್ಲಿ ನಡೆಯಿತು.

'ರೈತರೊಂದಿಗೆ ಸಂವಾದ' ಎಂದು ಪತ್ರಿಕೆಗಳಲ್ಲಿ ಪ್ರಕಟವಾದ ಜಾಹೀರಾತಿಗೆ ಕೋಟಿ ರೂಪಾಯಿ ಖರ್ಚು ಮಾಡಿದ ಯಡ್ಡಿ ಈ ಕಾರ್ಯಕ್ರಮವನ್ನು ಮಾತ್ರ ಕಾಟಾಚಾರಕ್ಕೆ ಎಂಬಂತೆ ಮುಗಿಸಿ ಎದ್ದು ಹೋದ. ಬೆಳಗ್ಗೆ 11 ಗಂಟೆಗೆ ಶುರುವಾಗಬೇಕಾಗಿದ್ದ ಕಾರ್ಯಕ್ರಮ ನಿಗದಿತ ಸಮಯ ಮುಗಿದು ಎರಡು ತಾಸಾದರೂ ಆರಂಭಗೊಳ್ಳಲೇ ಇಲ್ಲ. ಇನ್ನು 'ರೈತರೊಂದಿಗಿನ ಸಂವಾದ' ಎಂದು ಅದಕ್ಕೆ ಹೆಸರಿಡಲಾಗಿತ್ತಾದರೂ ಆ ಸಭೆಗೆ ಹಾಜರಾದವರಲ್ಲಿ ಬಹುತೇಕವಾಗಿ ಬಿಜೆಪಿಯ ಪಿಂಪ್‌ಗಳೆ ಇದ್ದರು. ಅವರಿಗೆ ರೈತರ ಸಮಸ್ಯೆಗಳೇನು? ಇಂದಿನ ಕೃಷಿಯ ಬಿಕ್ಕಟ್ಟುಗಳು ಎಂತಹದ್ದು? ರೈತರ ಇಂದಿನ ಕರುಣಾಜನಕ ಸ್ಥಿತಿಗೆ ಕಾರಣರ್‍ಯಾರು? ಎಂಬ ಬಗ್ಗೆ ಅವರಿಗೆ ಎಳ್ಳಷ್ಟೂ ಮಾಹಿತಿ ಇರಲಿಲ್ಲ.

ಪ್ರತಿ ತಾಲೂಕಿನ ಕೃಷಿ ಇಲಾಖೆಯ ಮುಖ್ಯಾಧಿಕಾರಿಗಳು ಇಂಥ ಐನಾತಿ ಆಸಾಮಿಗಳನ್ನೆ ಗುರುತಿಸಿ ಅವರಿಗೆ ಪಾಸ್ ಒದಗಿಸಿ ಕಳುಹಿಸಿಕೊಟ್ಟಿದ್ದರು. ಕೇವಲ 200 ಆಸನಗಳನ್ನು ಹೊಂದಿರುವ ಕಚೇರಿಯಲ್ಲೇ ಈ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರಿಂದಾಗಿ ನಿಜವಾದ ರೈತರು ಬಹುಸಂಖ್ಯೆಯಲ್ಲಿ ಕಟ್ಟಡದ ಹೊರಗಡೆಯೆ ಉಳಿದುಕೊಳ್ಳಬೇಕಾಯಿತು. ಎಷ್ಟರಮಟ್ಟಿಗೆಂದರೆ, ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಬಸವರಾಜ ತಂಬಾಕೆ ತಮ್ಮ ರೈತರೊಂದಿಗೆ ಸಂವಾದ ಕಾರ್ಯಕ್ರಮದ ಕಟ್ಟಡದ ಹೊರಗೆ ನಿಂತು ಧಿಕ್ಕಾರ ಕೂಗುವಂತಾಯಿತು.



'ರೈತರೊಂದಿಗೆ ಸಂವಾದ' ಈ ಕಾರ್ಯಕ್ರಮದ ಉದ್ದೇಶ ಎಂಬುದನ್ನೇ ಸ್ವತಃ ಮರೆತ ಯಡ್ಡಿ ತಮ್ಮ ಚಡ್ಡಿ ಪಕ್ಷದ ಕಾರ್ಯಕರ್ತರು ತಂದ ಹೂಮಾಲೆ, ಶಾಲುಗಳನ್ನು ಹೊದಿಸಿಕೊಳ್ಳುವುದರಲ್ಲೇ ಖುಷಿ ಪಡುತ್ತಿದ್ದರು. ಈ ಮಧ್ಯೆ ಆಗೀಗ ಎದ್ದೇಳುವುದು, ಕೂಡುವುದು; ಕೈಯಲ್ಲಿದ್ದ ಫೈಲನ್ನು ಒಮ್ಮೆ ಟೇಬಲ್ ಮೇಲಿಡುವುದು, ಮತ್ತೊಮ್ಮೆ ಅದನ್ನು ತೆಗೆದುಕೊಂಡು ಎದೆಯ ಮೇಲೆ ಇಟ್ಟುಕೊಳ್ಳುವುದು; ಒಮ್ಮೆ ಹಸನ್ಮುಖರಾಗಿ ಜನರತ್ತ ದಿಟ್ಟಿಸಿದರೆ, ಇನ್ನೊಮ್ಮೆ ಗಂಭೀರ ವದನರಾಗಿ ಕುಳಿತು ತಾನು 'ಸಿಎಂ' ಎಂಬುದನ್ನು ಇತರರಿಗೆ ನೆನಪಿಸುವಂತೆ ಪೋಜು ಕೊಡುತ್ತಿದ್ದದ್ದು... ಇವೆಲ್ಲ ನಡೆದೇ ಇತ್ತು ಮತ್ತು ಹಲವರಿಗೆ ಮನರಂಜನೆಯನ್ನೂ ನೀಡಿತು!

ಇದೆಲ್ಲದರ ಮಧ್ಯೆ ರಾಯಚೂರಿನಿಂದ ಬಂದಿದ್ದ ಮಾನ್ವಿಯ ಚಾಮರಸ ಎಂಬ ರೈತ ಸಂಘದ ಪದಾಧಿಕಾರಿಯೊಬ್ಬರು "ಸರಕಾರಗಳು ರೈತರನ್ನು ಯಾವ ಪರಿ ಶೋಷಿಸುತ್ತಿವೆ? ರೈತರ ಸಾವಿಗೆ ಸರಕಾರಗಳೆ ಹೇಗೆ ಕಾರಣ? ಗ್ಯಾಟ್ ಮತ್ತು ಡಂಕೆಲ್ ಒಪ್ಪಂದಗಳು ತಮ್ಮ ಬದುಕಿಗೆ ಹೇಗೆ ಮುಳುವಾಗಿವೆ? ಇವತ್ತಿನ ಹಣದುಬ್ಬರಕ್ಕೆ ಕಾರಣಗಳೇನು?" ಎಂದೆಲ್ಲಾ ಸಾವಧಾನವಾಗಿ ಹೇಳುತ್ತಿರಬೇಕಾದರೆ ಮುಖ್ಯಮಂತ್ರಿಗೆ ಅದನ್ನು ಕೇಳುವ ವ್ಯವಧಾನವೇ ಇರಲಿಲ್ಲ. ಇದನ್ನು ಗಮನಿಸಿದ ಪಿಂಜರಾಪೋಲು ಅಧಿಕಾರಿಗಳು ಚಾಮರಸರನ್ನು "ನಿಮಗೆ ಕೊಟ್ಟ ಸಮಯ ಮುಗಿ[illegible]ತು" ಎಂದು ಕುಳ್ಳಿರಿಸಲು ಯತ್ನಿಸಿದರು. ಒಂದು ಹಂತದಲ್ಲಿ ಕೆ.ಬಿ.ಶ್ಯಾಣಪ್ಪ ಎಂಬ ಮಾಜಿ ಕಮ್ಯುನಿಸ್ಟ್ ಮತ್ತು ಹಾಲಿ ಬಿಜೆಪಿಯ ವಿಧಾನಪರಿಷತ್ ಸದಸ್ಯ ಕೂಡ ಮ್ಯಾನ್‌ಹ್ಯಾಂಡ್ಲಿಂಗ್‌ಗೆ ಮುಂದಾದರು. ಆದರೆ ಹೋರಾಟದ ಹಾದಿಯಲ್ಲಿರುವ ರೈತರು ಶಾಣಪ್ಪನತ್ತ ದುರುಗುಟ್ಟಿ ನೋಡಿದಾಗ ಆತ ವಿಧಿ ಇಲ್ಲದೆ ಹಿಂದೆ ಸರಿಸಿದರು.

ಆಳಂದದ ಶಾಸಕ ಮಾಲೀಕಯ್ಯ ಗುತ್ತೇದಾರ ಎದ್ದು ನಿಂತು ಮಾತಾಡಬೇಕೆಂದಾಗ ಸ್ವತಃ ಯಡ್ಡಿ "ಮಾಲೀಕಯ್ಯನವರೆ, ನೀವು ವಿಧಾನಸಭೆಯಲ್ಲಿ ಮಾತಾಡಿ" ಎಂದರು. ಇದರಿಂದ ವ್ಯಗ್ರನಾದ ಮಾಲೀಕಯ್ಯ ತಮ್ಮ ಎಂದಿನ ಧಾಟಿಯಲ್ಲಿ "ಹಾಗಿದ್ದರೆ ಈ ಸಭೆಗೆ ನಮ್ಮನ್ಯಾಕೆ ಕರೆಸಿದ್ರಿ?" ಎಂದು ಪ್ರಶ್ನಿಸುತ್ತಲೆ ಮಾತಾಡತೊಡಗಿದಾಗ ಮುಖ್ಯಮಂತ್ರಿಯ ಮುಖ ಕಪ್ಪಿಟ್ಟು ಕಳಾಹೀನವಾಯಿತು. ರಾಜ್ಯದ ಕೃಷಿ ಮಂತ್ರಿ ರವೀಂದ್ರನಾಥರಂತೂ ತನಗೂ, ಈ ಕಾರ್ಯಕ್ರಮಕ್ಕೂ ಯಾವುದೇ ಸಂಬಂಧವಿಲ್ಲ ಎಂಬಂತೆ ಹರಟೆ ಕೊಚ್ಚುತ್ತ ಕುಳಿತಿದ್ದರು. ಇದೆಲ್ಲದರಿಂದ ರೈತರ ಸಮಸ್ಯೆಗಳ ಬಗ್ಗೆ ಬಿಜೆಪಿ ಸರಕಾರಕ್ಕೆ ನಿಜವಾಗಲೂ ಎಷ್ಟು ಕಾಳಜಿ ಇದೆ ಎಂಬುದು ಅರ್ಥವಾಗುತ್ತಿದೆ.

ಈ [illegible] ಕಾರ್ಯಕ್ರಮ ನಡೆದ [illegible] ವಿಧಾನಸೌಧದ ಹೊರಗಡೆ [illegible] ಕಾದರು. ಚಿಂಚೋಳಿ ತಾಲೂಕಿನ [illegible] ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ರೈತ [illegible] ದರ್ಶನಕ್ಕಾಗಿ ಆಕೆ ಕಾಯುತ್ತಿ[illegible] ಕಡೆ ಕಣ್ಣೆತ್ತಿಯೂ [illegible] ಬರಾಬರಾ ಎಂದು ಮುಂದಕ್ಕೆ ಸಾಗೇ ಬಿಟ್ಟ.

ಇದು ಯಡ್ಡಿಯ ರೈತ ಪ್ರೇಮದ ಒಂದು ಸಣ್ಣ ಝಲಕು.


■ ವಿಶ್ವಾರಾಧ್ಯ ಸತ್ಯಂಪೇಟೆ

ಜಗತ್ತಿನೊಂದಿಗೆ 'ಟೂ' ಬಿಡುವುದೂ... 'ಸೆ' ಎನ್ನುವುದೂ....

ಅವತ್ತೊಂದು ದಿನ ಸ್ಕೂಲಿನಿಂದ ಹಿಂದಿರುಗಿದ ನನ್ನ ಮಗಳು ಇಶಾ ಸ್ವಲ್ಪ ಬೇಜಾರಾಗಿದ್ದಂತೆ ಕಂಡಳು. "ಯಾಕೆ ಸಪ್ಪಗೆ ಇದ್ದೀಯಾ ಕಂದಾ?" ಅಂತ ಕೇಳಿದ್ದಕ್ಕೆ "ಆ ಚರಣ್ ಇದ್ದಾನಲ್ಲಾ, ಅವನು ಇವತ್ತು ನನ್ನ ಜೊತೆ ಟೂ ಬಿಟ್ಟ" ಅಂದಳು. 'ಟೂ' ಅನ್ನೋ ಪದ ಕೇಳಿ ಎಷ್ಟು ವರ್ಷ ಆಯಿತಲ್ಲಪ್ಪಾ ಎಂದು ಯೋಚಿಸುತ್ತಾ ನಾನು ಸುಮ್ಮನೆ ನಕ್ಕೆ. ನಾನು ಏಕೆ ನಗುತ್ತಿದ್ದೆ ಎಂದು ಗೊತ್ತಾಗದಿದ್ದ ಇಶಾ ನನ್ನತ್ತ ಸ್ವಲ್ಪ ಗುರಾಯಿಸಿ ನೋಡಿದಳು. ನನಗೆ ತಮಾಷೆಯಾಗಿ ಕಂಡಿದ್ದು ಅವಳಿಗೆ ಸೀರಿಯಸ್ ವಿಷಯ ಆಗಿದ್ದರಿಂದ "ಯಾಕೆ ಅವನು ಟೂ ಬಿಟ್ಟ?" ಅಂದೆ.

"ಗೊತ್ತಿಲ್ಲ ನಾನು 'ಸೆ' ಅಂದ್ರೂ ಅವನು 'ಆನೆ ಮೇಲೆ, ಕುದ್ರೆ ಮೇಲೆ, ಒಂಟೆ ಮೇಲೆ ಟೂ' ಅಂದ" ಎಂದಳು.

"ನೀನೂ ಅವನ ಜೊತೆ ಟೂ ಬಿಡಬೇಕಿತ್ತು" ಅಂತ ಹೇಳಿ ಬೇರೆ ವಿಷಯಗಳ ಬಗ್ಗೆ ಅವಳ ಗಮನವನ್ನು ತಿರುಗಿಸಿದೆ. ಮಾರನೆ ದಿನ ಸ್ಕೂಲ್ ಬಸ್ಸಿಗಾಗಿ ನಾವೆಲ್ಲಾ ಕಾದು ನಿಂತಿದ್ದಾಗ ಚರಣ್‌ನ ತಾಯಿಗೆ "ಅವನು ಇಶಾ ಜೊತೆ ಟೂ ಬಿಟ್ಟಿದ್ದಾನಂತೆ" ಎಂದು ತಮಾಷೆ



ಮಾಡಿದೆ. "ಅಯ್ಯೋ, ಇವನಿಗೆ ಹುಡ್ಗೀರು ಅಂದ್ರೆ ಇಷ್ಟಾ ಇಲ್ವಂತೆ. ಪಿಂಕ್ ಬಣ್ಣ, ಗೊಂಬೆ ಹೀಗೆ ಹುಡುಗಿಯರಿಗೆ ಸಂಬಂಧಿಸಿದ್ದು ಏನೇ ಆದ್ರೂ ಮುಖ ತಿರುಗಿಸುತ್ತಾನೆ" ಅಂದರು ಅವರು. ಈ ಚರಣ್ ನನ್ನ ಇಶಾಳಷ್ಟೇ ಚೋಟುದ್ದು; ಇಬ್ಬರಿಗೂ ನಾಲ್ಕು ವರ್ಷ. "ದೊಡ್ಡವನಾಗಿ ಹುಡುಗಿಯರ ಹಿಂದೆ ಬಿದ್ದು ಲವ್ವು, ಡವ್ವು ಅಂತ ಶುರು ಮಾಡೋ ವರೆಗೂ ಹೀಗೇ ಇರಲಿ ಬಿಡಿ" ಎಂದು ನಾನಂದು ಇಬ್ಬರೂ ನಕ್ಕೆವು.

ನಮ್ಮ ಮನೆ ಹತ್ತಿರ ಚಿಕ್ಕ ಹುಡುಗಿಯರ ಹಾಸ್ಟೆಲ್ ಇದೆ. ದಿನಾ ಬೆಳಗ್ಗೆ ನಾನು ವಾಕಿಂಗ್ ಹೋದಾಗ, ಅಲ್ಲಿನ ಹುಡುಗಿಯರು ಸ್ಕೂಲಿಗೆ ಹೋಗುತ್ತಿರುತ್ತಾರೆ. ಮಕ್ಕಳು ಸ್ಕೂಲಿಗೆ ಹೋಗೊ ಟೈಮಿಗೆ ನನ್ನ ವಾಕಿಂಗಾ? ಹೌದು, ಬೆಳಗ್ಗೆ ಇಶಾಳನ್ನು ಎದ್ದೇಳಿಸಿ, ಅವಳಿಗೆ ಸ್ನಾನ ಮಾಡಿಸಿ, ರೆಡಿ ಮಾಡಿಸಿ, ಅವಳನ್ನು ಸ್ಕೂಲ್ ಬಸ್‌ಗೆ ಹತ್ತಿಸಿದ ಮೇಲೆಯೇ ನನ್ನ ವಾಕಿಂಗ್ ಶುರು.

ಆ ಹಾಸ್ಟೆಲ್‌ನ ಬಾಲಕಿಯರು ಯೂನಿಫಾರಂ ಹಾಕಿಕೊಂಡು, ಪುಟ್ಟ ಕಲ್ಲುಗಳನ್ನು ಕಾಲಿನಿಂದ ಒದ್ದುಕೊಂಡು, ಆಟ ಆಡಿಕೊಂಡು, ಪಾರ್ಕಿನಲ್ಲಿರುವ ನೇರಳೆ ಮರದಿಂದ ಬಿದ್ದಿರುವ ಹಣ್ಣುಗಳನ್ನು ಆಯ್ದುಕೊಂಡು ಸ್ಕೂಲಿಗೆ ಹೋಗೋದನ್ನ ನೋಡಿದ್ರೆ, ಎಷ್ಟು ಮಜಾ ಅಲ್ವಾ ಅವರ ಲೈಫು ಅನ್ನಿಸುತ್ತೆ. ಅವರ ತದ್ವಿರುದ್ಧವಾಗಿ ನಾನು ಇವತ್ತು ಏನೇನು ಕೆಲಸ ಇದೆ, ಸಿನಿಮಾ ಸ್ಕ್ರಿಪ್ಟ್‌ನಲ್ಲಿ ಏನೇನು ಸೇರಿಸಬೇಕು, ಆದ್ರೆ ತಲೆ ಖಾಲಿಯಾಗಿದೆ, ಅದಕ್ಕೆ ತಕ್ಕಂತೆ ಬ್ಯಾಂಕಿನಲ್ಲಿರುವ ಹಣವೂ ನೀರಿನಂತೆ ಸೋರಿಹೋಗ್ತಿದೆ ಅಂತೆಲ್ಲಾ ಯೋಚನೆ ಮಾಡಿಕೊಂಡು ವಾಕಿಂಗ್ ಮಾಡುತ್ತಿರುತ್ತೇನೆ. ಆದರೆ ಆ ಹುಡುಗಿಯರು ಕಿಲಕಿಲ ಅಂತ ನಕ್ಕೊಂಡು, 'ಗುಡ್ ಮಾರ್ನಿಂಗ್ ಆಂಟಿ' ಅಂತ ಹೇಳುತ್ತಾ ಸಾಗುತ್ತಿರುತ್ತಾರೆ.

ಅವತ್ತೊಂದು ದಿನ ಬೇರೆ ಹುಡುಗಿಯರಿಂದ ಪ್ರತ್ಯೇಕವಾಗಿ, ಬೇಜಾರಾಗಿದ್ದ ಮುಖ ಹೊತ್ತಿದ್ದ ಹುಡುಗಿಯೊಬ್ಬಳು ಒಬ್ಬಳೇ ಶಾಲೆಗೆ ಹೋಗುತ್ತಿದ್ದದ್ದನ್ನು ನೋಡಿ "ಯಾಕೆ? ಇವತ್ತು ನಿನ್ನ ಫ್ರೆಂಡ್ ನಿನ್ನ ಜೊತೆ ಇಲ್ವಾ?" ಅಂತ ಕೇಳಿದೆ. ಆಗ "ಅವರೆಲ್ಲಾ ನನ್ನ ಜೊತೆ ಟೂ ಬಿಟ್ಟಿದ್ದಾರೆ. ನನ್ನ ಹತ್ರ ಮಾತಾಡೋದನ್ನ ನಿಲ್ಲಿಸಿದ್ದಾರೆ" ಎಂದು ಆಕೆ ಬೇಸರದಿಂದ ಹೇಳಿದಳು.

ನನ್ನ ಮನಸ್ಸು ಫ್ಲ್ಯಾಷ್‌ಬ್ಯಾಕ್‌ಗೆ ಜಾರಿತು. ಅಂದಕಾಲತ್ತಿಲ ನಾನೂ ಕೂಡ ಶಾಲೆಗೆ ಹೋಗುತ್ತಿದ್ದಾಗ ನನ್ನ ಫ್ರೆಂಡ್ ಸುಜಯಾ ಜೊತೆ ಟೂ ಬಿಟ್ಟಿದ್ದು ನೆನಪಾಯಿತು. ಅವತ್ತು ಅವಳ ಮೇಲೆ ನನಗೆ ಸಿಟ್ಟು ಬರಲು ಕಾರಣ ಇತ್ತೋ ಇಲ್ವೊ ಅನ್ನೋದೂ ಮರೆತುಹೋಗಿದೆ. ಆದರೆ "ನೀನು ನನ್ನ ಜೊತೆ ಬರಬೇಡ. ನೀನು ಆ ಫುಟ್‌ಪಾತ್‌ನಲ್ಲಿ ನಡಿ, ನಾನು ಈ ಫುಟ್‌ಪಾತ್‌ನಲ್ಲಿ ನಡೀತೀನಿ" ಅಂತ ಹೇಳಿದ್ದೆ. ಅವಳೊಂದು ತೀರಾ, ನಾನೊಂದು ತೀರಾ ಎನ್ನುವ ಹಾಗೆ ಇಬ್ಬರೂ ಗಂಟು ಮುಖ ಹೊತ್ತು ನಡೆಯುತ್ತಾ, ಅವಾಗೀವಾಗ ಅವಳು ಬರುತ್ತಿದ್ದಾಳೊ ಇಲ್ಲವೋ ಎಂದು ನಾನು, ನಾನು ಬರುತ್ತಿದ್ದೇನೊ ಇಲ್ಲವೊ ಎಂದು ಅವಳು ವಾರೆಗಣ್ಣಿನಲ್ಲಿ ನೋಡುತ್ತಾ ಸ್ಕೂಲ್ ಸೇರಿದ್ದೆವು!

ಚಿಕ್ಕಮಕ್ಕಳು ಜಗಳವಾಡಿ 'ಟೂ' ಬಿಟ್ಟಾಗ ದೊಡ್ಡವರಿಗೆ ನಗು ಬರುವುದು ಸಹಜ. ಆ ಪುಟಾಣಿಗಳ ಮನಸ್ಸಿನಲ್ಲಿ ಆ ಜಗಳದಿಂದ ಎಷ್ಟು ತಳಮಳ ಉಂಟಾಗಿರಬಹುದು ಎಂಬ ಯೋಚನೆ ಕೂಡ ನಮಗೆ ಬರಲ್ಲ. ಈಗಿನ ಸಮಾಜದಲ್ಲಿ ಒಂದು ಸಂಸಾರಕ್ಕೆ ಒಂದು ಮಗು ಅಂತ ಆಗಿರುವಾಗ, ಆ ಮಕ್ಕಳನ್ನು ಈಗ ಒಂಟಿತನ ಕಾಡಲಾರಂಭಿಸಿದೆ.

ನಮ್ಮ ಸ್ಕೂಲ್ ಬಸ್‌ಸ್ಟಾಪಿನಲ್ಲಿ ಪ್ರತಿದಿನ ಸಂಭವಿಸುವ ದೃಶ್ಯವನ್ನೇ ತೆಗೆದುಕೊಳ್ಳಿ. ಮಗು ಸ್ಕೂಲ್ ಬಸ್ ಹತ್ತಿದ ತಕ್ಷಣವೇ ಎಲ್ಲ ಅಪ್ಪಅಮ್ಮಂದಿರು ತಮ್ಮ ಕೆಲಸಗಳತ್ತ ಓಡುತ್ತಿರುತ್ತಾರೆ. ಸ್ಕೂಲ್ ಬಿಟ್ಟ ನಂತರ ಮಕ್ಕಳನ್ನು ಪಿಕ್‌ಅಪ್ ಮಾಡಲು ಅಪ್ಪ-ಅಮ್ಮಂದಿರೊ, ಅಜ್ಜ-ಅಜ್ಜಿಯರೇ ಬರುವುದಿಲ್ಲ. ಬದಲಾಗಿ ಮನೆ ಕೆಲಸದವರೇ ಬಂದು ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ. ಮನೆಯಲ್ಲಿ ಆ ಮಕ್ಕಳು ಒಂಟಿಯಾಗಿ ಆಟಾಡುತ್ತಾ ಅಪ್ಪ ಅಮ್ಮಂದಿರಿಗೆ ಕಾಯುವುದೇ ಅವರ ಜೀವನವಾಗಿ ಬಿಟ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳು ಸುಮ್‌ಸುಮ್ನೆ 'ಟೂ' ಬಿಟ್ಟರೆ ನಾವು ಅವರಿಗೆ ಸಮಾಧಾನ ಮಾಡೋದು ಹೇಗೆ? ಹಲವೊಮ್ಮೆ ಅನ್ನಿಸುತ್ತೆ, ಇಶಾಳೊಂದಿಗೆ 'ಟೂ' ಬಿಟ್ಟವರ ಜುಟ್ಟು ಹಿಡಿದು "ನನ್ನ ಮಗಳು ತಪ್ಪು ಮಾಡಿಲ್ಲ. ಅವಳಿಗೆ 'ಸೆ' ಅನ್ನು" ಅಂತ ಬಲವಂತ ಮಾಡಬೇಕು ಅಂತ! ಆದರೆ ನಾವು ಹಾಗೆ ಮಾಡಕ್ಕಾಗಲ್ಲ, ಆದ್ದರಿಂದ ಮಕ್ಕಳೇ ತಮ್ಮ ಜಗಳ ಬಗೆಹರಿಸಿಕೊಳ್ಳುತ್ತಾರೆ ಅಂತ ಸುಮ್ಮನಾಗಿ ಬಿಡ್ತೇವೆ. ಅದು ಹಾಗೆಯೇ ಆಗುತ್ತೆ ಕೂಡ!


ಮಕ್ಕಳ ನಡುವೆ 'ಟೂ' ಸಮಸ್ಯೆಗಳಿಗೆ ಇರುವ ಈ 'ಸೆ' ಪರಿಹಾರ ದೊಡ್ಡವರ ನಡುವೆಯೂ ಇದ್ದರೆ ಲೈಫ್ ಎಷ್ಟು ಚೆನ್ನಾಗಿರುತ್ತಿತ್ತಲ್ಲವೇ?

ಆದರೆ 'ದೊಡ್ಡ'ವರಾದ ನಾವು ಅಪ್ಪ ಅಮ್ಮನ ಜೊತೆ ಪಾಕೆಟ್ ಮನಿಯಿಂದ ಹಿಡಿದು ನಮ್ಮ ಆಯ್ಕೆಯಾದ ಪ್ರೇಯಸಿಗಳ ತನಕ ಜಗಳ; ಅಕ್ಕತಮ್ಮ ಅಣ್ಣತಂಗಿ ನಡುವೆ ಆಸ್ತಿಗಾಗಿ, ಮೌಲ್ಯಗಳಿಗಾಗಿ ಜಗಳ; ಇನ್ನೂ ಸ್ವಲ್ಪ ದೊಡ್ಡವರಾದ ಮೇಲೆ ಸಹೋದ್ಯೋಗಿಗಳ ಜೊತೆ, ಜೀವನ ಸಂಗಾತಿಗಳ ಜೊತೆಯೂ ಜಗಳ; ಕೆಲವೊಮ್ಮೆ ನಾವು ಹಿಡಿದಿರುವ ದಾರಿ ಬಗ್ಗೆ, ನಮ್ಮ ಆಲೋಚನೆಗಳ ಬಗ್ಗೆ, ನಮ್ಮಲ್ಲಿನ ತಳಮಳಗಳ ಬಗ್ಗೆ ನಮ್ಮೊಳಗೇ ಜಗಳ!

ಇದೆಲ್ಲದರಿಂದ ರೋಸತ್ತು ಇಡೀ ಜಗತ್ತಿನೊಂದಿಗೇ, ಇಡೀ ಸಮಾಜದೊಂದಿಗೇ 'ಟೂ' ಬಿಡಬೇಕು ಅಂತ ನಮಗೂ ಅನ್ನಿಸುತ್ತೆ ಅಲ್ವಾ?

ಆದರೆ ಹೊಸ ಸಿನಿಮಾದ ಕತೆ ನನ್ನ ಮನಸ್ಸಿನಲ್ಲಿ ಚಿಗುರೊಡೆದಾಗ, ಯಾರೊ ನನ್ನ ಸಿನಿಮಾಗಳನ್ನು ಮೆಚ್ಚಿದಾಗ, ನನ್ನ ಜೊತೆ ಇರುವವರು ಪ್ರೋತ್ಸಾಹದ ಮಾತುಗಳನ್ನಾಡಿದಾಗ, ನನ್ನ ಪುಟ್ಟ ಇಶಾ "ಐ ಲವ್ ಯು ಅಮ್ಮ" ಎಂದಾಗ, ಯಾರೊಂದಿಗೂ 'ಟೂ' ಬಿಡುವುದು ಬೇಡ, ಎಲ್ಲರಿಗೂ 'ಸೆ' ಎನ್ನುವುದು ಎಷ್ಟು ಸಹಜವಾಗಿರುತ್ತೆ, ಎಷ್ಟು ಮಜಾ ಕೊಡುತ್ತದಲ್ಲವೇ?!

■ ಕವಿತಾ ಲಂಕೇಶ್



ಪುಟ್ಟ ಹುಡುಗಿಯೊಬ್ಬಳು ತನ್ನ ಅಮ್ಮನನ್ನು ಕೇಳಿದಳು: "ಮಾನವಕುಲ ಸೃಷ್ಟಿಯಾಗಿದ್ದು ಹೇಗೆ?"

ಅಮ್ಮ ಹೇಳಿದಳು: "ದೇವರು ಮೊದಲು ಆಡಮ್ ಮತ್ತು ಈವ್‌ಳನ್ನು [illegible]"

ಕೆಲ ದಿನಗಳ ನಂತರ ಅದೇ ಪ್ರಶ್ನೆಯನ್ನು ಹುಡುಗಿ [illegible] ಅದಕ್ಕೆ ಅಪ್ಪ ಹೇಳಿದ: "ಮೊದಲು ಮಂಗಗಳಿದ್ದವು. ಕಾಲಕ್ರಮೇಣ ಆ ಮಂ[illegible]"

[illegible] "ಅಮ್ಮಾ, ದೇವರಿಂದ ಮಾನವ ಕುಲ ಸೃಷ್ಟಿ[illegible] ಆದರೆ ಅಪ್ಪ ಮಂಗನಿಂದ ಮಾನವ ಬಂದ ಅಂತ ಹೇಳಿದರಲ್ಲ?" ಕೇಳಿದಳು.

ಅದಕ್ಕೆ ಅಮ್ಮ ಉತ್ತರಿಸಿದಳು:

"ನೋಡು, ನಾನು ನನ್ನ ಅಪ್ಪ ಅಮ್ಮನ ಬಗ್ಗೆ ಹೇಳಿದೆ. ನಿನ್ನ ಅಪ್ಪ ಅವರ ಅಪ್ಪ ಅಮ್ಮನ ಬಗ್ಗೆ ಹೇಳಿದ್ದಾರೆ ಅಷ್ಟೆ." ■

ಜಗ್ಗೇಸ ಹದಿನೈದು ಕೋಟಿಗೆ ಹರಾಜಾದನಂತೆ!

ಕಟ್ಟೆಪುರಾಣ

ಬಿ. ಚಂದ್ರೇಗೌಡ

ಕೆಡಚಟ್ಟಾಗಿ ಕಾಲ್ಗೆಗೆದಂತೆ ಕಂಡ ಮಳೆಯ ಬಗ್ಗೆ ಮಾತನಾಡಿದಷ್ಟು ಬೇಸರವಾದ್ದರಿಂದ ಕಾಳಮಾವ ಮೌನಕ್ಕೆ ಶರಣಾದ. ಆಗ ಉಗ್ರಿ,

"ರೈತರಿಗೆ ಗೊಬ್ಬರ ತಂದು ಕೊಡಯ್ಯ ಅಂದ್ರೆ ಈ ಎಡೂರಪ್ಪ ಮಾಡ್ತಾಯಿರೊ ಕ್ಯಲಸ ನೋಡು ಮಾವ" ಎಂದ.

"ಏನು ಮಾಡ್ತ ಅವುನ್ನ?"

"ಕಾಂಗ್ರೆಸ್, ಜೆಡಿಎಸ್ ಯಮ್ಮೆಲ್ಲೆಗಳ ಹಿಡಕಂದು ಬಂದು ಮಂತ್ರಿ ಮಾಡ್ತ ಅವುನೆ."

"ಅವ್ರಾಕಿಲ್ಲಿಗೆ ಬಂದು ಮಂತ್ರಿಗಳಾದವುಲ?"

"ಆಗದೇನು? ಈಗಾಗ್ಲೆ ಮೂರು ಜನ ಮಂತ್ರಿಗಳಾದ್ರು ಕಣಮಾವ" ಎಂದು ಉಗ್ರಿ ಹೇಳುತ್ತಿದ್ದ ವಿಷಯದ ತಳಬುಡ ಅರ್ಥವಾಗದ ಕಾಳಮಾವ,

"ಬುಡಿಸೇಳ್" ಎಂದ.

"ಈಗ ಎಡೂರಪ್ಪನಿಗೆ ಐದಾರು ಜನದ ಸಪೋಟು ಬೇಕಿತ್ತು ಕಣಮಾವ. ಅದಕ್ಕೆ ಸ್ವತಂತ್ರವಾಗಿ ಗೆದ್ದಿದ್ದೊರನ್ನಲ್ಲ ಸೇರಿಸಿಗಂಡಿದ್ದ. ಸೇರಿಸಿಗಂಡಿದ್ದ ಅನ್ನದಕಿಂತ ಗಣಿ ಮಾಲೀಕ್ರು ಅವು ಕೇಳಿದೋಟು ದುಡ್ಡು ಕೊಟ್ಟು ಹಿಡಕಂಡು ಬಂದಿದ್ರು. ಅವು ಅಂತ ಸ್ಯಾರವಾದವಲ್ಲ ಅಂತ ಗೊತ್ತಾಯ್ತು. ಒಂದು ಹೀನಸುಳಿದು, ಇನ್ನೊಂದು ಪರಕಸುಳಿ, ಮೋಟಬಗ್ರಿ ಸಿದಿಗಾಲು, ಹಿಂಗೆ ಒಂದಲ್ಲಾ ಒಂದ್ಯೆಬರದ ಕಟಗಂಡು ಸರಕಾರ ಮಾಡಕ್ಯಾಗದಿಲ್ಲ ಅಂತ ಎಡೂರಪ್ಪ ತಲೆಮ್ಯಾಲೆ ಕೈ ಹೊತಗಂಡು ಕುಂತಿದ್ದ. ಆಗ ಬಳ್ಳಾರಿ ಕಡೆ ಗಣಿ ಕಳ್ರು ಬಂದು ಹೆದ್ರಬ್ಯಾಡ ಎಡೂರಪ್ಪ ಅಂತ ಹೋಗಿ ಅನಾಮತ್ತು ಬಾಲಚಂದ್ರ, ಶಿವನಗೌಡ, ಆನಂತ ಅನ್ನೊ ಯಮ್ಮೆಲ್ಲೆಗಳ ಹಿಡಕಂಡು ಬಂದು ಎಡೂರಪ್ಪನ ಎದ್ರಿಗೆ ನಿಲ್ಸಿ ಇವುರ ಮಂತ್ರಿ ಮಾಡು ಅಂದರಂತೆ, ಅದ್ಕೆ ಮಾಡಿದ."

"ಸರಿ ಅವ್ಯಾವು?"

"ಅವುರಲ್ಲಿ ಇಬ್ರು ಕಾಂಗ್ರೆಸ್ಸಿನೋರು, ವಬ್ಬ ಜೆಡಿಎಸ್ಸು."

"ಸರಿ, ಆ ಪಾರ್ಟಿ ಬುಟ್ಯಾಕೆ ಬಂದ್ರು ಅಂತ?"

"ಪವರ್ರಿಲ್ಲದ ಪಾರ್ಟಿಲಿದ್ರೆ ಏನು ಸಿಕ್ಯತು ಮಾವ?"

"ಅಂಗಂತ ಅಂದ್ರೆ ಇರೋದಪಕ್ಷ ಉಳದವುಲ? ವಸಿಜನ ಆಡಳಿತ ಮಾಡಬೇಕು, ವಸಿಜನ ಇರೋದ ಮಾಡಬೇಕು ಅಂತ ಅಲವೆ ಲ್ಯಕ್ಕ?"

"ಅದು ನಿನ್ನ ಕಾಲದ ನ್ಯಾಯಕಣ ಮಾವ. ಈಗ ವಿರೋಧ ಪಕ್ಷ, ಆಡಳಿತ ಪಕ್ಷ ಯಲ್ಲ ಒಂದಾಗ್ಯವೇ. ಅದ್ಕೆ ಕೆಲುವುರು ಆಡಳತ ಪಕ್ಷದಲ್ಲೇ ಇದ್ರೆ ವಾಸಿ ಅಂತ ಓಡಿ ಬತ್ತಾ ಅವೆ. ಅಂಥೋರ ಗಣಿಧಣಿಗಳು ದುಡ್ಡು ಕೊಟ್ಟು ಹಿಡಕಂಡು ಬತ್ತಾ ಅವುರೆ. ನೋಡಾಗ್ಲೆ ಜಗ್ಗೇಸನೂ ಓಡಿದ ಅತ್ತಗೆ" ಎಂದು ಉಗ್ರಿ ಹೇಳುತ್ತಿದ್ದಾಗ ಪಕಾರೆಂದು ನಗಾಡಿಗದ ಸೀರ,

"ಕಾಂಗ್ರೆಸಿನವು ಓಡಿಸಿಗಂಡೋದ್ರೂ ಸಿಕ್ಕಲಿಲ್ಲವಂತೆ" ಎಂದ.



"ಅದ್ಯಂಗೆ ಸಿಗತಸೊ ಮಾವ? ಕಾಗೋಡು ತಿಮ್ಮಪ್ಪ ಖರ್ಗೆ ಅಂಥೋರು ಓಡಿಸಿಗಂಡೋದ್ರೆ ಸಿಕ್ಯನೇ? ಮನಿಂದ ಮನಿಗೆ ಹಾರಿ ಓಡಿಬುಟ್ಯನಂತೆ. ಈ ಬಡ್ಡೆತ್ತವು ಮನೆವಳಗವುನೆ ಅಂತ ಅರ್ಧರಾತ್ರಿಗಂಟ ಬಾಗಲಲ್ಲೇ ಕುಂತಿದ್ದವಂತೆ."

"ಕಳ್ರು ಕತೆ ಕೇಳಿದಂಗಾಯ್ತು ಕಂಡ್ಯ ಜಗ್ಗೇಸನ ಕತೆ" ಎಂದು ಕಾಳಮಾವ ಹೇಳುವಾಗ ಕಾಣಿಸಿಕೊಂಡ ವಾಟಿಸ್ಸೆ,

"ಎಜ್ಜಾಟ್ಟಿ ಕರಟ್ ದ್ವಡಪ್ಪ ರಿಯಲ್ಲಿ ಇದು ಪುಟ್ಟಿ ಕಳ್ಳಶತೆ. ಜಗ್ಗೇಸನ ಹಳೆ ಹಿಸ್ಟರಿ ನೋಡು, ಅವುನು ಮದಿವಾಗಿರೋಳ ಕದ್ದಕಂಡು ಬಂದು ಮದಿವಾಗಿದ್ದ. ಆಮ್ಯಾಲೆ ಸಿನಿಮಾದೋನ್ಯಾವನೊ ಕೊಡಬೇಕಾದ ದುಡ್ಡು ಕೇಳಿದ್ರೆ ಬ್ಯಾಟಲ್ಲಿ ವಡದು ಬುರಡೆನೆ ಬಿಚ್ಚಿದ್ದ. ಕಡಿಗೆ ನಮ್ಮ ರಾಜಣ್ಣ ರಾಜಿ ಮಾಡಬೇಕಾಯ್ತು. ಇಂತ ಹಿಸ್ಟರಿ ಇರೊ ಜಗ್ಗೇಸನಿಗೆ ಕಾಂಗ್ರೆಸ್ಸು ಕಡೆಗಳಗೆಲಿ ಟಿಕೆಟ್ ಕೊಟ್ಟು ತನ್ನ ಮಾನ ತಾನೆ ಕಳಕತ್ತು" ಎಂದ.

"ಕಾಂಗ್ರೆಸ್ ಮಾನ ಏನೂ ಹೋಗಿಲ್ಲ, ಇವುನೆ ಕಣೊ ಹರಾಜಾದೋನು" ಎಂದ ಉಗ್ರಿ.

"ಹರಾಜು ಅಂದ್ರೇನು, ಬರೋಬರಿ ಹದಿನೈದು ಕೋಟಿಗೆ ಹರಾಜಾದನಂತೆ ಕಣೊ" ಎಂದ ವಾಟಿಸ್ಸೆ.

"ಯವ್ವೇ ಯವ್ವೇ ಹದುನೈದು ಕೋಟಿನೆ? ಹಿಂಗೂ ಸುಳ್ಳೆಳ್ತರೇನ್ಲಾ?" ಎಂದಳು ಜುಮ್ಮಿ.

"ಯಕ್ಕಾ, ನೀನು ಈಚಿಗೆ ಸ್ವಲ್ಪ ಜಗ್ಗೇಸ್‌ನ ಅಭಿಮಾನಿಯಾಗಿದ್ದೆ, ಅದ್ಕೆ ನಿನಿಗೆ ನಂಬಕ್ಯಾಯ್ತಾಯಿಲ್ಲ, ಬಳ್ಳಾರಿ ಧಣಿಗಳ ಏನಂತ ತಿಳಕಂಡೆ ನೀನು? ಅವುರು ದುಡ್ಡ ಎಣಸದು ಬುಟ್ಟು ಐದೊರ್ಸಾಯ್ತಂತೆ ಕಣಕ್ಕ. ಏನಿದ್ರು ಯಾಪಾರ ಮಾಡಿ, ಸೂಟಕೇಸ್ ಕೊಡ್ತರೆ, ರಾತ್ರುಲ್ಲಿ ಕೂತಗಂಡು ನೀನೆ ಎಣಿಸಿಕೊಬೇಕು. ಇದೇ ನಿಮ್ಮ ಜಗ್ಗೇಸನು ಅವುನೆಡ್ತಿನು ಮೂರು ದಿನಾಯ್ತಂತೆ ದುಡ್ಡ ಎಣಸಕ್ಕೆ ಸುರುಮಾಡಿ, ಗೊತ್ತ?"

"ಸಿನುಮದಲ್ಲಿ ಬೇಕಾದೋಟು ದುಡುದಿದ್ದ ಕಂಡ್ಯ. ಅವುನಿಗ್ಯಾಕ್ ದುಡ್ಡು ಬೇಕು?"

ಹೆಂಗಿದ್ದೆ ಜಗ್ಗೇಸು ಹೆಂಗಾದೆ?

ಅಣಾಕ್

ಎಚ್.ಎಲ್. ಕೇಶವಮೂರ್ತಿ

ಅಮೆರಿಕದ ಒಂದು ಕೊಳಚಿ ಸಂಸ್ಕರಣ ಘಟಕಕ್ಕೆ ಜಾರ್ಜ್ ಬುಷ್ ಅವರ ಹೆಸರನ್ನು ಇಡಲು ಅಲ್ಲಿನ ಕೆಲವು ನಾಗರಿಕರು ತೀರ್ಮಾನಿಸಿದ್ದಾರಂತೆ. ಈ ಮಹಾನುಭಾವನ ಹೆಸರನ್ನೇ ಏಕೆ ಆಯ್ಕೆ ಮಾಡಿದರು ಅಂದರೆ ತನ್ನ ವಕ್ರ ಆಡಳಿತದಿಂದ ಇಡೀ ದೇಶವನ್ನು ಗಬ್ಬು ಎಬ್ಬಿಸಿದ್ದಾನೆ ಈ ಮನುಷ್ಯ ಆ ಕೊಳಚೆಯನ್ನೆಲ್ಲ ಈಗ ತೊಳೆಯಬೇಕಾಗಿದೆ ಅನ್ನುವ ಉದ್ದೇಶದಿಂದ ಅಂತೆ!


ಘನವಾದ ಆಲೋಚನೆ.

ಭಾರತೀಯರಿಗೆ ಅಮೆರಿಕ ಮಾಡಿದ್ದೆಲ್ಲ ಚೆಂದ; ಹೇಳಿದ್ದೆಲ್ಲ ವೇದವಾಕ್ಯ ತಾನೆ. ಈಗಿನ ಉಜ್ವಲ ಪರಂಪರೆಯನ್ನೇ ಮುಂದುವರೆಸಿದರೆ ಕರ್ನಾಟಕದ ಮಹಾಮಹಿಮರಾದ (ಹೊ)ವಲಸೆ ಶಾಸಕರ ಹೆಸರನ್ನು ಯಾವ ಉತ್ಪಾದನಾ ಯಾ ಸಂಸ್ಕರಣಾ ಘಟಕಕ್ಕೆ ನಾಮಕರಣ ಮಾಡಬಹುದು ಎಂಬುದನ್ನು ಆಲೋಚಿಸಲು ಇದು ಸಕಾಲವಾಗಿದೆ ಎನಿಸುತ್ತಿದೆ. ಬುಷ್ ಮಹಾಶಯ ತನ್ನ ದೇಶದ ರಾಜಕೀಯ ರಾಡಿ ಎಬ್ಬಿಸಲು ಎಂಟು ವರ್ಷ ತೆಗೆದುಕೊಂಡ. ನಮ್ಮ ಶಾಸಕ ಮಹಾಶಯರು ನಲವತ್ತೈದು ದಿನಗಳಲ್ಲೇ ಅದೇ ಕೆಲಸ ಮಾಡಿ ಸಫಲರಾಗಿದ್ದಾರೆ! ಅತಿ ಕಡಿಮೆ ಅವಧಿಯಲ್ಲೇ ಪ್ರಜಾಪ್ರಭುತ್ವವನ್ನು ಹರಾಜು ಹಾಕಿದ್ದು ಕಡಿಮೆ ಸಾಹಸದ ಕೆಲಸವಲ್ಲ ತಾನೆ!

ಭಾಜಪ ರಾಜ್ಯಾಧ್ಯಕ್ಷ ಹಲ್ಲುಂಬಿ ಗೌಡರು ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿ ಬರುವ ಎಲ್ಲರಿಗೂ ಸ್ವಾಗತ ಎಂದು ಸಾರಿದ್ದಾರೆ. ಆದರೆ ಏನು ತತ್ವ? ಯಾವುದು ಸಿದ್ಧಾಂತ ಎಂಬುದನ್ನು ಸ್ಪಷ್ಟೀಕರಿಸಿಲ್ಲ. ಇತ್ತೀಚಿನ ರಾಜಕೀಯ ಬೆಳವಣಿಗೆಯನ್ನು ಗಮನಿಸಿದರೆ, ವಲಸಿಗರಿಗಂತೂ ಮಂತ್ರಿ ಪದವಿಯೇ ತತ್ವ, ಅಧಿಕಾರವೇ ಸಿದ್ಧಾಂತ ಆಗಿರುವುದಂತೂ ಸತ್ಯ!

ತುರುವೇಕೆರೆ ಮಾಜಿ ಶಾಸಕ ಜಗ್ಗೇಶ್ ವಿಷಯದಲ್ಲಿ ಇದೆಲ್ಲ ಇಲ್ಲ ಎಂದು ಕೆಲವರ ಅಂಬೋಣ...ಅವರು ಹಣ ಅಧಿಕಾರಕ್ಕೆ ಆಸೆ ಪಟ್ಟೋರೆ ಅಲ್ಲವಂತೆ. ಆತ್ಮೂ ಕರೆದು ಕಾಂಗ್ರೆಸ್ ಟಿಕೆಟ್ ಪಡೆದರು. ಯಾಕೆ? ಜನಸೇವೆಗೆ! ಅಬ್ಬೇಪಾರಿ ತರಹ ಗಡ್ಡಬಿಟ್ಟುಕೊಂಡು ತಲೆಗೆ ಮಫ್ಲರ್ ಸುತ್ತಿಕೊಂಡು ಮಾಸಿದ ಬಟ್ಟೇಲಿ ಪ್ರಚಾರ ಮಾಡಿ ಮತದಾರ ಮಹಾಪ್ರಭುವಿಗೆ ಮಂಕು ಬೂದಿ ಎರಚಿ ಅನುಕಂಪದ ಅಲೆ ಎಬ್ಬಿಸಿ, ಮತ ಎಣಿಕೆ ದಿನ ಗೆಲ್ಲುವುದು ಖಾತರಿ ಆಗುತ್ತಿದ್ದಂತೆ ಗೆಟಪ್ಪೇ ಬದಲಾಯಿಸಿಕೊಂಡರಂತೆ; ಮಿರಿಮಿರಿ ಮಿಂಚುವ ಉಡುಪಿನಲ್ಲಿ ಪ್ರತ್ಯಕ್ಷ ಆದರಂತೆ! ಚುನಾವಣಾ ಸಮಯದಲ್ಲಿ ಎಲ್ಲೋ ಮಾಯ ಆಗಿದ್ದ ಬೆರಳ ಉಂಗುರಗಳು ಮತ್ತೆ ಪ್ರತ್ಯಕ್ಷ ಆಗಿದ್ದವಂತೆ! 'ಈಗ್ಲೇ ಈ ಪಾಟ ಯಾಸ ಕಟ್ಟೋನು ಮುಂದೇನ್ಮಾಡಾನೋ ಯವ್ವ' ಅಂತ ಓಟು ಹಾಕಿದ ಮಹಿಳೆಯರು ಆಗಲೇ ಮೂಗಿನ ಮೇಲೆ ಬೆರಳು ಇಟ್ಟುಕೊಂಡಿದ್ದರಂತೆ.

ಆದರೆ ಟಿವಿಯಲ್ಲಿ 'ತುರುವೇಕೆರೆ ಅಭಿವೃದ್ಧಿ ಹೊಂದದೆ ಇರಲು ಸರ್ಕಾರದ ಸಮನ್ವಯದ ಕೊರತೆ ಇತ್ತು. ಇಲ್ಲಿ ಶಾಸಕರು ಗೆದ್ದಾಗ ಅವರ ಪಕ್ಷ ಅಧಿಕಾರದಲ್ಲಿರುತ್ತಿರಲಿಲ್ಲ, ಅವರ ಪಕ್ಷ ಅಧಿಕಾರಕ್ಕೆ ಬಂದಾಗ ಪಕ್ಷದಿಂದ ಶಾಸಕರೇ ಇರುತ್ತಿರಲಿಲ್ಲ... ನಾನು ಕಲಾವಿದ ಆದ್ದರಿಂದ ಇವೆರಡನ್ನೂ ಸಿಂಕ್ರನೈಜ್ ಮಾಡ್ತೀನಿ' ಅನ್ನೊ ಸಿನಿಮಾ ರೀತಿ ಡೈಲಾಗ್ ಹೊಡೆದಿದ್ದನ್ನು ನೋಡಿ ಈವಯ್ಯ ತುರುವೇಕೆರೆನ ಏನೋ ಮಾಡ್ತಾನೆ ಅಂದುಕೊಂಡಿದ್ದರಂತೆ. ಕೇಸರಿ ಬಣ್ಣದ ಮೈಗೆಲ್ಲ ಹಚ್ಚಿಕೊಂಡಾಗ ಅದೇ ಜನ 'ಯವಾರ ಸರ್ಕ್ಯಾಗೇ ನಡ್ದಂಗಂದೆ' ಅಂದರಂತೆ. ಇದನ್ನು ಕೇಳಿ ಕೆಂಡಮಂಡಲವಾದ ನವರಸನಾಯಕರು 'ನನ್ನು ಯಾವತ್ತೂ ಕೊಡೋ ಕೈ, ತಗೊಳ್ಳುವ ಕೈ ಅಲ್ಲ'ಅಂತ ಮಿರಗುಟ್ಟುವ ಚಿನ್ನದ ಉಂಗುರಗಳದೇ ಕೈಎತ್ತಿ ಡೈಲಾಗ್ ಹೊಡೆದಾಗ 'ಮತ್ತಿನ್ಯಾಕೆ ಸೇರ್ದೆ' ಅಂತಾ ಜನ ಅನ್ನಲ್ಲಿದ್ದಂಗೆ ಬೆಕ್ಕು ಚೀಲದಿಂದ ಹೊರಕ್ಕೆ ಬಂತಂತೆ. ಮತ್ತೆ ತುರುವೇಕೆರೆ ಕಡೆ ಮಕ ಆಕಿ ಮಲ್ಗಂಗಿಲ್ಲ. ಹಂಗೇನಾದರೂ ಮಾಡಿದರೆ ಜಗ್ಗೇಶಣ್ಣಾರು ತಮ್ಮ ಸಿನಿಮಾಗಳಲ್ಲಿ ಹೀನಾಮಾನ ಬಯ್ಯುವಾಗ ಸುತ್ತಲಿನ ಜನರು ಕಿವಿ ಮುಚ್ಚಿಕೊಳ್ತಾರಲ್ಲ ಅದಕ್ಕಿಂತಲೂ ಹೀನಾಯವಾದ ಬೈಗುಳ ಕೇಳಬೇಕಾಯ್ತದೆ ಅಂತ ಗೊತ್ತು, ಅದಕ್ಕೆ ಅವರು ತಮ್ಮ (?) ತುರುವೇಕೆರೆ ಕ್ಷೇತ್ರವನ್ನು ಬೇರೆಯವರಿಗೆ ಬಿಟ್ಟುಕೊಡ್ತಾರಂತೆ! ಹಂಗಾರೆ ಜಗ್ಗೇಶು ರಾಜಕೀಯದಿಂದ ಔಟಾ ಅಂದರೆ ಇಲ್ಲವಂತೆ. ತುರುವೇಕೆರೆ ಕ್ಷೇತ್ರದಿಂದ ಔಟಂತೆ, ತುಮಕೂರು ಲೋಕಸಭಾ ಕ್ಷೇತ್ರದಿಂದ ಇನ್ ಆಗ್ತಾರಂತೆ.



ಹೆಂಗಿದ್ದ ಜಗ್ಗೇಶ್ ಹೆಂಗಾದ?

ಇಂತಹವರ ಹೆಸರಿನಲ್ಲಿ ಯಾವ ಕೇಂದ್ರ? ಇದು ಈಗಿನ ಪ್ರಶ್ನೆ.

ನವರಸ ನಾಯಕರ ಚಿತ್ರಗಳನ್ನು ಇಲ್ಲಿ ಮರೆಯಬಾರದು. ಆರೋಗ್ಯವಂತನಾದ ಮನುಷ್ಯ ಏಡ್ಸ್ ರೋಗ ಪೀಡಿತನಾದರೆ ಏನಾಗುತ್ತೆ ಎಂಬುದಕ್ಕೆ ಎರಡು ಚಿತ್ರಗಳು. ಆರೋಗ್ಯವಂತ ಮನುಷ್ಯನ ಚಿತ್ರ ಒಂದು. ಅದಕ್ಕೆ ಶೀರ್ಷಿಕೆ 'ಹೆಂಗಿದ್ದೇ?' ಅದರ ಪಕ್ಕದಲ್ಲೇ ಮತ್ತೊಂದು ಏಡ್ಸ್ ರೋಗ ಪೀಡಿತನ ಚಿತ್ರ. ಅದರ ಶೀರ್ಷಿಕೆ 'ಹೆಂಗಾದೆ!' ಇವುಗಳ ಪ್ರದರ್ಶನ ಸುಲಭ ಶೌಚಾಲಯಗಳ ಗೋಡೆಗಳ ಮೇಲೆ! ಇದೇ ಮಾದರಿಯಲ್ಲಿ.....

ಸುಲಭ ಶೌಚಾಲಯಗಳು ಇದಾವಲ್ಲ ತುರುವೇಕೆರೆಲಿ, ಜಗ್ಗೇಶ್. ವಾಸಿಸುವ ಬಡಾವಣೆಯಲ್ಲಿ ಅವುಗಳು– 'ಜಗ್ಗೇಶ್ ಸುಲಭ ಶೌಚಾಲಯ' ಆಗಲಿ! ಇಷ್ಟೇ ಸಾಲದು. ಏಡ್ಸ್ ರೋಗ ಪ್ರಚಾರದ ಚಿತ್ರಗಳಂತೆ 'ಜಗ್ಗೇಶ್ ಹೆಂಗಿದ್ದೆ' 'ಜಗ್ಗೇಶ್ ಹೆಂಗಾದೆ' ಎಂಬ ಜಗ್ಗೇಶ್ ಚಿತ್ರ ಸಹಿತ ಸ್ಲೋಗನ್ನು!

ಇಂತಹ ಜಾಹೀರಾತು ಜಗ್ಗೇಶ್‌ಗೆ ಆಪ್ಯಾಯಮಾನ! ಇದನ್ನೇ ಅವರು 'ನಂಬರ್ ಟುಗೆ ಅವಸರ ಆದಾಗ ಕೋಟಿ ಕೋಟಿ ಕೊಡ್ತೀನಿ ಅಂದ್ರು ಬೇಡ ಅನ್ನುತ್ತೆ. ಹೊಟ್ಟೇಲಿರೋದೆಲ್ಲ ಹೊರಕ್ಕೆ ಬಂದರೆ ಆಗಲೇ ಸಮಾಧಾನ. ಅದಕ್ಕೆ ಭಾಜಪ ಸೇರಿ ಇವನ್ನ ಕಟ್ಟಿಸಿದೆ' ಅಂತ ಡೈಲಾಗ್ ಹೊಡೆದರೂ ಹೊಡೆಯಬಹುದು!

ಇದೇ ಮಾದರಿಯಲ್ಲಿ ಇತರೆ ವಲಸೆದಾತರಿಗೂ ಲಹರಿ ಹರಿಸಬಹುದಾದರೂ ಕಟ್ಟಾ ಭಾಜಪಗಳು ಇದೆಲ್ಲದಕ್ಕೂ ಆಕ್ಷೇಪಣೆ ಎತ್ತುವ ಸಾಧ್ಯತೆ ಇಲ್ಲದಿಲ್ಲ. 'ಪ್ರಜಾಪ್ರಭುತ್ವದ ಹರಣ' 'ನಗ್ನಗೊಳಿಸಿದ ಪ್ರಜಾಸತ್ತೆ' ಇಂತಹ ಪದಗುಚ್ಛಗಳನ್ನು ಉದುರಿಸುತ್ತಿದ್ದಾರಲ್ಲ ಸುದ್ದಿ ಮಾಧ್ಯಮದವರು ಅಂತ ಕೆಂಡಕಾರಬಹುದು. ಭಾರತಮಾತೆ ಪರಮಪೂಜ್ಯಳು. ಆಕೆಯನ್ನು ನಗ್ನಗೊಳಿಸಿ ಅಪಮಾನಗೊಳಿಸಿದರೆ ಸಿಡಿದೇಳುವೆವು. ಪ್ರಜಾಪ್ರಭುತ್ವ ಅನ್ನುವುದು ಒಂದು ಪದ ಅಲ್ವ. ಅದನ್ನು ಹೇಗ್ರಿ ನಗ್ನಗೊಳಿಸಲು ಸಾಧ್ಯ. ಹುಸಿ ಜಾತ್ಯತೀತವಾದಿಗಳು ವಿವಾದ ಎಬ್ಬಿಸಲು ಮಾಡುತ್ತಿರುವ ಸಂಚು ಎಂದು ಅಪವಾದ ಎತ್ತಬಹುದು!

ನಮಾಜ್ ಬ್ರೇಕು

ಯಾರೇ ಮುಖ್ಯಮಂತ್ರಿ ಆಗಲಿ. ಮೊದಲ ಎರಡು ಮೂರು ತಿಂಗಳು ಅವರ ಮಾತಿಗೆ ಕಿಲುಬುಕಾಸಿನ ಬೆಲೆಯೂ ಇಲ್ಲ. ಏಕೆಂದರೆ ಅವೆಲ್ಲ ಅಧಿಕಾರದ ಹುಮ್ಮಸ್ಸಿನಲ್ಲಿ ಮನಸೋ ಇಚ್ಛೆ ನೀಡುವ ಆಶ್ವಾಸನೆಗಳು. ಅವು ಆಗುವುದಿಲ್ಲ ಹೋಗುವುದಿಲ್ಲ, ಅದು ಅವರಿಗೂ ಗೊತ್ತು, ಜನರಿಗೂ ತಿಳಿದಿದೆ. ಆದರೂ ಅವರು ಹೇಳ್ತಾನೆ ಇರ್ತಾರೆ, ಜನ ಕೇಳ್ತಾನೆ ಇರ್ತಾರೆ. ಇದೆಲ್ಲ ಮಾಮೂಲಿ ಸಂಗತಿಗಳು.

ಇತ್ತೀಚೆಗೆ ಮುಖ್ಯಮಂತ್ರಿಗಳು 'ಭ್ರಷ್ಟಾಚಾರ ನಿರ್ಮೂಲನ ನಮ್ಮ ಮೊದಲ ಆದ್ಯತೆ' ಎಂದಿದ್ದಾರೆ. ಶ್ಲಾಘನೀಯವೇ, ಅದು ಸತ್ಯ ಆದರೆ! ಅದಕ್ಕೇ 'ಗುಜರಾತ್ ಮಾದರಿ' ಬಿಟ್ಟು 'ಮಲೇಶಿಯಾ ಮಾದರಿ' ಅನುಸರಿಸಿದರೆ ಪಕ್ಷದ ತತ್ವ ಸಿದ್ಧಾಂತಗಳಿಗೆ ಅನುರೂಪವಾಗಿಯೇ ಇರುತ್ತೆ ಎಂಬುದು ಒಂದು ಸಣ್ಣ ಸಲಹೆ ಅಷ್ಟೆ.

ಏನಿದು ಮಲೇಶಿಯಾ ಮಾದರಿ?

ಅಲ್ಲಿನ ಪ್ರಧಾನಿಗೂ ಸರ್ಕಾರಿ ನೌಕರರ ಭ್ರಷ್ಟಾಚಾರ ನಿರ್ಮೂಲನ ಮಾಡಬೇಕು ಅನ್ನಿಸಿತಂತೆ. ಆಳೆದೂ ಸುರಿದರಂತೆ. ಕೊನೆಗೆ ಕಾರಣ ಹೊಳೆಯಿತಂತೆ.

ಏನು ಕಾರಣ ಅದು?

ನೌಕರರ ಕುಂಠಿತ ದೈವಿಕ ಪ್ರಜ್ಞೆ!

ಹಾಳಾದ ನೌಕರರಲ್ಲಿ ನೈತಿಕತೆಯನ್ನೋದನ್ನೆ ಇದು ಇಲ್ಲವಾಗಿಸಿದೆ. ಅದಕ್ಕೆ ಟೇಬಲ್ ಕೆಳಗೇನೂ, ಮೇಲೂ ಕೈ ನೀಡುವ ಜಾಯಮಾನದವರಾಗಿದ್ದಾರೆ ಅಂತ ಸಂಶೋಧಿಸಿದರಂತೆ.

ಕಾರಣ ತಿಳಿದ ಮೇಲೆ ಪರಿಹಾರಕ್ಕೇನು ಕಷ್ಟ? ಕೂಡಲೇ ಆದೇಶ ಹೊರಡಿಸಿದರಂತೆ– 'ಮುಸ್ಲಿಂ ಸರ್ಕಾರಿ ನೌಕರರು ಪ್ರತಿನಿತ್ಯ ಐದು ಸಲ ನಮಾಜು ಮಾಡುವುದು ಕಡ್ಡಾಯ!"

'ಲಂಚ್ ಬ್ರೇಕು', 'ಟೀ ಬ್ರೇಕು' ಇದ್ದಹಾಗೆ 'ನಮಾಜ್ ಬ್ರೇಕು' ಇದೆಯೋ ಇಲ್ಲವೋ ತಿಳಿದು ಬಂದಿಲ್ಲ. ಭ್ರಷ್ಟಾಚಾರ ನಿರ್ಮೂಲನಕ್ಕೆ ಇದಕ್ಕಿಂತ ಸುಲಭಮಾರ್ಗ ಇಲ್ಲವೇ ಇಲ್ಲ ಎನ್ನುವುದು ಖಚಿತ!

ಈ ಮಾದರಿಯನ್ನೇ ನಮ್ಮ ರಾಜ್ಯದಲ್ಲೂ ಜಾರಿಗೆ ತಂದು ಮುಸಲ್ಮಾನ್ ಬಂಧುಗಳು(!) ದಿನಕ್ಕೆ ಐದು ಸಲ ನಮಾಜು ಮಾಡಬೇಕೆಂದು ಹಾಗೂ ಹಿಂದೂ ನೌಕರರು ಸಂಜೆ ಮತ್ತು ಬೆಳಿಗ್ಗೆ ಭಜನೆ ಮಾಡಬೇಕೆಂದೂ ಆದೇಶ ಹೊರಡಿಸಬಹುದಾಗಿದೆ. 'ನಮಾಜ್ ಬ್ರೇಕು' ಇದ್ದಂತೆ 'ಭಜನಾ ಬ್ರೇಕು' ನೀಡಿದರೆ ನೌಕರರು ಇದನ್ನು ತ್ರಿಕರಣ ಶುದ್ಧಿಯಿಂದ ಸ್ವಾಗತಿಸುವರೆಂಬುದರಲ್ಲಿ ಸಂಶಯ ಇಲ್ಲ.

"ಬಿಸುದು ದುಡ್ಡು ಸಿಸುದುಕಾಯ್ತು ಕಣಕ್ಕ. ಇದು ಯದ್ಯೂರಿ ದುಡ್ಡು, ತುರುವೇಕ್ಕರೆಲಿ ನಿಂತು ಖರ್ಚು ಮಾಡಿದ್ದ. ರೆಡ್ಡಿಗಳು ಬಂದು ಎಷ್ಟು ಖರ್ಚು ಮಾಡಿದ್ರೆ ಅಂದ್ರಂತೆ. ನಮ್ಮ ಜಾಯಮಾನೆ ಹತ್ತು ಕೋಟಿ ಕಣ್ಣಾ ಅಂದನಂತೆ. ಇನ್ನೈದು ಜಾಸ್ತಿ ತಗೊ ಅಂದರಂತೆ. ಇದತ್ಗೆ ಕೋತಿ ತಿನ್ನುನಂಗೆ ಬಿಜೆಪಿ ಬಿಲ್ಡಿಂಗ್ ಮ್ಯಾಲೆ ಕೂತಗಂಡು ಮೈಕೈ ಕ್ಕರಕತ್ತ ಅದೆ."

"ಅಷ್ಟೆ ಅಲ್ಲ ಕಣೊ, ಬರೋರ್ನೆಲ್ಲ ಬರ್ಲಿ, ಕಾಂಗ್ರೆಸ್ನು ಇನ್ನು ಹದನೈದೊರ್ಸ ಹವರ್‍ಗೆ ಬರದಿಲ್ಲ ಅಂತ ಅವ್ನೆ."

"ಕೋತಿ ತಾನು ಕೆಡದು ಅಲ್ದೆ ವನನ್ನಲ್ಲ ಕೆಡುಸ್ತು ಅನ್ನದು ಇದ್ಯೆ ಅಲವೆ?" ಎಂದ ಕಾಳಮಾವ.

"ಈ ದ್ಯವಲಪ್‌ಮೆಂಟು ವಳ್ಳೆದೆ ದ್ವಡಪ್ಪ"

"ಅದ್ಯಂಗ್ಲ?"

"ಈ ತರದ ರಾಜಕಾರಣ ಸುರುಮಾಡಿದೋನೆ ನಿಮ್ಮ ದ್ಯಾವೇಗೌಡ್ರು ಮಗ. ಅವುನು ಗಣಿ ಧಣಿಗಳ ಹಿಡಕಂಡು ಇಂತ ರಾಜಕಾರಣ ಮಾಡಿ ಇಪ್ಪತ್ತು ತಿಂಗಳು ಮ್ಯರದು ಆಲ್ಪಾಪರೇಷನ್ ಮಾಡಿಸಿಗಂಡು ಕುಂತವುನೆ. ಅವುನಿಗೆ ಬೆಂಬಲವಾಗಿ ನಿಂತಿದ್ದ ಚಲುವರಾಯಸ್ವಾಮಿನು ಆಲ್ಪಾಪರೇಷನ್ ಮಾಡಿಸಿಗಂಡು ಯದೆ ನೀವಿಕಂಡು ಕುಂತವುನೆ. ರಾಜಕಾರಣ ಹೃದಯ ಮೆಚ್ಚಂಗಿರಬೇಕು ದ್ವಡಪ್ಪ, ಇವುರು ಮಾಡಬಾರ್‍ದು ಮಾಡಿ ದಾರಿ ತೋರಿಸಿಕೊಟ್ರು. ಅದ್ಕೆ ಇವತ್ತು ಎಡೂರಪ್ಪ ಅದೇ ದಾರಿಲಿ ಹೋಯ್ತಾ ಅವುನೆ. ವಳ್ಳೆ ದಾರಿ ಇದು."

"ಅದ್ಯಂಗೊ ವಳ್ಳೆ ದಾರಿ?"

"ನೋಡೊ ಉಗ್ರಿ, ಒಂದು ಕಾಲ್ದಲ್ಲಿ ಜಂತಾ ಪಾರ್ಟಿ ಯಂಗಿತ್ತು? ಇದೇ ನಮ್ಮ ಜುಮ್ಮಕ್ಕ ಎಂ.ಪಿ. ಪ್ರಕಾಶ್, ನಜೀರ್ ಸಾಬ್ರು ನಮ್ಮ ಭಾವ ಮಾವ ಅನ್ನಂಗೆ ಓಡಾಡ್ತಿದ್ರು. ಇವತ್ತು ಆ ಪಾರ್ಟಿನೂ ಇಲ್ಲ, ಆ ಜನನೂ ಇಲ್ಲ, ಯಾಕೇಳು?"

"ನೀನೆ ಹೇಳು."

"ಜಂತಾ ಪಾರ್ಟಿವಳಿಕೆ ಕಾಂಗ್ರೆಸ್ಸಿನೋರು ಬಂದ್ರು. ತಿಂದ್ರು, ಕುಡುದ್ರು, ಮಜಮಾಡಿ, ಪಾರ್ಟಿನೂ ಹಾಳುಮಾಡಿ ಹೋದ್ರು. ಅದೇ ತರ ಇವತ್ತು ಬಿಜೆಪಿ ಹಾಳುಮಾಡೋ ಶಕ್ತಿ ದಳದೋರಿಗೆ, ಕಾಂಗ್ರೆಸ್ಸಿನೋರಿಗೆ ಮಾತ್ರ ಅದೆ. ಅದ್ಕೆ ಅವುರ್‍ಯಲ್ಲ ಬಿಜೆಪಿಗೋಗದು ವಳ್ಳೆ ದ್ಯವಲಪ್ಪಮೆಂಟು!"

"ಅಂಗಂತಿಯಾ?"

"ಎಡೂರಪ್ಪನಿಗೂ ಅಷ್ಟೆ ಕಣೊ. ತನ್ನ ಕಾಲ ಆದ ಮ್ಯಾಲೆ ಬಿಜೆಪಿ ಇದ್ರೇನು ಹೋದ್ರೇನು ಅದ್ಕೆ ಜಗ್ಗೇಸ್‌ನಂಥ ಕೋತಿ ಹಿಡಕಂಡು ಆಟ ಆಡ್ತ ಅವುನೆ!"

"!?"

■

ಪ್ರತಿ ಕಚೇರಿಯಲ್ಲೂ ಪೂಜೆ ಮಾಡುವುದನ್ನು ಕಡ್ಡಾಯಗೊಳಿಸಿದರೆ ಭ್ರಷ್ಟಾಚಾರ ನಿರ್ಮೂಲನೆಯ ಜೊತೆಗೆ ಉದ್ಯೋಗ ಸೃಷ್ಟಿಯೂ ಆಗುತ್ತದೆ! ಈ ನಿಟ್ಟಿನಲ್ಲಿ ಯಡ್ಯೂರಪ್ಪನವರು ಚಿಂತಿಸಬಹುದಾಗಿದೆ!

ಇತರೆ ಧರ್ಮದ ನೌಕರರಿಗೆ ಏನು ಮಾಡಬೇಕು?

ಇದು ಮಲೇಶಿಯ ಮಾದರಿ. ಅಲ್ಲಿ ಅದನ್ನು ಅವರು ಯೋಚಿಸಿಲ್ಲ, ನಾವೂ ಆ ಕುರಿತು ಚಿಂತಿಸಬೇಕಿಲ್ಲ.

ಕಾಮದೇವನ ಕಾಟ

ಮಂಡ್ಯದಲ್ಲಿ ಯದ್ವಾತದ್ವಾ ಮನ್ಮಥನ ಕಾಟ ಶುರು ಆಗಿದೆ. ಹಾಳಾದ ಕಾಮದೇವ ಹೂವಿನ ಬಾಣನಾ ಬಿಡ್ತಾನೆ ಇದಾನೆ. ಬಿಡೋದು ಬಿಡ್ತಾನೆ. ಗಂಡು ಹೆಣ್ಣು ಇಬ್ಬರಿಗೂ ಬಿಡಬಾರದೆ! ಆದರೆ ಅವನದ್ದು ಏಕಮುಖ ಸಂಚಾರ! ಅವನೆಲ್ಲೋ ಪುರುಷ ಪಕ್ಷಪಾತಿ ಇರಬೇಕು. ಅದಕ್ಕೆ ಅವರನ್ನೆ ಕುಟುಕಿ ಪ್ರಾಣ ಹಿಂಡುತ್ತಿದ್ದಾನೆ.

ಮೊದಮೊದಲು ಶಾಲಾ ಮಾಸ್ತರುಗಳನ್ನು ಆಯ್ಕೆ ಮಾಡಿಕೊಂಡ. ಕಾಮದೇವನ ಕಾಟ ನೋಡಿ. ಶಾಲೆಯ ಮಕ್ಕಳನ್ನೇ ಹಿಡಿದುಕೊಂಡರು. ಹೂವಿನ ಬಾಣಾನ ಆ ಹುಡುಗಿಯರಿಗೂ ಬಿಟ್ಟಿದ್ದರೆ ಚೆನ್ನಾಗಿತ್ತು, ಬಿಡಲಿಲ್ಲವಾಗಿ ಅವು ಬಾಯಿ ಬಡ್ಕೊಂಡು ಮೇಷ್ಟರ ಬಾಯಿ ಬಾಯಿ ಬಿಡೋ ಹಂಗಾಯ್ತು, ವರ್ಗ ಶಿಕ್ಷೆ ಆಯಿತು.

ಓಡೋ ಚಿಕ್ಕಚಿಕ್ಕ ಮಕ್ಕಳನ್ನೇ ಹಿಡ್ಕೊಳ್ತಾರಲ್ಲ ಹಿಂಗಾಗಬಾರದು ಅಂತ ಆ ಕಾಮದೇವ ಏನು ಮಾಡಿದ? ಇಂಜಿನಿಯರ್ ಸಾಹೇಬರೊಬ್ಬರಿಗೆ ತಗುಲಿಕೊಂಡ. ಸಾಹೇಬರ ಬಾಯಿಗೆ ಹೊಲಸು ಮಾತುಗಳನ್ನು ಕಣ್ಣಿಗೆ ಕಾದರವನ್ನು ತುಂಬಿದ. ಹಿಂಗಾಗಿ ಕಂಡಕಂಡ ಹೆಂಗಸರೆಲ್ಲ ತನ್ನ ಹಾಸಿಗೆ ಸುಖಕ್ಕೆ ಇರೋರು ಅನ್ನುವ ಹಾಗೆ ಮಾಡಿದ ಆ ಹಾಳಾದ ಮನ್ಮಥ ಅಂಬೋನು. ತನ್ನ ಕಚೇರೀಲಿ ಕೆಲಸ ಮಾಡುವ ಮಹಿಳಾ ನೌಕರರೆಲ್ಲ ಅವನ ಕಣ್ಣಿಗೆ ಬೆತ್ತಲೆ ಇರುವಂತೆಯೇ ಕಾಣಿಸಿತು. ಆದರೆ ಮಹಿಳೆಯರಿಗೆ ಹಾಗೇನೂ ಆಗ್ತಿರಲಿಲ್ಲ, ಎಲ್ಲ ಕಾಮದೇವನ ಮಿಸ್ಟೇಕು.

ಈ ಮದನ ಕಾಮರಾಜನ ಕಾಟ ತಡೀಲಾರದೆ ಒಬ್ಬ ಹೆಣ್ಣುಮಗಳು ಮೇಲಧಿಕಾರಿಗಳಿಗೆ ದೂರಿತ್ತಳು. ಮಹಿಳಾ ಸಂಘಟನೆಗಳೂ ಪ್ರತಿಭಟಿಸಿದವು. ಎಲಾ ಬಡ್ಡಿ ನೀನು ಹಿಂಗೆಲ್ಲ ಮಾಡ್ತೀಯಾ, ನೀನು ಆಫೀಸರು ಅಂತಾವ ಅವ ಏನು ಮಾಡಿದ ರಾಜ್ಯ ಮಟ್ಟದ ಚಳವಳಿಗಾರ, ಸಂಘಟನೆಗಳ ಮುಖಂಡರನ್ನು ಹಿಡ್ಕೊಂಡ. ಹಿಂಗೆ ಜನಾ ಹಿಡಿಯೋದರಲ್ಲಿ ಬೋ ಅನುಭವಸ್ಥ ಆತ! ಈ ಮಹಾಮಹಿಮ ಮುಖಂಡರು ಅವ ಚಿನ್ನದಂತಹ ಮನುಷ್ಯ, ಹೆಣ್ಣು ಅಂದರೆ ತಾಯಿ ತರಹ ಗೌರವ ಇರೋನು ಹಂಗೆ ಹಿಂಗೆ ಅಂತ ಪರವಾಗಿ ನಿಂತು ಚಳವಳಿ ಹೂಡಿದರು! ದೂರು ನೀಡಿದ ಮಹಿಳೆಯೇ ಅಪರಾಧಿ ಎಂದು ತೀರ್ಪು ನೀಡಿದರು! ರಾಜ್ಯಮಟ್ಟದ ನಾಯಕರಲ್ವಾ! ರಾಜಧಾನಿಗೆ ತಮ್ಮ ಪಾದ ಬೆಳೆಸಿ ಅಲ್ಲಿ ಕಾಣಬೇಕಾದವರನ್ನೆಲ್ಲ ಕಂಡುಬಂದರು.

ಇಂತಹ ಘಟಾನುಘಟಿ ನಾಯಕರೆಲ್ಲ ಹೋದಮೇಲೆ ಇಂಜಿನಿಯರ್ ಸಾಹೇಬರ ಕೂದಲು ಕೊಂಕಿಸಲು ಸಾಧ್ಯವಿಲ್ಲ ಅಂತಿದ್ದವರಿಗೆ ತನಿಖಾ ಆಯೋಗ ರಚಿಸಿದ್ದು ಸಂತೆ ಮಧ್ಯದಲ್ಲಿ ಚಡ್ಡಿ ಕಿತ್ತಿದಂಗಾಯ್ತು, ಅದಕ್ಕೇನು ಮಾಡಿದರು ಈ ನಾಯಕರು ಅಂದರೆ ಮಹಿಳಾ ಸಂಘದ ನಾಯಕಿಯ ಮೇಲೆ, ಕೈಲರಿಯದವ ಮೈ ಪರಚಿಕೊಂಡ ಅನ್ನೊ ಹಂಗೆ ವೈಯಕ್ತಿಕ ಆರೋಪಾನ ಸುಳ್ಳು ಸುಳ್ಳೇ ಮಾಡಿ ಬಾಯಿ ಚಪಲ ತೀರಿಸಿಕೊಂಡರು. ಸುದ್ದಿ ಮಾಧ್ಯಮದವರೂ ಅಷ್ಟೇ ದೊಡ್ಡ ಮನುಷ್ಯರು ಇದಿ. ಮಹಾ ಪ್ರಚಂಡರು ... ಹೊಲಸನ್ನೆಲ್ಲ ಮಾಧ್ಯಮಗಳಲ್ಲಿ ವರದಿ ಅಂತ ತುಂಬಿದರು. ಇಂತಹವರಿಗೆಲ್ಲ ಇಂದೇ ಧೈರ್ಯವೆಂದರೆ ಕೊಚ್ಚೆಗೆ ಕಲ್ಲೆಸೆಯಲು ಮರ್ಯಾದಸ್ಥರು ಅಂಜಿಕೊಳ್ಳುತ್ತಾರೆ ಅನ್ನೋದು.

ಇನ್ನು ಆ ಸಾಹೇಬರ ಕತೆ ಏನಾಯಿತು ಅಂದರೆ... ವರ್ಗ ಶಿಕ್ಷೆ!

ಇಂತಹವರನ್ನೆಲ್ಲ ಹಿಡ್ಕೊಂಡರೆ ಸುಖಾನೂ ಇಲ್ಲ ಅಂತ ಏನು ಮಾಡಿದ ಆ ಕಾಮದೇವ? ಒಬ್ಬ ಪೊಲೀಸ್ ಕಾನ್‌ಸ್ಟೇಬಲ್‌ನ ತಬ್ಬಿಕೊಂಡ. ಆಹಾ ಆ ಮನ್ಮಥನ ಆಟ ಏನೆಂದು ಹೇಳಲಿ... ಕಾಮಾತುರದಿಂದ ಆ ಬಡಪಾಯಿ ಓರ್ವ ಶಾಲಾಬಾಲಕಿಯನ್ನೇ ಹಿಡಿದುಕೊಂಡ! ಮತ್ತೆ ಅದೇ ಕತೆ. ಏಕಮುಖ ಸಂಚಾರ ಈ ಕಾಮದೇವನದ್ದು, ಆ ಹುಡುಗಿ ಕಿರುಚಿಕೊಂಡಿತು. ಸೇರಿದ ಜನ 'ಧರ್ಮದೇಟು' ನೀಡಲಾಗಿ ಕಾಮದೇವ ಪರಾರಿಯಾದ. ಕನಿಷ್ಠ ಬಳ್ಳೆ ಅರೆಸ್ಟಾದ. ನಂತರ? ಅದೇ ಕಥೆ, ಮೊದಲು ಅಮಾನತು ನಂತರ ವರ್ಗ!

ಅಲ್ಲಾ, ಈ ಅಮಾನತು, ವರ್ಗ ಇವೆಲ್ಲ ಶಿಕ್ಷೆನಾ ?

ಕಾನೂನು ಹೀಗೆ ಇದ್ದರೆ ಕಾಮದೇವ ಅದನ್ನು ಮುರಿಯಲು ಇನ್ನೂ ಯಾರ್‍ಯಾರನ್ನು ಪ್ರೇರೇಪಿಸುತ್ತಾನೋ ಶಿವ ಕಣೆಯೋ.... ■

ಮರೆಯುವ ಮುನ್ನ



■ ಪಿ. ಲಂಕೇಶ್ — ಅಕ್ಟೋಬರ್ 7, 1990

ಉದ್ರೆ ವ್ಯವಹಾರ... ಕತ್ತಿಗೆ ಉರುಳು


ಅನೇಕರು ಅಂಗಡಿಗಳಲ್ಲಿ ಉದ್ರೆ ಸಾಮಾನು ತರುತ್ತಾರೆ. ನಮ್ಮ ತೋಟದ ಕೆಲಸಗಾರರು ಹೀಗೆ ಉದ್ರೆ ಪಡೆದು ಪಾಪರಾಗುತ್ತಿರುವುದನ್ನು ನೋಡಿ ಆಕ್ಷೇಪಿಸಿದೆ. "ಅಲ್ಲಯ್ಯ, ನಿಮಗೆ ಅವರು ಉದ್ರೆ ಕೊಡುವುದರ ಉದ್ದೇಶವಾದರೂ ಗೊತ್ತಾ? ಕೇವಲ ಮೂವತ್ತು ದಿನ ತಡೆದುಕೊಂಡು ನಗದು ಹಣ ಕೊಟ್ಟು ಸಾಮಾನು ತರಲಾರದೆ ದಿವಾಳಿ ಏಳುತ್ತೀರಿ, ನಿಮ್ಮ ಸಂಬಳ ಪೂರ್ತಿ ನುಂಗಿ ಹಾಕ್ತಿದ್ದಾರೆ" ಅಂದೆ.



ಆಗುವುದು ಹೀಗೆ. ಉದ್ರೆ ಎನ್ನುವುದು ಬಟ್ಟೆ ಎಂಬಂತೆ ಕಾಣುತ್ತದೆ. ಅದು ಕೊಳ್ಳುವವನ ಮಾನಸಿಕ ಸ್ಥಿತಿ. ಅದನ್ನರಿತ ಅಂಗಡಿಯವ ಗಿರಾಕಿಯ ಸಂಬಳಕ್ಕೆ ತಕ್ಕಂತೆ ಒಂದಕ್ಕೆರಡು ಬೆಲೆ ಹಾಕಿ ಬರೆದಿಡುತ್ತಾನೆ. ಉದ್ರೆ ತೆಗೆದುಕೊಂಡು ಮಾಯವಾದ ಗಿರಾಕಿ, ತನ್ನ ತೆವಲಿನಿಂದ ಆದ ನಷ್ಟ-ಎಲ್ಲವೂ ಹಿಂದಿರುಗುವಂತೆ ನೋಡಿಕೊಳ್ಳುತ್ತಾನೆ. ಇದು ಚಕ್ರಬಡ್ಡಿಯ ಸಾಲದಂತೆ; ಅದರಿಂದ ಮುಕ್ತಿಯೇ ಇಲ್ಲ, ಯಾಕೆಂದರೆ ನಗದು ಹಣ ನೀಡಿ ಕೊಳ್ಳುವ ಚೈತನ್ಯವೇ ಗಿರಾಕಿಯಲ್ಲಿ ಉಳಿದಿರುವುದಿಲ್ಲ.

ಈ ಹಣ ಎನ್ನುವುದು ವಿಚಿತ್ರ. ಯಾರಿಗಾದರೂ ಚೆಕ್ ಬರೆದು ಕೊಡುವಾಗ ಬೇಸರವಾಗುವುದಿಲ್ಲ; ಕ್ಯಾಶ್ ಕೊಡುವಾಗ ನಿಜವಾಗಿಯೂ ಕೊಟ್ಟಂತೆ ಅನ್ನಿಸುತ್ತದೆ. ಕೊಳ್ಳುವಾಗಲೂ ಅಷ್ಟೆ. ಈಚೆಗೆ ಬ್ಯಾಂಕ್‌ನವರು ಕ್ರೆಡಿಟ್ ಕಾರ್ಡ್ ಮಾಡಿದ್ದಾರೆ; ಅದನ್ನು ತೋರಿಸಿಕೊಂಡರೆ ಕೂಡಲೇ ಹೊರೆ ಬೀಳುತ್ತಿಲ್ಲ ಅನ್ನಿಸುತ್ತದೆ. ಆದರೆ ಕಿಬ್ಬದಿಯ ಕೀಲು ಮುರಿಯುವುದಂತೂ ನಿಜ.

ಉದ್ರೆಯಿಂದ ಎಲ್ಲ ಕೀಲೂ ಮುರಿಯುವ ಅಪಾಯವಿರುತ್ತದೆ.



ಹೆರಿಗೆಯ ನೋವು... ಸಿಸೇರಿಯನ್ ಖುಷಿ


ಮೊನ್ನೆ ಗೆಳೆಯರೊಬ್ಬರ ಸೊಸೆಗೆ ಹೆರಿಗೆಯಾಯಿತು. ಹೆರಿಗೆಯ ದಿನ ಸಮೀಪಿಸಿದಂತೆ ಮನೆಯ ಎಲ್ಲರಿಗೆ ಆತಂಕ. ಚೊಚ್ಚಲು ಗರ್ಭಿಣಿಯಾಗಿದ್ದರಿಂದ ಈ ಪ್ರಕ್ಷುಬ್ಧತೆ ಇನ್ನೂ ಹೆಚ್ಚು. "ಆಸ್ಪತ್ರೆಗೆ ಹೋಗ್ತಿದ್ದೇನೆ, ಇವತ್ತು ನೋವು ಕಾಣಿಸಿಕೊಂಡಿದೆ" ಅಂದರು ಗೆಳೆಯರು. "ಗ್ಯಾರಂಟಿ ಸಿಸೇರಿಯನ್-ಬೇಕಾದರೆ ಬೆಟ್ ಕಟ್ಟಿ!" ಅಂದೆ. ನಾನು ಹೇಳಿದ್ದು ನಿಜವಾಯಿತು; ಸಿಸೇರಿಯನ್ ಶಸ್ತ್ರಚಿಕಿತ್ಸೆಯಾಗಿ ಹೆರಿಗೆಯಾಯಿತು. ಐದು ಸಾವಿರ ರೂ. ಕೈಬಿಟ್ಟಿತು.

ಬೆಂಗಳೂರಲ್ಲಿ ಇದೊಂದು ರಾಕೆಟ್. ಮಾತೆತ್ತಿದರೆ ಸಿಸೇರಿಯನ್. ನನ್ನ ತಾಯಿ ತನ್ನ ಐದು ಮಕ್ಕಳನ್ನು ಹಡೆಯುವಾಗ ಒಮ್ಮೆಯೂ ಒಬ್ಬ ಸೂಲಗಿತ್ತಿಯನ್ನು ಕೂಡ ಕರೆಸಲಿಲ್ಲ; ನಮ್ಮೂರಲ್ಲಿ ಹೆರಿಗೆ ಕಷ್ಟವಾದದ್ದೇ ನನಗೆ ಗೊತ್ತಿರಲಿಲ್ಲ. ನನ್ನ ಎರಡನೆಯ ಅಕ್ಕ ಮೂರು ದಿನ ನೋವುನ್ನುಂಡು ಮೊದಲ ಮಗು ಹೆತ್ತಳು; ಆಮೇಲೆ ಕೂಡ ಹಡೆಯುವಾಗ ನೋವನ್ನು ಅನುಭವಿಸಿದಳು. ಆದರೆ ಆ ಆಸ್ಪತ್ರೆಯ ಗದ್ದಲ ಆಗತ್ಯವೆಂದು ಹಳ್ಳಿಯಲ್ಲಿ ಅನ್ನಿಸಿಯೇ ಇರಲಿಲ್ಲ.

ನರ್ಸಿಂಗ್ ಹೋಂಗಳನ್ನು ಕಟ್ಟಿಕೊಂಡು ಜನರನ್ನು ಸುಲಿಯುವ ವೈದ್ಯರುಗಳಿಗೆ ಗರ್ಭಿಣಿ ಬಂದಳೆಂದರೆ ಬಲಿಪಶುವೊಂದು ಕಂಡಷ್ಟು ಖುಷಿ. ಸಿಸೇರಿಯನ್ ಶಸ್ತ್ರಚಿಕಿತ್ಸೆಯನ್ನು ಅನಿವಾರ್ಯವಾದಾಗ ಮಾತ್ರ ಮಾಡಬೇಕು. ಯೋನಿಯಲ್ಲಿ ಮಗು ಬಾರದೆ ಇದ್ದಾಗ ಈ ಸಿಸೇರಿಯನ್ ಮಾಡಿ ಹೊಟ್ಟೆಯಿಂದ ಮಗು ತೆಗೆಯುತ್ತಾರೆ. ಇದೊಂದು ಅಪರೂಪದ ಸ್ಥಿತಿ ಮಾತ್ರ-ನಾನು ಅನೇಕ ವೈದ್ಯರನ್ನು ಕೇಳಿದ್ದರ ಪ್ರಕಾರ ಈ ಸಿಸೇರಿಯನ್ ತಪ್ಪಿಸಲು ಹಲವಾರು ಕ್ರಮಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ಗರ್ಭಿಣಿ ಹೆರಿಗೆಗೆ ಹತ್ತಿರವಾದಂತೆ ಅವಳ ವ್ಯಾಯಾಮ, ಊಟತಿಂಡಿ, ರಂಜನೆ ಇತ್ಯಾದಿಗಳಿಗೆ ಗಮನ ಕೊಡುವುದು; ಹೆರಿಗೆಯ ದಿನ ವೈದ್ಯರು ತಕ್ಕ ಮಾತ್ರೆ, ಇಂಜಕ್ಷನ್ ಕೊಟ್ಟು ಯೋನಿ ಮತ್ತು ಗರ್ಭಕೋಶ ಸರಿಯಾದ ರೀತಿಯಲ್ಲಿ ವರ್ತಿಸುವಂತೆ ಮಾಡುವುದು.

ಇದಕ್ಕಾಗಿ ಸೂಲಗಿತ್ತಿಯರ ತಂಡವೊಂದು ಪ್ರಯತ್ನಿಸಬೇಕಾಗಿದೆ. ಗರ್ಭಿಣಿಯ ಯೋಗಕ್ಷೇಮ, ಹೆರಿಗೆಯ ಉಸ್ತುವಾರಿ ನೋಡಿಕೊಳ್ಳಲು ಸೂಲಗಿತ್ತಿಯರೇ ತಕ್ಕವರು; ಸಿಸೇರಿಯನ್‌ಗೆ ಆಗುವ ಶೇ. ಹತ್ತುಭಾಗದಷ್ಟು ಹಣದಲ್ಲಿ ಎಲ್ಲವೂ ಆಗುತ್ತದೆ. ಸೂಲಗಿತ್ತಿಯರಿಗೆ ನೆರವಾಗುತ್ತದೆ. ಯಾವ ಪ್ರಾಣಿಯಲ್ಲೂ ಸಿಸೇರಿಯನ್ ಇಲ್ಲ-ಎನ್ನುವುದು ಇವರೆಲ್ಲರಿಗೆ ಅರ್ಥಪೂರ್ಣವಾಗಿ ಕಾಣಬೇಕು.

ಸುಲಿವ ಭ್ರಷ್ಟ ಸಮಾಜದಲ್ಲಿ ನೈಸರ್ಗಿಕ ಕ್ರಿಯೆಗಳೂ ಸಾಧ್ಯವಾಗುವುದಿಲ್ಲ. ಹೆರಿಗೆಯ ನೋವು ಎಳೆಯ ತಾಯಿಗೆ ಸಿಕ್ಕಲೇಬೇಕಾದ ಅನುಭವ; ಮಗುವಿಗೂ ಅಷ್ಟೆ. ಹೆಣ್ಣುತನದ ಭಾಗವಾದ ಈ ನೋವು ಅವಮಾನದ್ದಲ್ಲ, ಆಘಾತದ್ದಲ್ಲ; ಸಂಭೋಗದ, ಮನಸ್ತಾಪದ, ಪ್ರೇಮದ, ವಿರಹದ ನೋವಿನಂತೆಯೇ ಇದು ವಿಶಿಷ್ಟ ನೋವು. ಮಗುವಿಗೂ ಅಷ್ಟೆ. ಈ ಜಗತ್ತಿಗೆ ಮಗು ನಗುನಗುತ್ತಾ ಬರುವುದಿಲ್ಲ, ನೆನಪು, ಆಸೆಗಳು ಮಗುವಿನಲ್ಲಿ ಆರಂಭವಾಗುವುದೇ ಈ ಜಗತ್ತಿಗೆ ಬರುವಾಗಿನ ಕಷ್ಟದಿಂದ; ಈ ಜಗತ್ತಿನ ಬದುಕಿನಲ್ಲಿ ಸಿಸೇರಿಯನ್‌ನಷ್ಟು ಸರಾಗವಾದ ಗಳಿಗೆಗಳು ಕಮ್ಮಿ. ಅದಕ್ಕೆ ಸಿದ್ಧತೆ ತಾಯಿಯ ನೋವು, ಮಗುವಿನ ದಿಗ್ಭ್ರಮೆ. ■



ಕನ್ನಡ ನನ್ನನ್ನು ಕ್ಷಮಿಸು
ನ್ಯಾಯಮೂರ್ತಿಗಳ ಆಲೋಚನೆಗಳು
ಇಂಗ್ಲಿಷಿನಲ್ಲಿವೆ.

ಖುಷಿಯಿಂದ ಆಡುತ್ತಿರುವ
ಮಕ್ಕಳ ಬಾಯಿತುಂಬಾ ಇಂಗ್ಲಿಷ್
ಕನ್ನಡ ಕಾಲಧೂಳು.

ಮನೆ ಮನದ ತುಂಬ
ಇಂಗ್ಲಿಷಿನ ಕಲರವ, ಕನ್ನಡ
ಮಣಿಕಿತ್ತ ಅನಾಥ ಅಶ್ವತ್ಥಾಮ.

ಪ್ರೀತಿಯಿಂದ ಸತ್ಕರಿಸಿ
ತಲೆಬಾಗಿದ ಕನ್ನಡವನ್ನು
ತ್ರಿವಿಕ್ರಮನಾಗಿ ತುಳಿಯುತ್ತಿದೆ ಇಂಗ್ಲಿಷ್

ಇಂಗ್ಲಿಷಿಗೆ ಕರ್ಣಕುಂಡಲ ಕವಚ
ಧಾರೆಯೆರೆದು ಕೊಟ್ಟ ಕನ್ನಡ
ತೊಟ್ಟ ಬಾಣ ತೊಡದ ಕರ್ಣ

ಕೆಸರಲ್ಲಿ ಹೂತ ರಥವನ್ನು
ಎತ್ತುತ್ತಿದೆ ಕನ್ನಡ
ಇಂಗ್ಲಿಷ್ ಕೊನೆಯ ಬಾಣ ಹೂಡಿದೆ.

■ ಡಾ.ಸಿ. ರವೀಂದ್ರನಾಥ್

ವಿಗ್ರಹಾರಾಧನೆ

ಜೀನಿಬಿ ಕತೆ



ಧರ್ಮದಿಂದಾಗುವ ಅನಾಹುತಗಳ ಬಗ್ಗೆ ಗುರುಗಳು ತಮ್ಮ ಶಿಷ್ಯಂದಿರನ್ನು ಯಾವಾಗಲೂ ಎಚ್ಚರಿಸುತ್ತಿದ್ದರು.

ಅದರಲ್ಲೂ ಅವರು ಸದಾ ದೈವಜ್ಞನೊಬ್ಬನ ಕುರಿತು ಹೇಳುತ್ತಿದ್ದ ಕತೆ ಹೀಗಿತ್ತು: ದೇವರಿಗಿಂತಲೂ ದೇವಸ್ಥಾನದ ಬಗ್ಗೆ ಜನ ಹೆಚ್ಚು ಆಸಕ್ತಿ ಹೊಂದಿದ್ದರಿಂದ ಕೋಪಗೊಂಡಿದ್ದ ದೈವಜ್ಞ ಉರಿಯುತ್ತಿರುವ ಪಂಜೊಂದನ್ನು ಹಿಡಿದು ರಸ್ತೆಯಲ್ಲಿ ಸುತ್ತಾಡುತ್ತಾ ದೇವಸ್ಥಾನಕ್ಕೆ ಬೆಂಕಿ ಹಾಕುತ್ತೇನೆಂದು ಬೆದರಿಸುತ್ತಿದ್ದ.

ಈ ಕತೆಯನ್ನು ಹೇಳಿದ ನಂತರ ಗುರುಗಳು ಮರೆಯದೇ ಸೇರಿಸುತ್ತಿದ್ದರು: "ಒಂದು ದಿನ ನಾನು ಕೂಡ ಉರಿಯುತ್ತಿರುವ ಪಂಜೊಂದನ್ನು ಹಿಡಿದು ದೇವರಿಗೆ ಮತ್ತು ದೇವಸ್ಥಾನಕ್ಕೆ ಎರಡಕ್ಕೂ ನನ್ನ ಕೈಯಿಂದಲೇ ಬೆಂಕಿ ಹಚ್ಚುವೆ."

ಆಹಾರ ಕೊರತೆ?

ಇಲ್ಲಿರುವ ಚಿತ್ರಗಳಲ್ಲಿನ ಹಲವು ಅಂಶಗಳನ್ನು ಗಮನಿಸಿ. ಒಂದು ಅದರಲ್ಲಿರುವ ಸಂಸಾರಗಳ ಸದಸ್ಯರ ಸಂಖ್ಯೆ, ಎರಡು ಅವರು ಒಂದು ವಾರಕ್ಕೆಂದು ಖರೀದಿಸಿರುವ ಆಹಾರ ಪದಾರ್ಥಗಳು, ಮೂರು ಅವಕ್ಕೆಂದು ಅವರು ವೆಚ್ಚ ಮಾಡಿರುವ ಹಣದ ಮೊತ್ತ ಇವತ್ತು ಎಲ್ಲೆಡೆ ಎಂತಹ ಆಹಾರ ಕೊರತೆ ಇದೆ ಎಂಬುದನ್ನು ಈ ಚಿತ್ರಗಳೇ ಹೇಳುತ್ತವೆ.



ಜರ್ಮನಿ: ಬಾರ್ಗ್‌ಥೈಡ್ ನಗರದಲ್ಲಿ ವಾಸವಾಗಿರುವ ಮೆಲ್ಯಾಂಡರ್ ಸಂಸಾರ. ತಂದೆ, ತಾಯಿ ಮತ್ತು ಇಬ್ಬರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 20,000 ರೂ.



ಅಮೆರಿಕ: ಕ್ಯಾಲಿಫೋರ್ನಿಯಾದಲ್ಲಿ ವಾಸವಿರುವ ರೆವಿಸ್ ಸಂಸಾರ. ತಂದೆ, ತಾಯಿ ಮತ್ತು ಇಬ್ಬರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 14,000 ರೂ.



ಜಪಾನ್: ಕೊಡೈರಾ ನಗರದಲ್ಲಿರುವ ಯುಕಿತ ಸಂಸಾರ. ತಂದೆ, ತಾಯಿ ಮತ್ತು ಇಬ್ಬರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 12,000 ರೂ.



ಇಟಲಿ: ಸಿಸಿಲಿ ನಗರದಲ್ಲಿರುವ ಮಾನ್ಜೊ ಸಂಸಾರ. ತಂದೆ, ತಾಯಿ ಮತ್ತು ಮೂವರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 11,000 ರೂ.



ಮೆಕ್ಸಿಕೊ: ಖೂರ್ನವಾಕಾ ನಗರದಲ್ಲಿರುವ ಕಸಾಲೆಸ್ ಸಂಸಾರ. ತಂದೆ, ತಾಯಿ ಮತ್ತು ಮೂವರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 7,500 ರೂ.



ಪೋಲೆಂಡ್: ಕಾನ್ಸ್ಟಾನ್‌ಸಿನ್ ನಗರದಲ್ಲಿರುವ ಸೊಬ್ಚನಿಸ್ಕಿ ಸಂಸಾರ. ನಾಲ್ವರು ಹಿರಿಯರು ಮತ್ತು ಒಬ್ಬ ಮಗಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 6,000 ರೂ.



ಈಜಿಪ್ಟ್: ಕೈರೋ ನಗರದ ಅಹಮದ್ ಸಂಸಾರ. ಹಿರಿಯರ ಸಂಖ್ಯೆ ಏಳು, ಐವರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 3,000 ರೂ.



ಈಕ್ವಡಾರ್: ಟಿಂಗೋ ನಗರದ ಐಮೆ ಸಂಸಾರ. ನಾಲ್ವರು ಹಿರಿಯರು ಮತ್ತು ಐವರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 1,250 ರೂ.



ಭೂತಾನ್: ಶಿಂಗ್ಯೆ ಹಳ್ಳಿಯ ನಾಮ್ಗೆ ಸಂಸಾರ. ಹಿರಿಯರ ಸಂಖ್ಯೆ ಏಳು, ಆರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 200 ರೂ.



ಚಾಡ್: ಬ್ರೈಡ್ಜಿಂಗ್ ನಿರಾಶ್ರಿತರ ಶಿಬಿರದಲ್ಲಿರುವ ಅಬೂಬಕರ್ ಸಂಸಾರ. ಮೂವರು ಹಿರಿಯರು, ಮೂವರು ಮಕ್ಕಳು. ಒಂದು ವಾರದ ಆಹಾರಕ್ಕೆಂದು ವೆಚ್ಚ ಮಾಡಿರುವುದು ಸುಮಾರು 49 ರೂ.

ಸತ್ತವರು ರೈತರಲ್ಲದಿರಬಹುದು. ಆದರೆ ಅವರು ಪ್ರಜೆಗಳಲ್ವೇ?

ಒಂದು ಪತ್ರ

ಒಂದು 'ಸಾವು'. ಅದು ಇನ್ನೊಂದು ಸಾವಿಗೂ ಕಾರಣವಾಗಬಹುದು; ಒಂದು ವ್ಯಕ್ತಿತ್ವದ ಬದಲಾವಣೆಗೆ ನಾಂದಿಯಾಗಬಹುದು; ಒಂದು ಅಸ್ತಿತ್ವವನ್ನೇ ಹಾಳುಗೆಡವಬಹುದು; ಒಂದು ಸಂಸ್ಕೃತಿಯ ಅಳಿವಿಗೂ ಕಾರಣವಾಗಬಹುದು; ಇಲ್ಲವೆ ವಿನಾಶಕ್ಕೂ ದಾರಿಯಾಗಬಹುದು. ಇಂತಹ ನೂರಾರು ಸಾಧ್ಯತೆಗಳು ಒಂದು ಸಾವಿನ ಸುತ್ತ ಹೆಣೆದುಕೊಂಡಿರಬಹುದು.

ಅಷ್ಟಕ್ಕೂ ಸಾವೆಂದರೇನು? ಅದೊಂದು ಶೂನ್ಯ, ಶಾಶ್ವತ ಅಗಲಿಕೆ. ನಮ್ಮೊಂದಿಗೆ ಓಡಾಡಿಕೊಂಡಿದ್ದ ಜೀವವೊಂದು ಶಾಶ್ವತವಾಗಿ ಇಲ್ಲವಾಗುವುದು. ಅದು ಮತ್ತೆ ಎಂದಿಗೂ ನಮ್ಮೊಂದಿಗೆ ಮಾತಾಡುವುದಿಲ್ಲ, ಓಡಾಡುವುದಿಲ್ಲ, ಜೀವಿಸುವುದಿಲ್ಲ. ಕೆಲವೊಂದು ಕಾಲ ಆ ಅಗಲಿಕೆಯ ನೋವು, ನೆನಪು. ಕೊನೆಗೆ ಅದೂ ಮಾಸುತ್ತದೆ. ಆದರೆ ಈ ಜೀವವು ಸಾಯುವಾಗ ಪಡುವ ಸಂಕಟ, ಸಾಯುವುದಕ್ಕೆ ಉಂಟಾದ ಕಾರಣಗಳು, ಅಲ್ಲಿಯ ಸನ್ನಿವೇಶ ನಿಜವಾದ ಮನುಷ್ಯತ್ವವನ್ನು ಅಲುಗಾಡಿಸುತ್ತವೆ.

ಇಂಥದ್ದೊಂದು ಸಾವು ಕೆಲವರಿಗೆ ಒಂದು ಅನುಭವವೇ ಅಲ್ಲ; ಅವರನ್ನು ತಟ್ಟುವುದೂ ಇಲ್ಲ! ಅಂಥವರ ಸಾಲಿನಲ್ಲಿ ಇಂದು ನಮ್ಮ ಸರ್ಕಾರ ನಿಂತಿದೆ. ಹಾಗಾದರೆ ಈ ಸರ್ಕಾರ ನಡೆಸುವವರು ಯಾರು? ಅವರೂ ಜೀವಂತ ಇರುವವರೇ? ಅವರಿಗೂ ಕೌಟುಂಬಿಕವಾದ, ಸಾಮಾಜಿಕವಾದ ಸಂಬಂಧಗಳಿಲ್ಲವೇ? ಖಂಡಿತಾ ಇದೆ. ಆದರೆ ಅವರ ಸಂಬಂಧಗಳಿರುವುದು ಅವರಂತೆಯೇ ಹೊಟ್ಟೆ ತುಂಬಿದವರೊಂದಿಗೆ. ಇವತ್ತು ಕರ್ನಾಟಕದಲ್ಲಿ –ಇಡೀ ಜಗತ್ತಿನಲ್ಲಿಯೂ–ಸಾಯುತ್ತಿರುವವರು ಹೊಟ್ಟೆಗಿಲ್ಲದವರು. ಈ ಹೊಟ್ಟೆಗಿಲ್ಲದವರನ್ನು ಆಳುವವರು ಹೊಟ್ಟೆ ತುಂಬಿರುವವರು!!

ಇವತ್ತು ನಮ್ಮ ನಾಡಿನಲ್ಲಿ 'ಆತ್ಮಹತ್ಯೆ'ಯ ಮೂಲಕ ರೈತರು ಸಾವಿಗೆ ಶರಣಾಗುತ್ತಿದ್ದಾರೆ. ಸಾವಿನ ಮೂಲಕ ಭೀಕರವಾದ ಪ್ರತಿಭಟನೆಯನ್ನು ಸಾರಿದ್ದಾರೆ. ಇದಕ್ಕೆ ಪ್ರತಿಯಾಗಿ ಸರ್ಕಾರದ ಪ್ರತಿನಿಧಿಗಳು–ಮುಖ್ಯಮಂತ್ರಿಯಾದಿಯಾಗಿ –ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಾ 'ಬಡತನ'ವನ್ನು ನಿರ್ಲಕ್ಷಿಸುತ್ತಿದ್ದಾರೆ. ಅವರ ಪ್ರಕಾರ– 'ಹೊಟ್ಟೆ ನೋವಿನಿಂದ, ಕೌಟುಂಬಿಕ ಕಲಹದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ; ಸತ್ತವರು ರೈತರಲ್ಲ!!'

'ಸತ್ತವರು ರೈತರಲ್ಲ'. ಇರಬಹುದು, ಹಾಗಾದರೆ ಇವರು ಯಾರು? ಯಾಕೆ ಸಾವಿಗೆ ಶರಣಾಗುತ್ತಿದ್ದಾರೆ? ಒಂದು ವೇಳೆ ರೈತರಲ್ಲದಿದ್ದರೂ ಈ ನಾಡಿನ ಪ್ರಜೆಗಳಲ್ಲವೇ? ಈ ನಾಡಿನ ಸರ್ಕಾರ ರಚನೆಯಲ್ಲಿ ಇವರದೂ ಪಾಲಿಲ್ಲವೇ? ಇವರ ಸಮಸ್ಯೆಗಳಿಗೆ ಸ್ಪಂದಿಸಬೇಕಾದವರು ಯಾರು?

'ಹೊಟ್ಟೆ ನೋವು'. ಮೇಲ್ನೋಟಕ್ಕೆ ಸಾಮಾನ್ಯವಾದ ರೋಗವಾಗಿ ಕಾಣುತ್ತದೆ. ಹೆಚ್ಚೆಂದರೆ ಅದು ರೋಗವೇ ಅಲ್ಲ! ಆದರೆ ಒಬ್ಬ ವ್ಯಕ್ತಿ ಈ ಸಣ್ಣ ಹೊಟ್ಟೆನೋವಿನಿಂದ ಪಾರಾಗಲು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆಂದರೆ, ಆತನನ್ನು ಭೇದಿಸಿದ ನೋವು ಎಂಥದ್ದಿರಬಹುದು?

ಇನ್ನು 'ಕೌಟುಂಬಿಕ ಕಲಹ'. ಇದನ್ನು ಗಂಡ-ಹೆಂಡಿರ ಜಗಳದ ಮೂಲಕವೇ ನೋಡಬಹುದು. ಈ ವಿಷಯದಲ್ಲಿ ಸರ್ಕಾರದ ಪ್ರತಿನಿಧಿಗಳು ಒಂದು ಅಂಶವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಬಡವರ ಮನೆಯ ಇಂತಹ ಕಲಹಗಳು ಇಡೀ ಊರಿಗೇ ತೆರೆದುಕೊಂಡಿರುತ್ತದೆ. ಅದರಲ್ಲಿ ಮುಚ್ಚುಮರೆ, ಮಾನ-ಮರ್ಯಾದೆಯ ಪ್ರಶ್ನೆಯೇ ಬರುವುದಿಲ್ಲ, ಯಾಕೆಂದರೆ ಮುಂಜಾನೆಯ ಹೊಟ್ಟೆಪಾಡು ರಾತ್ರಿಯ ಕಲಹವನ್ನು ಮರೆಸಿಬಿಡುತ್ತದೆ. ಒಂದು ವೇಳೆ ಬಡವರ ಮನೆಯ ಕಲಹ ವಿಕೋಪಕ್ಕೆ ತಿರುಗಿದರೆ, ಆದರಲ್ಲಿ ಸಾವನ್ನಪ್ಪುವವರು ಹೆಂಗಸರು ಜೊತೆಗೆ ಪುಟ್ಟಪುಟ್ಟ ಒಂದೋ ಎರಡೋ ಮಕ್ಕಳು. ಈ ವಿಚಾರದಲ್ಲಿ ಹೆಚ್ಚಾಗಿ ಗಂಡಸರು ಅಪರಾಧಿಗಳಾಗಿರುತ್ತಾರೆಯೇ ಹೊರತು ಜೀವತೆತ್ತವರಾಗಿರುವುದಿಲ್ಲ!

ಇಂದು ನಮ್ಮ ನಾಡಿನಲ್ಲಿ ನಡೆಯುತ್ತಿರುವ ಸರಣಿ ಆತ್ಮಹತ್ಯೆ ಪ್ರಕರಣದಲ್ಲಿ ಇಬ್ಬರು ಮಹಿಳೆಯರೂ ಸಾವಿಗೆ ಶರಣಾಗಿದ್ದಾರೆ. ಇಲ್ಲೆಲ್ಲ ಗಮನಿಸಬೇಕಾದ್ದೆಂದರೆ ಸತ್ತವರೆಲ್ಲ ಅವರ ಕುಟುಂಬದ ಯಜಮಾನರು ಎಂಬುದು. ಈ ಎಲ್ಲಾ ಸಾವಿಗೆ ಕಾರಣಗಳು ಬಹುಪಾಲು ರೈತರ ಸಮಸ್ಯೆಯೊಂದಿಗೆಯೇ ತಳುಕು ಹಾಕಿಕೊಂಡಿದೆಯೇ ವಿನಃ ಸರ್ಕಾರದ ಅಸಂಬದ್ಧ, ಅಪ್ರಬುದ್ಧ ಕಾರಣಗಳೊಂದಿಗಲ್ಲ! ಇವರೆಲ್ಲ ರೈತರಲ್ಲದಿದ್ದರೆ ಹೋಗಲಿ, ಈ ನಾಡಿನ ಪ್ರಜೆಗಳಲ್ಲವೇ? ತನ್ನ ಪ್ರಜೆಗಳ ನೋವಿಗೇ ಸ್ಪಂದಿಸದ ಸರ್ಕಾರ ಸಮೃದ್ಧ ನಾಡನ್ನು ಕಟ್ಟುವುದು ಸಾಧ್ಯವೇ? ಸಾವಿನ ಕಾರಣಗಳನ್ನು ಶೋಧಿಸಿ ಅದಕ್ಕೆ ಸೂಕ್ತ ಪರಿಹಾರ (ಒಂದು ಲಕ್ಷ ನೀಡುವುದಷ್ಟೇ ಪರಿಹಾರವಲ್ಲ) ಮಾರ್ಗಗಳನ್ನು ಕಂಡುಕೊಳ್ಳುವ ಬದಲು, ಅವರಿವರ ಮೇಲೆ ದೋಷಾರೋಪಣೆ ಮಾಡುತ್ತಾ ಕಾಲ ಹಾಕುತ್ತಿದೆ ಈ ಸರ್ಕಾರ.

ಇಂತಹ ವಿದ್ಯಮಾನಗಳಿಗೆ ಬಲಿಯಾಗುವವರೂ ಮತ್ತು ಪ್ರೇಕ್ಷಕರೂ ಆದ 'ನಾವು' ಅಂದರೆ, ಈ ನಾಡಿನ ಬಹುಸಂಖ್ಯಾತ 'ಬಡವರು' ಗಮನಿಸಬೇಕಾದ್ದು: ಇಂದು ಭಾರತದ ಅಥವಾ ಭಾರತದ ಯಾವುದೇ ರಾಜ್ಯದ ಸರ್ಕಾರವನ್ನು ರೂಪಿಸುವಲ್ಲಿ ನಮ್ಮ ಮತಗಳೇ ನಿರ್ಣಾಯಕವಾದದ್ದು ಎಂಬುದು. ಹೊಟ್ಟೆಗಿಲ್ಲದ ನಾವು ಬೇಗನೆ ವ್ಯಾಮೋಹಕ್ಕೆ ಬಲಿಯಾಗುವವರು; ಅದು ನಮ್ಮ ದೌರ್ಬಲ್ಯ ಕೂಡ. ಈ ದೌರ್ಬಲ್ಯದ ಎಳೆಯನ್ನು ಹೊಟ್ಟೆ ತುಂಬಿಸಿಕೊಂಡ ರಾಜಕಾರಣಿಗಳು ಗುರುತಿಸಿಕೊಂಡಿದ್ದಾರೆ. ಮತ್ತು ಚುನಾವಣೆಯ ಸಮಯದಲ್ಲಿ ಚೆನ್ನಾಗಿ ದುಡಿಸಿಕೊಳ್ಳುತ್ತಾರೆ. ಆಮೇಲೆ ಆರಿಸಿಬರುವುದು ನಮ್ಮ ಕ್ಷಣಿಕ ಮೋಹಕ್ಕೆ ತುತ್ತಾದ ಅಮೂಲ್ಯವಾದ ಮತದ ಕೇವಲವಾದ ಆಯ್ಕೆ. ಕೊನೆಗೆ ಇದಂತೂ ಸತ್ಯ: "ನಮ್ಮ ದೌರ್ಬಲ್ಯದಿಂದಾಗಿ ರಚನೆಗೊಂಡ ಸರ್ಕಾರ, ತನ್ನ ದೌರ್ಬಲ್ಯದಿಂದಾಗಿ ಅನಾಹುತಗಳನ್ನೇ ಸೃಷ್ಟಿ ಮಾಡುತ್ತದೆ ವಿನಃ ನಮ್ಮ ಒಳಿತನ್ನಲ್ಲ!!' ಎಂಬುದು.

-ಸಂತೋಷ ಗುಡ್ಡಿಯಂಗಡಿ, ಕುಂದಾಪುರ



ಹಿಂದಿ ಚಿತ್ರರಂಗದ ದಿಗ್ಗಜ ಗುರುದತ್ ಆಗಲಿ, ಅವರು ನಿರ್ದೇಶಿಸಿದ ಅದ್ಭುತ ಸಿನಿಮಾಗಳಾಗಲಿ ಯಾರಿಗೆ ತಾನೆ ಗೊತ್ತಿಲ್ಲ ಹೇಳಿ. ಗುರುದತ್ ಬದುಕಿದ್ದು ಕೇವಲ ನಲವತ್ತೇ ವರ್ಷವಾದರೂ ಅವರು ಸಾಧಿಸಿದ್ದು ಅಗಾಧವಾದದ್ದು. ಇಂತಹ ಅಸಾಧಾರಣ ಪ್ರತಿಭೆಯಾಗಿದ್ದ ಅವರ ಖಾಸಗಿ ಬದುಕು ಮಾತ್ರ ಅಷ್ಟೇ ಮಗ್ಗುಲುಗಳಿಂದ ಮತ್ತು ವಿಕ್ಷಿಪ್ತತೆಯಿಂದ ಕೂಡಿತ್ತು.

ಗಾಯಕಿ ಮತ್ತು ನಟಿ ಗೀತಾದತ್‌ರೊಂದಿಗಿನ ವಿವಾಹ, ಗುರುದತ್ ಚಿತ್ರಗಳಲ್ಲಿ ನಟಿಸಿದ ಅಪೂರ್ವ ಚೆಲುವೆ ಮತ್ತು ಅಸಾಧ್ಯ ನಟಿ ವಹೀದಾ ರೆಹಮಾನ್‌ರೊಂದಿಗೆ ಎಂದೂ ಈಡೇರದ ಪ್ರೇಮಕಥನ, ಯಶಸ್ಸು ಮತ್ತು ಸೋಲು, ಅಪಾರ ಹಣ ಮತ್ತು ಬಡತನ, ಇವೆಲ್ಲವನ್ನು ಕಂಡಿದ್ದ ಗುರುದತ್ ಕುಡಿದು ಕುಡಿದೇ ಅಕಾಲಿಕ ಮರಣ ಹೊಂದಿದರು.

ಅವರು ಬದುಕಿದಿದ್ದರೆ ಅವರಿಗೆ ಈಗ 84 ವರ್ಷ ವಯಸ್ಸಾಗಿರುತ್ತಿತ್ತು. ಇದೇ ಸಂದರ್ಭದಲ್ಲಿ ಅವರೊಂದಿಗೆ ಕೆಲಸ ಮಾಡಿದ್ದ, ಅವರನ್ನು ಹತ್ತಿರದಿಂದ ಬಲ್ಲವರಾಗಿದ್ದ ಅವರ ನಿಕಟವರ್ತಿ ಅಬ್ಬರ್ ಆಲಿಯವರು ಬರೆದಿರುವ 'ಟೆನ್ ಇಯರ್ಸ್ ವಿತ್ ಗುರುದತ್' ಪುಸ್ತಕ ಬಿಡುಗಡೆಯಾಗಿದೆ.

ಒಬ್ಬ ವ್ಯಕ್ತಿ ಕಣ್ಮರೆಯಾಗಿ ನಾಲ್ಕು ದಶಕಗಳೇ ಕಳೆದರೂ ಆತನ ಬದುಕಿನ ಬಗ್ಗೆ ಇಷ್ಟೊಂದು ಕುತೂಹಲವಿದೆಯೆಂದರೆ ಗುರುದತ್ ಎಂಥಾ ದೈತ್ಯ ಪ್ರತಿಭೆಯಿರಬಹುದು ಊಹಿಸಿ.

ದೊಡ್ಡ ಚಿತ್ರಗಳ ಆರ್ಭಟ ಮತ್ತು ಸಂಕಟ


ಸ್ವಾತಂತ್ರ್ಯೋತ್ಸವಕ್ಕೂ ಗಾಂಧಿನಗರಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ ಈ ಬಾರಿಯ ಆಗಸ್ಟ್ 15ರ ಹೊತ್ತಿಗೆ 'ಸ್ವಾತಂತ್ರ್ಯೋತ್ಸವದ ಶುಭಾಷಯಗಳು' ಎಂಬ ಜಾಹೀರಾತುಗಳೊಂದಿಗೆ ನಾಲ್ಕೈದು ದೊಡ್ಡ ದೊಡ್ಡ ಚಿತ್ರಗಳು ಬಿಡುಗಡೆಯಾಗಲಿವೆ.

ಬೊಂಬಾಟ್ ಗಣೇಶ್




ಆಗಸ್ಟ್ ಮೊದಲ ವಾರದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ರಮ್ಯಾ ಮೊದಲ ಬಾರಿಗೆ ಜೊತೆಯಾಗಿ ನಟಿಸಿರುವ 'ಬೊಂಬಾಟ್' ಬಿಡುಗಡೆಯಾಗಲಿದೆ. ಹಿರಿಯ ನಿರ್ದೇಶಕ ಡಿ. ರಾಜೇಂದ್ರ ಬಾಬು ಮೊದಲ ಬಾರಿಗೆ ಯುವ ನಟರಿರುವ ಚಿತ್ರ ನಿರ್ದೇಶಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಸ್ಟಾರ್ ವ್ಯಾಲ್ಯೂ ಇರುವ ರಾಕ್‌ಲೈನ್ ವೆಂಕಟೇಶ್ ಇದನ್ನು ನಿರ್ಮಿಸಿದ್ದಾರೆ. ಗಣೇಶ್ ವೃತ್ತಿ ಜೀವನದಲ್ಲಿ ಮಹತ್ತರ ಪಾತ್ರ ವಹಿಸಿರುವ ಮನೋಮೂರ್ತಿ ಮತ್ತು ಜಯಂತ್ ಕಾಯ್ಕಿಣಿಯವರ ಜೋಡಿ ಈ ಚಿತ್ರದಲ್ಲೂ ಕೆಲಸ ಮಾಡಿದೆ. ಅದೆಲ್ಲಕ್ಕಿಂತ ಮಿಗಿಲಾಗಿ ಗಣೇಶ್ ನಟಿಸಿರುವ ಎಲ್ಲಾ ಏಳು ಚಿತ್ರಗಳು ಶತದಿನೋತ್ಸವ ಆಚರಿಸಿರುವುದರಿಂದ 'ಬೊಂಬಾಟ್' ಚಿತ್ರಕ್ಕೆ ಒಳ್ಳೆ ಓಪನಿಂಗ್ ಸಿಗುವುದರ ಬಗ್ಗೆ ಯಾವ ಅನುಮಾನವೂ ಇಲ್ಲ.

ತಾಜಾ ನಿರ್ದೇಶಕನ ಮಹಲ್



'ಬೊಂಬಾಟ್'ಗಿಂತ ಒಂದು ವಾರ ಮುನ್ನ ಪೂಜಾಗಾಂಧಿ ಮತ್ತು ಅಜಯ್ ನಟಿಸಿರುವ 'ತಾಜ್‌ಮಹಲ್' ಬಿಡುಗಡೆಯಾಗಲಿದೆ. ಮೊದಲ ಬಾರಿಗೆ ಈ ಚಿತ್ರವನ್ನು ಚಂದ್ರು ಎಂಬ ಹಳ್ಳಿಯ ಹುಡುಗ ನಿರ್ದೇಶಿಸಿದ್ದಾನೆ. ಈ ಚಿತ್ರದ ಜಾಹಿರಾತುಗಳು ಮಾತ್ರವಲ್ಲ ಹಾಡುಗಳೂ ಈಗಾಗಲೇ ಹಿಟ್ಟಾಗಿದ್ದು ಈ ಚಿತ್ರದ ಬಗ್ಗೆ ಬಹಳ ನಿರೀಕ್ಷೆಯಿದೆ.

ದರ್ಶನ್ ನಾಮಬಲದ ಚಿತ್ರ



'ಬೊಂಬಾಟ್' ಮತ್ತು 'ತಾಜ್‌ಮಹಲ್' ಚಿತ್ರಗಳ ನಂತರ ಸರಿಸುಮಾರಾಗಿ ಆಗಸ್ಟ್ ಹದಿನೈದರಂದೇ ದರ್ಶನ್ ಅಭಿನಯದ 'ಅರ್ಜುನ್' ಬಿಡುಗಡೆಯಾಗಲಿದೆ. ದರ್ಶನ್ ನಟಿಸಿದ 'ಗಜ' ಮತ್ತು 'ಇಂದ್ರ' ಈಗಾಗಲೇ ಬಾಕ್ಸಾಫೀಸಿನಲ್ಲಿ ಜಯಭೇರಿ ಬಾರಿಸಿರುವುದರಿಂದ ಸದ್ಯಕ್ಕೆ ದರ್ಶನ್ ಬಾಕ್ಸಾಫೀಸ್ ಕಿಂಗ್ ಎಂದೆನಿಸಿಕೊಂಡಿದ್ದಾರೆ. ಹೀಗಾಗಿ ದರ್ಶನ್ ನಾಮಬಲದಲ್ಲೇ ಈ ಚಿತ್ರ ಗೆಲ್ಲುತ್ತೆ ಎಂಬ ವಿಶ್ವಾಸದಲ್ಲಿ ನಿರ್ಮಾಪಕ ಜಯಣ್ಣ ಓಡಾಡುತ್ತಿದ್ದಾರೆ.



ಗೆದ್ದರೆ ಬುದ್ಧಿವಂತ! ಸೋತರೆ....?

ಈ ಹುಡುಗರ ಅಬ್ಬರದ ನಡುವೆ ಉಪೇಂದ್ರ ಅಭಿನಯದ 'ಬುದ್ಧಿವಂತ' ಕೂಡಾ ಇದೇ ಸಂದರ್ಭದಲ್ಲಿ ತೆರೆಕಾಣಲಿದೆ. ಗೋಲ್ಡನ್ ಸ್ಟಾರ್ ಗಣೇಶ್, ಛಾಲೆಂಜಿಂಗ್ ಸ್ಟಾರ್ ದರ್ಶನ್‌ಗೆ ಹೋಲಿಸಿದರೆ ರಿಯಲ್ ಸ್ಟಾರ್ ಉಪೇಂದ್ರ ಚಾರಿಷ್ಮ ಈಗ ಮಂಕಾಗಿದೆ. ಆದರೂ ಈ ಚಿತ್ರದ ಬಗ್ಗೆ ಬಹಳ ನಿರೀಕ್ಷೆ ಇರಲು ಕಾರಣ ಇದನ್ನು ಮೋಹನ್ ಅತ್ಯಂತ ಶ್ರೀಮಂತವಾಗಿ ನಿರ್ಮಿಸಿರುವುದು. ಚಿತ್ರದ ಹಾಡುಗಳಿಗಾಗಿ ಜಮ್ಮು ಕಾಶ್ಮೀರ ಮಾತ್ರವಲ್ಲದೆ ದೂರದ ಚೈನಾಕ್ಕೂ ಹೋಗಿಬಂದಿದ್ದಾರೆ. ಈಗ ಸೋಲಿನ ಸರದಾರ ಎಂಬಂತಾಗಿರುವ ಉಪೇಂದ್ರರಿಗೆ ಈ ಚಿತ್ರ ಹಿಟ್ ಅವರು ಮರುಜನ್ಮ ಪಡೆದಂತೆಯೇ.



ಮಾದೇಶನೂ ಬತ್ತಾವ್ನೆ!

ಶಿವರಾಜ್ ಕುಮಾರ್ ಮತ್ತು ರವಿಶ್ರೀವತ್ಸ ಜೋಡಿಯ ಮಾದೇಶ ಕೂಡ ಸರಿಸುಮಾರು ನೂರು ಕೇಂದ್ರಗಳಲ್ಲಿ ಬಿಡುಗಡೆಯಾಗುತ್ತಿದೆ. ತಾನೊಬ್ಬ ನಿರ್ದೇಶಕ ಎಂದು ಸಾಬೀತು ಮಾಡುವಲ್ಲಿ ರವಿಶ್ರೀವತ್ಸನಿಗೆ ಈ ಚಿತ್ರ ಕೊನೆಯ ಛಾನ್ಸ್ಆಗಿದೆ.


ಈ ಐದು ಚಿತ್ರಗಳ ಯಶಸ್ಸಿನ ಮೇಲೆ ಗಾಂಧಿನಗರದ ಈ ವರ್ಷದ ಭವಿಷ್ಯ ನಿರ್ಧಾರವಾಗಲಿದೆ. ಯಾಕೆಂದರೆ 2008ರ ಆದಿಯ ಮೊದಲ ಆರು ತಿಂಗಳಲ್ಲಿ ಯಾವುದೇ ಚಿತ್ರ ಬಾಕ್ಸಾಫೀಸಿನಲ್ಲಿ ಗೆದ್ದಿಲ್ಲ. ಪ್ರತಿಯೊಂದು ಚಿತ್ರವೂ ಅಪಾರ ನಿರೀಕ್ಷೆ ಹುಟ್ಟಿಸಿದರೂ ಅವೆಲ್ಲ ಬಾಕ್ಸಾಫೀಸಿನಲ್ಲಿ ನಿರಾಶಾದಾಯಕ ಪ್ರದರ್ಶನ ಕಂಡಿವೆ. ಗಣೇಶ್ ಅಭಿನಯದ 'ಅರಮನೆ'ಯ ಕತೆಯೂ ಅದೇ ಆಗಿದೆ. ಹಾಗೆಯೇ ದರ್ಶನ್ ಅಭಿನಯದ 'ಇಂದ್ರ' ಚಿತ್ರದ ಗಳಿಕೆ ಕೂಡ ಆತನ ಅಭಿನಯದ 'ಗಜ' ಚಿತ್ರಕ್ಕಿಂತ ಕಡಿಮೆ ಆಗಿದೆ. ಈ ಮಧ್ಯ 'ಕಾಮಣ್ಣನ ಮಕ್ಕಳು' ಎಂಬ ತಮಾಷೆ ಚಿತ್ರವಾದರೂ ಮಕ್ಕಳನ್ನು ಮತ್ತು ದೊಡ್ಡವರನ್ನು ರಂಜಿಸಬಹುದು ಎಂಬ ನಿರೀಕ್ಷೆಯೂ ಸುಳ್ಳಾಗಿದೆ. ಇದೇ ಸಂದರ್ಭದಲ್ಲಿ ಸುದೀಪ್ ಮತ್ತು ರಮ್ಯಾ ನಟಿಸಿರುವ 'ಮುಸ್ಸಂಜೆಯ ಮಾತು' ಸದ್ದುಗದ್ದಲವಿಲ್ಲದೆ ಚಿತ್ರಮಂದಿರಗಳಲ್ಲಿ ನಿಧಾನವಾಗಿ ಸಾಗುತ್ತಿದೆ. ಆದರೆ ಐದು ದೊಡ್ಡ ದೊಡ್ಡ ಚಿತ್ರಗಳು ಒಮ್ಮೆಲೇ ಬಿಡುಗಡೆಯಾಗಿ ಅವೆಲ್ಲಾ ಮುಗ್ಗರಿಸಿದರೆ ಗಾಂಧಿನಗರದ ಆರ್ಥಿಕ ಪರಿಸ್ಥಿತಿ ಏನಾಗಬಹುದು? ಈ ನಾಲ್ಕು ಚಿತ್ರಗಳ ನಡುವೆ ಪ್ರೇಕ್ಷಕರು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು? ಎಂಬ ಚರ್ಚೆಗಳು ಗಾಂಧಿನಗರದ ನಿರ್ಮಾಪಕ-ಹಂಚಿಕೆದಾರರ ನಡುವೆ ನಡೆಯುತ್ತಲೇ ಇವೆ.

ಒಟ್ಟಾರೆ ಆಗಸ್ಟ್ 15ರ ಶುಭ ಸಂದರ್ಭದಲ್ಲಿ ಈ ಚಿತ್ರಗಳ ನಿರ್ಮಾಪಕರಿಗೆ ಸ್ವಾತಂತ್ರ್ಯ ಸಿಗುತ್ತೋ ಅಥವಾ ಸ್ವಾತಂತ್ರ್ಯ ಹರಣವಾಗುತ್ತೋ ನೋಡುವಂತಾಗಿದೆ.

■ ಶೆಟ್ಟಿ

ಸಿನಿ Bits

ಬಿ.ಆರ್. ಕೇಶವ್ ಎಂಬ ದಢೂತಿ ದೇಹದ ನಿರ್ದೇಶಕ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ದಾಖಲೆ ಸ್ಥಾಪಿಸಿದ್ದಾರೆ. ಅದೇನೆಂದರೆ ತಮ್ಮ ನಿರ್ದೇಶನದ ಎರಡು ಚಿತ್ರಗಳನ್ನು ಜೊತೆಜೊತೆಯಾಗಿ ಒಂದೇ ದಿನ ಬಿಡುಗಡೆ ಮಾಡಿರುವುದು. ಯಾರೂ ಇಲ್ಲಿಯತನಕ ಕೇಳದೇ ಇರುವ ಆ ಚಿತ್ರಗಳ ಹೆಸರು 'ಅಪಹರಣ' ಮತ್ತು 'ಜೇಡರ ಬಲೆ'.



'ಅಪಹರಣ' ಸ್ವಪ್ನ ಚಿತ್ರಮಂದಿರದಲ್ಲಿ ತೆರೆಕಂಡಿದ್ದರೆ, 'ಜೇಡರ ಬಲೆ' ಸವಿತಾ ಚಿತ್ರಮಂದಿರದಲ್ಲಿ ಬಿಡುಗಡೆಗೊಂಡಿವೆ. ಈ ಎರಡೂ ಚಿತ್ರಗಳು ಆರಂಭವಾಗಿದ್ದು ಯಾವಾಗ, ಅವುಗಳನ್ನು ನಿರ್ಮಿಸಿರುವವರು ಯಾರು, ಅವನ್ನು ಯಾವಾಗ ಮತ್ತು ಎಲ್ಲಿ ಚಿತ್ರೀಕರಿಸಲಾಯಿತು ಎಂಬ ವಿವರಗಳು ಯಾರಿಗೂ ಗೊತ್ತಿಲ್ಲ. ಮಾತ್ರವಲ್ಲ ಅವೆರಡು ಬೆಂಕಿಪೊಟ್ಟಣದಂತಿರುವ ಮಿನಿ ಥಿಯೇಟರ್‌ಗಳಲ್ಲಿ ತೆರೆ ಕಂಡಿರುವುದರಿಂದ ಅವುಗಳ ಯೋಗ್ಯತೆ ಏನೆಂದು ನೀವೇ ಸುಲಭವಾಗಿ ಊಹಿಸಬಹುದು.

ಅದೇನೇ ಇರಲಿ, ಕೇಶವ್‌ಗೆ ತಾನೊಂದು ದಾಖಲೆ ಸ್ಥಾಪಿಸಿದ್ದೇನೆ ಎಂಬುದರ ಬಗ್ಗೆ ಮಾತ್ರ ಹೆಮ್ಮೆ. ಜಗತ್ತು ಹೀಗೂ ಉಂಟು!

■ ■ ■ ■ ■

ನಾಲ್ಕು ವರ್ಷಗಳ ಹಿಂದೆ ಆಗಸ್ಟ್ 15ರ ಶುಕ್ರವಾರದಂದೇ ಹಂಚಿಕೆದಾರ ಜಯಣ್ಣ ಗಾಂಧಿನಗರದಲ್ಲಿ ತಮ್ಮ ಹೊಸ ಕಚೇರಿಯನ್ನು ಆರಂಭಿಸಿದ್ದರಂತೆ.



ಆನಂತರ ಈ ಜಯಣ್ಣ ಬಿಡುಗಡೆ ಮಾಡಿದ ಚಿತ್ರಗಳೆಲ್ಲವೂ ಸೂಪರ್‌ಹಿಟ್ ಆದವು. ಜಯಣ್ಣ ಲಕ್ಕಿ ಹಂಚಿಕೆದಾರ, ಅವರದ್ದು ಚಿನ್ನದ ಕೈ ಎಂಬಿತ್ಯಾದಿ ಮಾತುಗಳು ಗಾಂಧಿನಗರದಲ್ಲಿ ಕೇಳಿಬಂದವು. ಚಿತ್ರವನ್ನು ಅವರ ಸಂಸ್ಥೆಯ ಮುಖಾಂತರ ಬಿಡುಗಡೆ ಮಾಡಲು ನಿರ್ಮಾಪಕರುಗಳು ಹಾತೊರೆಯಲಾರಂಭಿಸಿದರು.

ಈಗ ನಾಲ್ಕು ವರ್ಷಗಳ ನಂತರ ಮತ್ತೆ ಸ್ವಾತಂತ್ರ್ಯ ದಿನವಾದ ಆಗಸ್ಟ್ 15 ಶುಕ್ರವಾರದಂದೇ ಬರುತ್ತಿರುವುದರಿಂದ ಅಂದು ಜಯಣ್ಣ ನಿರ್ಮಾಣದ ಮೊದಲ ಚಿತ್ರ 'ಅರ್ಜುನ್' ಬಿಡುಗಡೆಯಾಗುತ್ತಿದೆ. ಜಯಣ್ಣನ ಪಾಲಿಗೆ ಸ್ವಾತಂತ್ರ್ಯೋತ್ಸವದ ದಿನ ಮತ್ತು ಶುಕ್ರವಾರದ ಕಾಂಬಿನೇಷನ್ ಅದೃಷ್ಟದ ಬಾಗಿಲನ್ನು ತೆರೆದಿದ್ದವಂತೆ. ಆದ್ದರಿಂದ 'ಅರ್ಜುನ್' ಕೂಡ ಹಿಟ್ ಆಗುತ್ತದೆ ಎಂಬ ನಂಬಿಕೆಯಲ್ಲಿ ಅವರಿದ್ದಾರೆ. ಗಾಂಧಿ ನಗರದಲ್ಲಿ ಇಂತಹ ಮೂಢನಂಬಿಕೆಗೆ ಉದಾಹರಣೆಗಳು ಹೆಜ್ಜೆಹೆಜ್ಜೆಗೆ ಸಿಗುತ್ತವೆ. ಈ ಬಾರಿ ಹೆಜ್ಜೆ ಹಾಕಿದಾಗ ಸಿಕ್ಕಿದವರೇ ಜಯಣ್ಣ.

■ ■ ■ ■ ■

ಎಲ್ಲ ಹೊಸಬರೇ ತುಂಬಿರುವ 'ಹೃದಯಾ ಐ ಮಿಸ್ ಯೂ' ಎಂಬ ಚಿತ್ರವೊಂದು ಬಿಡುಗಡೆಗೆ ಕಾದುಕುಳಿತಿದೆ. ಈ ಚಿತ್ರದ ಪತ್ರಿಕಾಗೋಷ್ಠಿ ನಡೆದಾಗ ಅದರ ನಿರ್ದೇಶಕ ಸತ್ಯಾ ಎಂಬಾತ ಹೇಳಿದ್ದೇನು ಗೊತ್ತೆ? "ನಮ್ಮ ಚಿತ್ರದಲ್ಲಿ ಸಮಾಜಕ್ಕೆ ಒಂದು ಮೆಸೇಜ್ ಕೊಡುವ ಒಂದು ಗೆಸ್ಟ್ ರೋಲ್‌ಗಾಗಿ ಅನುಭವೀ ನಟರು ಬೇಕಿತ್ತು. ಅದಕ್ಕೇ ಆ ಪಾತ್ರಕ್ಕೆ ಲೂಸ್ ಮಾದ ಮತ್ತು ದುನಿಯಾ ರಶ್ಮಿ ಅವರನ್ನು ಆಯ್ಕೆ ಮಾಡಿಕೊಂಡೆ" ಎಂದಿದ್ದಾನೆ.



ರಶ್ಮಿ ಮಾತು ಬದಿಗಿರಲಿ. ನೆಟ್ಟಗೆ ನಿಲ್ಲಲೂ ಬಾರದ ಲೂಸ್ ಮಾದ ಸಮಾಜಕ್ಕೆ ಅದೆಂಥ ಸಂದೇಶವನ್ನು ಕೊಡಬಲ್ಲ ಸಾಧ್ಯ? ಲೂಸ್ ಮಾದನ ಕೈಲಿ ಮೆಸೇಜು ಹೇಳಿಸೋ ಈ ನಿರ್ದೇಶಕ ಅದಿನ್ನೆಂಥಾ ಲೂಸ್ ಇರಬಹುದು? ಎಂಬ ಪ್ರಶ್ನೆ ಗಾಂಧಿನಗರದಲ್ಲಿ ಈಗ ಜೋಕ್ ಆಗಿ ಚಾಲ್ತಿಯಲ್ಲಿದೆ!



R B P LANKESH, Kannada Weekly Price Rs. 12/- 23-7-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4



ಪೂಜಾ ಫೈಟಿಂಗ್

ಪಂಜಾಬಿ ಕುಡಿ ಪೂಜಾಗಾಂಧಿ ಈಗ ತಾನು ಅಲಂಕರಿಸಿರುವ 'ನಂ 1' ಸ್ಥಾನದಲ್ಲಿ ಎಷ್ಟು ಭದ್ರವಾಗಿದ್ದಾಳೆಂದರೆ ಆಕೆ ಈಗ ವೈವಿಧ್ಯತೆಯುಳ್ಳ ಪಾತ್ರಗಳನ್ನು ಆಯ್ಕೆ ಮಾಡಲು ಆರಂಭಿಸಿದ್ದಾಳೆ. ಉದಾಹರಣೆಗೆ ಸದ್ಯದಲ್ಲೇ ಬಿಡುಗಡೆಯಾಗಲಿರುವ 'ಅನು' ಎಂಬ ಚಿತ್ರದಲ್ಲಿ ಈಕೆ ಸಿಕ್ಕಾಪಟ್ಟೆ ಫೈಟಿಂಗ್ ಮಾಡಿದ್ದಾಳಂತೆ. ಅಂದರೆ ಪೂಜಾ 'ಫೈಟಿಂಗ್ ಸ್ಟಾರ್' ಕೂಡಾ ಆದಂತಾಯಿತು. ಹಾಗೆಯೇ 'ನಿನಗಾಗಿ ಕಾದಿರುವೆ' ಎಂಬ ಇನ್ನೊಂದು ಚಿತ್ರದಲ್ಲಿ ಆಕೆ ಗಂಟೆಗೆ ನೂರಿಪ್ಪತ್ತು ಕಿಲೋಮೀಟರ್ ವೇಗದಲ್ಲಿ ಕಾರನ್ನು ಓಡಿಸಿದ್ದಾಳಂತೆ. ಅಂದರೆ ಪೂಜಾ 'ಚೇಸಿಂಗ್ ಸ್ಟಾರ್' ಕೂಡ ಆದಂತಾಯಿತು. ಈ ಚಿತ್ರವನ್ನು ನಿರ್ದೇಶಿಸಿರುವುದು ಸಾಹಸ ನಿರ್ದೇಶಕ ಜಾಲಿ ಬಾಸ್ಟಿನ್ ಆಗಿರುವುದರಿಂದ ಚಿತ್ರದುದ್ದಕ್ಕೂ ಹಲವಾರು ಕಾರ್ ಛೇಸ್ ದೃಶ್ಯಗಳು ಇವೆಯಂತೆ.

ಫೈಟ್ ಮಾಡುವುದು, ಛೇಸಿಂಗ್ ಮಾಡುವುದು ಹೀರೋಗಳ ಕರಾಮತ್ತು ಎಂದು ಚಿತ್ರರಂಗ ನಂಬಿರುವಾಗ ಪೂಜಾ ಗಾಂಧಿ ನಾಯಕರ ಅಡ್ಡಕ್ಕೇ ಕೈಹಾಕುತ್ತಿದ್ದಾಳೆಯೇ?!

ಸಿಟಿಜನ್ ಪ್ರೇಕ್ಷಕರ ಪಾಲಿನ ಪಾಯ್ಸನ್



ಸಾಯಿಪ್ರಕಾಶ್ ಮತ್ತು ಸಾಯಿ ಕುಮಾರ್ ಸಮಾಗಮದ ಚಿತ್ರ 'ಸಿಟಿಜನ್' ತೆರೆಕಂಡಿದೆ. ಇಬ್ಬರು ಸಾಯಿಗಳು ಒಟ್ಟಿಗೆ ಸೇರಿದ ನಂತರ ಪ್ರೇಕ್ಷಕರನ್ನು ಸಾಯಿಸದೇ ಬಿಡುತ್ತಾರೆಯೇ?

ಈ ಚಿತ್ರದ ಹೈಲೇಟ್‌ಗಳು ಹೀಗಿವೆ: ನಾಲ್ಕು ಭಯಂಕರ ಫೈಟಿಂಗ್‌ಗಳು, ಎರಡು ಚೇಸಿಂಗ್ ದೃಶ್ಯಗಳು, ಜೊತೆಗೆ ಕೆಲ ರೇಪ್ ಪ್ರಕರಣಗಳು, ಎರಡು ಬಾಂಬ್ ಬ್ಲಾಸ್ಟ್‌ಗಳು, ಒಂದು ಬ್ಯಾಂಕ್ ರಾಬರಿ, ಮಧ್ಯೆ ಒಂದು ಕಿಡ್ನಾಪ್.... ಇವೆಲ್ಲದರ ನಡುವೆ ಚಿತ್ರದಲ್ಲಿ ಅದೆಷ್ಟು ಜನ ಸತ್ತರು, ಅದೆಷ್ಟು ರಕ್ತ ಹರಿಯಿತು ಎಂಬುದನ್ನು ಲೆಕ್ಕ ಇಡಲು ಸಾಧ್ಯವಾಗದಿದ್ದಕ್ಕೆ ವಿಷಾದಿಸುತ್ತೇವೆ.

ಇದು ನಟ ಸಾಯಿಕುಮಾರ್ ನಟನೆಯ 50ನೇ ಚಿತ್ರ. ಇದರಲ್ಲೂ ಎಂದಿನಂತೆ ಅವರು ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರದಲ್ಲೇ ಅಭಿನಯಿಸಿದ್ದಾರೆ. ಇನ್ನು ಕೆಲವೇ ಸಮಯದಲ್ಲಿ ನೂರರ ಗಡಿ ದಾಟಲಿರುವ ಸಾಯಿ ಪ್ರಕಾಶ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಇವರಿಬ್ಬರೂ 'ತೆಲುಗು ಜನಂ'. ಹೀಗಾಗಿ ಈ ಚಿತ್ರವನ್ನು ಕನ್ನಡ ಮತ್ತು ತೆಲುಗಲ್ಲಿ ಏಕಕಾಲದಲ್ಲಿ ಚಿತ್ರಿಸಿದ್ದಾರೆ. ಇದು ತೆಲುಗಿನ ರೀಮೇಕೋ ಅಥವಾ ತೆಲುಗಲ್ಲಿ ಕನ್ನಡದ ಪ್ರತಿಯಾಗಿ ಬಂದಿದೆಯೋ ಎಂಬುದು ಗುಟ್ಟಾಗಿ ಉಳಿದಿದೆ.



ಈ ಚಿತ್ರವನ್ನು ಸಾಯಿಕುಮಾರ್ ಬಾಗೇಪಲ್ಲಿಯಿಂದ ವಿಧಾನಸಭಾ ಚುನಾವಣೆಗೆ ನಿಂತಾಗಲೇ ತೆರೆಕಾಣಿಸಬೇಕು ಎಂಬುದು ಇಬ್ಬರ ಬಯಕೆಯಾಗಿತ್ತು, ಇಬ್ಬರೂ ಬಿಜೆಪಿಯ ಕಟ್ಟಾ ಕಾರ್ಯಕರ್ತರಾಗಿರುವುದರಿಂದ 'ಸಿಟಿಜನ್' ಬಿಡುಗಡೆಗಾಗಿ ಭಾರೀ ಪ್ರಯತ್ನ ಪಟ್ಟರು. ಆದರೆ ಸೆನ್ಸಾರ್ ಬೋರ್ಡ್‌ನವರು ಇವರ ಆಸೆಗೆ ಮಣ್ಣೆರಚಿದ್ದರು. ಕನಿಷ್ಠ ಇಪ್ಪತ್ತೆಂಟು ದೃಶ್ಯಗಳಿಗೆ ಕತ್ತರಿ ಪ್ರಯೋಗ ಮಾಡಿದರೆ ಮಾತ್ರ ಇದು ಪ್ರದರ್ಶನವಾಗಲು ಯೋಗ್ಯ ಎಂದು ಸೆನ್ಸಾರ್ ಬೋರ್ಡ್ ಹೇಳಿದ್ದರಿಂದ ಈ ಚಿತ್ರ ತಡವಾಗಿ ಬಿಡುಗಡೆಯಾಗುತ್ತಿದೆ.

ಈ ಚಿತ್ರವನ್ನು ನೀವು ನೋಡಬೇಕೋ ಬೇಡವೋ ಎಂಬುದು ಸಹೃದಯ ಓದುಗರ ವಿವೇಚನೆಗೆ ಬಿಟ್ಟಿದ್ದೇವೆ.

ದರ್ಶನ್ ಪಾಲಾದ 'ಬಾಸ್'



ದರ್ಶನ್ ಮತ್ತು ಸುದೀಪ್ ನಡುವಿನ ಸ್ಟಾರ್‌ವಾರ್ ತಾರಕಕ್ಕೇರಿದೆ. ಈ ಹಿಂದೆ ರಮೇಶ್ ಯಾದವ್ ನಿರ್ಮಾಣದ, ಪಿ.ಸತ್ಯಾ ನಿರ್ದೇಶನದ 'ಬಾಸ್'' ಎಂಬ ಚಿತ್ರದಲ್ಲಿ ಸುದೀಪ್ ನಟಿಸುವುದಾಗಿ ಘೋಷಣೆಯಾಗಿತ್ತು, ಒಮ್ಮೆ ಪತ್ರಿಕೆಗಳಲ್ಲಿ ಈ ಸಿನಿಮಾದ ಜಾಹೀರಾತು ಕೂಡಾ ಪ್ರಕಟಗೊಂಡಿತ್ತು, ಆದರೆ ಸುದೀಪ್ ಬಿಜಿ ಆಗಿದ್ದುದರಿಂದ ಆ ಚಿತ್ರ ಮುಂದೂಡಲ್ಪಟ್ಟಿತ್ತು.



ಇದೇ ಹೊತ್ತಿಗೆ ದರ್ಶನ್ ಕಾಲ್‌ಶೀಟಿಗಾಗಿ ರಮೇಶ್ ಯಾಡವ್ ಕೇಳಿದ್ದರು. ಅದಕ್ಕೆ ಒಪ್ಪಿದ ದರ್ಶನ್ ಒಂದು ಪರತ್ತನ್ನು ಹಾಕಿದರಂತೆ. ಅದೇನೆಂದರೆ 'ಬಾಸ್' ಎಂಬ ಟೈಟಲ್ ಅನ್ನು ದರ್ಶನ್‌ಗೆ ನೀಡುವುದು! ಇದನ್ನು ಕೇಳಿ ರಮೇಶ್ ಯಾದವ್‌ಗೆ ಒಂದು ಕ್ಷಣ ಧರ್ಮಸಂಕಟವಾಗಿದೆ. ಆದರೆ ಸದ್ಯಕ್ಕೆ ದರ್ಶನ್ ಗಾಂಧಿನಗರದಲ್ಲಿ ಓಡುವ ಕುದುರೆಯಾಗಿರುವುದರಿಂದ ಅದಕ್ಕೆ ವಿಧಿ ಇಲ್ಲದೆ ತಲೆ ಅಲ್ಲಾಡಿಸಿ ದರ್ಶನ್ ಕಾಲ್‌ಶೀಟ್ ಪಡೆದಿದ್ದಾರೆ.

ಹೀಗೆ ತನ್ನ 'ಬಾಸ್'ಗಿರಿಯನ್ನು ತನ್ನ ಪರಮ ಎದುರಾಳಿ ದರ್ಶನ್ ಕಸಿದುಕೊಂಡಿದ್ದಕ್ಕಾಗಿ ಸುದೀಪ್ ಗುರ್ ಎನ್ನುತ್ತಿದ್ದಾನಂತೆ.

ಮಿಂಚಿದ ಓಟ

ಇತ್ತೀಚಿನ ದಿನಗಳಲ್ಲಿ 'ಮಿಂಚಿನ ಓಟ' ಚಿತ್ರ ಮೂಡಿಸಿದಷ್ಟು ಹೈಪ್ ಬೇರೆ ಯಾವ ಚಿತ್ರವೂ ಮಾಡಿರಲಿಲ್ಲ, ಈ ಚಿತ್ರ ತಾಂತ್ರಿಕವಾಗಿ ಹಿಂದಿಯ ಲೆವೆಲ್ಲಿಗೆ ಮೂಡಿಬಂದಿದೆ, ಚಲಿಸುವ ರೈಲೊಂದಕ್ಕೆ ಪ್ರಾಣದ ಭಯವಿಲ್ಲದೆ ನಾಯಕನಟ ವಿಜಯರಾಘವೇಂದ್ರ ಡಿಕ್ಕಿ ಹೊಡೆದಿದ್ದಾರೆ..... ಎಂಬಿತ್ಯಾದಿ ಸುದ್ದಿಗಳಿಂದಾಗಿ 'ಮಿಂಚಿನ ಓಟ'ದ ಬಗ್ಗೆ ಗಾಂಧಿನಗರದ ಜನರಲ್ಲೂ, ಪ್ರೇಕ್ಷಕರಲ್ಲೂ ಕುತೂಹಲ ಸೃಷ್ಟಿಯಾಗಿತ್ತು. ಇಷ್ಟಲ್ಲದೇ ಸಹೋದರರಾದ ವಿಜಯರಾಘವೇಂದ್ರ ಮತ್ತು ಶ್ರೀಮುರಳಿ ಮೊದಲ ಬಾರಿಗೆ ಒಟ್ಟಿಗೆ ನಟಿಸಿದ್ದೂ ಕುತೂಹಲವನ್ನು ಹೆಚ್ಚಿಸಿತ್ತು, ಎಲ್ಲಕ್ಕಿಂತ ಮುಖ್ಯವಾಗಿ 'ಸೈನೆಡ್' ಚಿತ್ರದ ಮೂಲಕ ತಾನೊಬ್ಬ ಸದಭಿರುಚಿಯ ಮತ್ತು ಕ್ರಿಯಾಶೀಲ ನಿರ್ದೇಶಕ ಎಂದು ತೋರಿಸಿದ್ದ ರಮೇಶ್ ಈ ಚಿತ್ರ ನಿರ್ದೇಶಿಸಿದ್ದರಿಂದ ಸಹಜವಾಗಿಯೇ ಇದು ಕೂಡ ವಿಭಿನ್ನವಾಗಿರಬಹುದು ಎಂದು ಅನೇಕರು ಭಾವಿಸಿದ್ದರು.



ಆದರೆ ಈ ಎಲ್ಲಾ ಕುತೂಹಲ, ನಿರೀಕ್ಷೆ, ಭಾವನೆಗಳು ಚಿತ್ರ ನೋಡನೋಡುತ್ತಿದ್ದಂತೇ ಹುಸಿಯಾಗತೊಡಗುತ್ತದೆ. ಒಂದು ಸಾಧಾರಣ ಎಳೆಯ ಕಥೆಗೆ ಅದ್ಭುತವಾದ ತಾಂತ್ರಿಕ ಮೆರುಗನ್ನು ನೀಡುವಲ್ಲಿ ಮಾತ್ರ ರಮೇಶ್ ಯಶಸ್ವಿಯಾಗಿದ್ದಾರೆ. ಆದರೆ ದುರ್ಬಲ ಕಥಾವಸ್ತು ಮತ್ತು ನಿರೂಪಣೆಯಿಂದಾಗಿ ಚಿತ್ರ ನೋಡುಗರ ಹೃದಯವನ್ನು ತಟ್ಟುವುದಿಲ್ಲ. ಹೀಗಾಗಿ ಚಿತ್ರ ಮುಗಿದನಂತರ ರಾಜನ್ ಅವರ ಅದ್ಭುತವಾದ ಕ್ಯಾಮೆರಾ ಕೈಚಳಕದ ಕೆಲಸ ಮಾತ್ರ ಮನಸ್ಸಿನಲ್ಲಿ ಉಳಿಯುತ್ತದೇ ವಿನಃ ಬೇರೇನೂ ನೆನಪಿಗೆ ಬರುವುದಿಲ್ಲ, ಕ್ಯಾಮೆರಾಮನ್ ತರಹ ಛೇಪ್ ಎನಿಸಿಕೊಳ್ಳುವ ಮತ್ತೊಬ್ಬ ತಂತ್ರಜ್ಞನೆಂದರೆ ಸಂಕಲನಕಾರ. ಒಂದೇ ಒಂದು ಸಮಾಧಾನದ ಸಂಗತಿಯೆಂದರೆ ಇದು ಯಾವುದೇ ಪರಭಾಷಾ ಚಿತ್ರದ ನಕಲಲ್ಲ.

ಇಂತಹ ಚಿತ್ರಕ್ಕೆ ದಿಟ್ಟೆದೆಯಿಂದ ಕೋಟ್ಯಂತರ ರೂಪಾಯಿಯನ್ನು ಸುರಿದ ನಿರ್ಮಾಪಕ ಸಾ.ರಾ. ಗೋವಿಂದುರನ್ನು ಮೆಚ್ಚಲೇಬೇಕು. ತನ್ನ ಗುರು ಸಾ.ರಾ. ಗೋವಿಂದು ಅವರಿಗೆ ಈ ಚಿತ್ರವನ್ನು ಗುರುದಕ್ಷಿಣೆಯಾಗಿ ನಿರ್ದೇಶಿಸಿದ್ದೇನೆ ಎಂದು ಹೇಳಿರುವ ಶಿಷ್ಯ ರಮೇಶ್ ಕತೆಯನ್ನು ಆಯ್ಕೆ ಮಾಡುವಲ್ಲಿ ಎಡವಿದ್ದು ವಿಷಾದನೀಯ.



ಈ ಸಂಭಾಷಣೆ
ಹರಿಪ್ರಿಯಾ, ಸಂದೇಶ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, B...
Fax : 26604536, E-mail :lankesh70@rediffmail.com, Printed at Raih...